# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 31 ಬುಧವಾರ 2025

ಸಂಪುಟ: 46 | ಸಂಚಿಕೆ: 253 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮೈಸೂರು ಮಿತ್ರ
ಬುಧವಾರ 31 ಡಿಸೆಂಬರ್ 2025

# 'ಜ್ಯೋತಿ ಸಂಜೀವಿನಿ' ಆರೋಗ್ಯ ವಿಮಾ ಯೋಜನೆ ಅನುದಾನಿತ ಶಾಲಾ ಶಿಕ್ಷಕರಿಗೂ ವಿಸ್ತರಿಸಲು ಮಾಜಿ ಸಚಿವ ಸಾ.ರಾ.ಮಹೇಶ್ ಆಗ್ರಹ

● ಸರ್ಕಾರದ ಖಜಾನೆ ಖಾಲಿ... ಖಾಲಿ...; ಹಾಗಾಗಿ ನಿವೃತ್ತಿ ವಯಸ್ಸು ಏರಿಕೆ ● ದಿನಬಳಕೆ ವಸ್ತುಗಳ ಬೆಲೆ ಏರಿಕೆ: ಜನ ತಕ್ಕ ಪಾಠ ಕಲಿಸುವ ದಿನ ದೂರವಿಲ್ಲ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಬಿಡುಗಡೆಗೊಳಿಸಿದರು.

ಮೈಸೂರು, ಡಿ.30(ಎಂಕೆ)– ಕರ್ನಾಟಕ ಸರ್ಕಾರಿ ನೌಕರರಿಗೆ ಲಭ್ಯವಿರುವ 'ಜ್ಯೋತಿ ಸಂಜೀವಿನಿ' ಆರೋಗ್ಯ ವಿಮಾ ಯೋಜನೆಯನ್ನು ಅನುದಾನಿತ ಶಾಲಾ ಶಿಕ್ಷಕರಿಗೂ ವಿಸ್ತರಿಸಬೇಕು. ಈ ವಿಷಯದಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಅನುದಾನಿತ ಶಾಲಾ ಶಿಕ್ಷಕರು ಜ್ಯೋತಿ ಸಂಜೀವಿನಿ ಕೇಳಿದ್ದೀರಿ. ಆದರೆ ಸರ್ಕಾರ ಇನ್ನೂ ಮಾಡಿಲ್ಲ. ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ ತೀವ್ರ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಸರ್ಕಾರದ ಖಜಾನೆಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ನಿವೃತ್ತಿ ನಂತರ ಕೊಡಲು ಹಣವಿಲ್ಲವೆಂಬ ಕಾರಣಕ್ಕಾಗಿಯೇ ನಿವೃತ್ತಿ ವಯಸ್ಸನ್ನು ಹೆಚ್ಚಳ ಮಾಡಲಾಗಿದೆ. ಸರ್ಕಾರದ ಸಾಲ ಮಾತ್ರ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದ್ದು, ರಾಜ್ಯದ ಪ್ರತೀ ಪ್ರಜೆಯ ಮೇಲೂ 90 ಸಾವಿರ ಸಾಲದ ಹೊರೆಯನ್ನು ರಾಜ್ಯ ಸರ್ಕಾರ ಹೊರಿಸಿದೆ. ಆಡಳಿತ ವ್ಯವಸ್ಥೆ ಯಾವ ಕಡೆ ಸಾಗುತ್ತಿದೆ ಎಂಬುದನ್ನು ಜನತೆ ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು.

ರಾಜ್ಯ ಸರ್ಕಾರ ಎಲ್ಲಾ ದಿನ ಬಳಕೆ ಪದಾರ್ಥಗಳ ಮೇಲೂ ತೆರಿಗೆ ಹಾಕುವ ಮೂಲಕ ಜನಸಾಮಾನ್ಯರಿಗೆ ಹೊರೆ ಹೊರಿಸಿದೆ. ಕಲ್ಯಾಣ ಕಾರ್ಯಕ್ರಮಗಳಿಗೆ ಹಣವಿಲ್ಲ. ಹೀಗಾಗಿ ನೆರೆಯ ರಾಷ್ಟ್ರಗಳಲ್ಲಿ ಈಚೆಗೆ ಸಂಭವಿಸಿದಂತೆ ಇಲ್ಲಿಯೂ ಜನರು ದಂಗೆಯೇಳುವ ದಿನ ದೂರವಿಲ್ಲ ಎಂದು ಭವಿಷ್ಯ ನುಡಿದರು.

**2028ಕ್ಕೆ ಸಮ್ಮಿಶ್ರ ಸರ್ಕಾರ..!:** ವೋಟ್ ಬ್ಯಾಂಕ್ ರಾಜಕಾರಣದಿಂದಾಗಿ ರಾಜ್ಯದ ಹಣಕಾಸು ಪರಿಸ್ಥಿತಿ ತೀರಾ ಹದಗೆಟ್ಟಿದೆ. ಹೀಗಾಗಿ 2028ಕ್ಕೆ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬರುವ ಸಾಧ್ಯತೆ ಇದ್ದು, ಹೆಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಒಂದಷ್ಟು ಜನಪರ ಕೆಲಸಗಳನ್ನು ಮಾಡಲಾಗುವುದು. ಹಾಗೆಯೇ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಬೇಡಿಕೆ ಈಡೇರಿಸುವುದಾಗಿ ಭರವಸೆ ನೀಡಿದರು. ಕರ್ನಾಟಕ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ರಾಜಗೋಪಾಲ್, ಕಾರ್ಯದರ್ಶಿ ರಾಜು, ಜಿಲ್ಲಾಧ್ಯಕ್ಷ ಟಿ.ಪಿ. ನಂದೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಕೆ.ಆರ್.ಮಹಾದೇವಸ್ವಾಮಿ, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ನಾಗರಾಜಪ್ಪ ಮುಖ್ಯ ಶಿಕ್ಷಕ ಪರಮೇಶ್ ಮತ್ತಿತರರಿದ್ದರು.

### ಎಸ್ಐಟಿ... ಅಲ್ಲ... ಅದು ಎಸ್ಎಸ್ಐಟಿ...!

"ದಕ್ಷ ಮತ್ತು ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳನ್ನು ಲೋಕಾಯುಕ್ತಕ್ಕೆ, ಎಸ್ಎಸ್ಐಟಿ(ಸಿದ್ದರಾಮಯ್ಯ ಶಿವಕುಮಾರರವರ ಇನ್ವೆಸ್ಟಿಗೇಷನ್ ಟೀಂ)ಗೆ ನಿಯೋಜಿಸಲಾಗಿದೆ. ಸಿವಿಲ್ ಪ್ರಕರಣವನ್ನು ಎಸ್ಎಸ್ಐಟಿಗೆ ಕೊಡುತ್ತಿರುವುದೇ ನಮ್ಮ ದುರ್ದೈವ. **–ಸಾ.ರಾ.ಮಹೇಶ್, ಮಾಜಿ ಸಚಿವ**

## ಕೌನ್ಸಿಲಿಂಗ್ ಮೂಲಕ ವರ್ಗಾವಣೆಗೆ ಕ್ರಮ ಕೈಗೊಂಡರೆ ಪೊಲೀಸ್ ಇಲಾಖೆಯಲ್ಲೂ ದಕ್ಷ, ಪ್ರಾಮಾಣಿಕರಿಗೆ ಅವಕಾಶ ಸಿಗಬಹುದು

● ಮಾಜಿ ಸಚಿವ ಸಾ.ರಾ.ಮಹೇಶ್ ಅಭಿಮತ
● ಕಾಂಗ್ರೆಸ್ ಸರ್ಕಾರ ಪೊಲೀಸ್ ಇಲಾಖೆ ಹದಗೆಡಿಸಿದೆ

ಮೈಸೂರು, ಡಿ.30(ಎಂಕೆ)– ಶಿಕ್ಷಣ ಇಲಾಖೆ ಮತ್ತು ವೈದ್ಯಕೀಯ ಇಲಾಖೆಯಲ್ಲಿ ಕೌನ್ಸಿಲಿಂಗ್ ಮೂಲಕ ವರ್ಗಾವಣೆ ಕ್ರಮ ಕೈಗೊಳ್ಳುವಂತೆಯೇ ಪೊಲೀಸ್ ಇಲಾಖೆಯಲ್ಲಿಯೂ ಮಾಡಿದರೆ, ಆಯಕಟ್ಟಿನ ಸ್ಥಳಗಳಿಗೆ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳನ್ನು ನೇಮಕ ಮಾಡಲು ಸಾಧ್ಯವಾಗುತ್ತದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಸಲಹೆ ನೀಡಿದರು.

ಮೈಸೂರಿನಲ್ಲಿ ಮಂಗಳವಾರ ಮಾಧ್ಯಮಗಳಿಗೆ ಹುಣಸೂರಿನ ಜ್ಯುವೆಲ್ಲರಿ ದರೋಡೆ ಪ್ರಕರಣ ಕುರಿತು ಪ್ರತಿಕ್ರಿಯೆ ನೀಡಿದ ಅವರು, ರಾಜ್ಯದಲ್ಲಿ ಪೊಲೀಸ್ ವ್ಯವಸ್ಥೆ ಹದಗೆಟ್ಟಿದೆ. ಆಯಕಟ್ಟಿನ ಸ್ಥಳಗಳಿಗೆ ಪ್ರಭಾವಿಗಳ ಅಪೇಕ್ಷೆ, ಸ್ವಜಾತಿ ಪಕ್ಷಪಾತದ ಪೋಸ್ಟಿಂಗ್ ನೀಡುತ್ತಿರುವುದರಿಂದಲೇ ರಕ್ಷಣೆ ಮಾಡಬೇಕಾದವರಿಂದಲೇ ರಾಬರಿಯಾಗುತ್ತಿದೆ ಎಂದರು. ಆಯಕಟ್ಟಿನ ಸ್ಥಳಗಳಿಗೆ ದಕ್ಷ ಮತ್ತು ಪ್ರಾಮಾಣಿಕ ಅಧಿಕಾರಿಗಳ ಪೋಸ್ಟಿಂಗ್ ಅನ್ನು ಎಲ್ಲಿವರೆಗೆ ಮಾಡುವುದಿಲ್ಲವೋ ಅಲ್ಲಿವರೆಗೂ ಸಮಸ್ಯೆ ಬಗೆಹರಿಯುವುದಿಲ್ಲ. ಆದ್ದರಿಂದ ಶಿಕ್ಷಕರು, ವೈದ್ಯರಿಗೆ ಕೌನ್ಸಿಲಿಂಗ್ ಮಾಡಿ ವರ್ಗಾವಣೆ ಮಾಡುವಂತೆ ಪೊಲೀಸ್ ಇಲಾಖೆಯಲ್ಲೂ ಕೌನ್ಸಿಲಿಂಗ್ ನಡೆಸಲು ದಕ್ಷ, ಪ್ರಾಮಾಣಿಕ ಹಾಗೂ ಕೆಲಸ ಮಾಡುವವರಿಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿದರು.

**ಪಕ್ಷಕ್ಕಿಂತ ಯಾರು ದೊಡ್ಡವರಲ್ಲ:** ಚಾಮುಂಡೇಶ್ವರಿ ಕ್ಷೇತ್ರದ ಟಿಕೆಟ್ ವಿಚಾರ ಕುರಿತ ತಮ್ಮ ಹೇಳಿಕೆ ಸ್ಪಷ್ಟನೆ ನೀಡಿದ ಅವರು, ನಾನಂತೂ(ಚಾಮುಂಡೇಶ್ವರಿ ಕ್ಷೇತ್ರಕ್ಕೆ) ಆಕಾಂಕ್ಷಿಯಲ್ಲ. ಎಂತಹ ಕಷ್ಟ ಬಂದರೂ ಪಕ್ಷ ಬಿಡದೆ, ಪಕ್ಷದ ಜೊತೆಗೆ, ನಮ್ಮ ನಾಯಕರಾದ ಹೆಚ್.ಡಿ.ಕುಮಾರಸ್ವಾಮಿ ಅವರ ಜೊತೆಗೆ ನಿಲ್ಲುವವರಿಗೆ ಅವಕಾಶ ನೀಡುವಂತೆ ಸಲಹೆ ನೀಡುತ್ತೇನೆ. ನನ್ನನ್ನು ಸೇರಿದಂತೆ ಪಕ್ಷಕ್ಕಿಂತ ಯಾವ ವ್ಯಕ್ತಿಯೂ ದೊಡ್ಡವರೂ ಅಲ್ಲ. ಮುಖ್ಯವೂ ಅಲ್ಲ ಎಂದು ಸ್ಪಷ್ಟಪಡಿಸಿದರು.

## ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಕುವೆಂಪು, ಸಿ.ಅಶ್ವಥ್ ಜನ್ಮ ದಿನಾಚರಣೆ



ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ರಾಷ್ಟ್ರಕವಿ ಕುವೆಂಪು ಹಾಗೂ ಸುಗಮ ಸಂಗೀತದ ದಿಗ್ಗಜ ಗಾಯಕ ಸಿ.ಅಶ್ವಥ್ ಅವರ ಜನ್ಮ ದಿನಾಚರಣೆ ಆಯೋಜಿಸಲಾಗಿತ್ತು.

ಮೈಸೂರು, ಡಿ.30– ಮೈಸೂರು ದಸರಾ ವಸ್ತುಪ್ರದರ್ಶನ ಸಾಂಸ್ಕೃತಿಕ ಸಮಿತಿ ವತಿಯಿಂದ ರಾಷ್ಟ್ರಕವಿ ಕುವೆಂಪು ಅವರ ಜಯಂತಿ ಮತ್ತು ಗಾನಗಂಧರ್ವ ಸಿ.ಅಶ್ವಥ್ ಅವರ ಜನ್ಮದಿನಾಚರಣೆ ಕಾರ್ಯಕ್ರಮವನ್ನು ವಸ್ತು ಪ್ರದರ್ಶನದ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಸ್ಮರಣೀಯರ ಭಾವ ಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ಚಲನಚಿತ್ರ ನಿರ್ಮಾಪಕ ಸಂದೇಶ್ ಮಾತನಾಡಿ, ಕನ್ನಡ ಭಾಷೆಗೆ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯವನ್ನು ಯುವ ಸಮುದಾಯ ಓದಬೇಕು. ಅದರಲ್ಲೂ ಶ್ರೀರಾಮಾಯಣ ದರ್ಶನಂ ಮಹಾಕಾವ್ಯವನ್ನು ಅರ್ಥೈಸಿಕೊಳ್ಳಬೇಕು. ಕುವೆಂಪು ಸಾಹಿತ್ಯವನ್ನು ಅರಿಯುವ ಮೂಲಕ ವಿಶ್ವಮಾನವರಾಗಿ ಸಾಮರಸ್ಯದ ಸಮಾಜ ನಿರ್ಮಿಸಬೇಕು. ಕನ್ನಡದ ಕಣ್ಮಣಿ ಕುವೆಂಪು ಅವರಿಗೆ 'ಭಾರತರತ್ನ' ಗೌರವ ಸಂದಬೇಕು ಎಂಬುದು ಕೋಟ್ಯಾಂತರ ಕನ್ನಡಿಗರ ಮಹದಾಸೆಯಾಗಿದೆ. ಈ ಮೂಲಕ ಕನ್ನಡಿಗರ ಅಸ್ಮಿತೆ ವಿಶ್ವದೆಲ್ಲೆಡೆ ಪ್ರಜ್ವಲಿಸಬೇಕೆಂಬುದು ಎಲ್ಲರ ಆಶಯವಾಗಿದೆ ಎಂದರು.

ಕನ್ನಡದ ಮೇರು ಕವಿಗಳ ಸುಂದರ ಕಾವ್ಯಗಳಿಗೆ ರಾಗ ಸಂಯೋಜಿಸಿ ತಮ್ಮ ಕಂಚಿನ ಕಂಠದಲ್ಲಿ ಕನ್ನಡಿಗರ ಹೃದಯಕ್ಕೆ ಮುಟ್ಟಿಸಿದ ಸಿ.ಅಶ್ವಥ್ ಅವರು ಅಜರಾಮರವಾಗಿದ್ದಾರೆ. ಅವರ ವಿಶಿಷ್ಟ ಧ್ವನಿಯಲ್ಲಿ ಮೂಡಿಬಂದಿರುವ ಅದೆಷ್ಟೋ ಭಾವಗೀತೆಗಳು ಜನಮಾನಸದಲ್ಲಿ ಹಸಿರಾಗಿವೆ. ಸುಗಮ ಸಂಗೀತ ಲೋಕವನ್ನು ಶ್ರೀಮಂತಗೊಳಿಸಿರುವ ದಿಗ್ಗಜ ಸಿ.ಅಶ್ವಥ್ ಅವರು ಸಂಗೀತಗಾರರಿಗೆ ಸ್ಫೂರ್ತಿಯಾಗಿದ್ದಾರೆ. ರಾಷ್ಟ್ರಕವಿ ಕುವೆಂಪು ಹಾಗೂ ಸಿ.ಅಶ್ವಥ್ ಅವರ ಕೊಡುಗೆ ಕನ್ನಡಕ್ಕೆ ದೊಡ್ಡ ಆಸ್ತಿಯಾಗಿದೆ ಎಂದು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ರಘುರಾಜೇ ಅರಸ್, ನಿರೂಪಕ ಅಜಯ್ ಶಾಸ್ತ್ರಿ, ಜಯ ಕರ್ನಾಟಕ ಸಂಘಟನೆ ಜಿಲ್ಲಾಧ್ಯಕ್ಷ ಶ್ರೀನಿವಾಸ್, ಸಾಂಸ್ಕೃತಿಕ ಸಮಿತಿ ಕಾರ್ಯಾಧ್ಯಕ್ಷ ಪ್ರಕಾಶ್, ಉಪಾಧ್ಯಕ್ಷರಾದ ರಂಗಸ್ವಾಮಿ ಪಾಪು, ಮೆಲ್ಲಹಳ್ಳಿ ರಾಜೇಶ್ ಸಿ.ಗೌಡ, ಶಿವಲಿಂಗಯ್ಯ, ನಾಸೀರ್ ಖಾನ್, ಮಹಿಳಾ ಅಧ್ಯಕ್ಷೆ ಭವ್ಯ ಅಭಿಷೇಕ್, ಶ್ರೀಕಾಂತ್, ಶಿವರುದ್ರ ಯೋಗೀಶ್, ಒಂಟಿಕೊಪ್ಪಲು ಗುರುರಾಜ್, ಸುಬ್ರಹ್ಮಣ್ಯ ಮತ್ತಿತರರು ಉಪಸ್ಥಿತರಿದ್ದರು.

## ನಾಗರಿಕ ಸೇವಾ ತರಬೇತಿಗೆ ಆಹ್ವಾನ

ಮೈಸೂರು,ಡಿ.30–ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಗ್ರೇಸ್ ಐಎಎಸ್ ತರಬೇತಿ ಸಂಸ್ಥೆಯ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಐಎಎಸ್, ಐಪಿಎಸ್, ಕೆಎಎಸ್ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಪೂರ್ಣ ಉಚಿತವಾಗಿ ಪರಿಣಾಮಕಾರಿಯಾಗಿ ನುರಿತ ತರಬೇತುದಾರರಿಂದ ನೇರ ತರಗತಿ ಹಾಗೂ ಆನ್ ಲೈನ್‌ನಲ್ಲಿ ಸಹ ತರಬೇತಿ ನೀಡಲಾಗುವುದು. ಆಸಕ್ತ ವಿಪ್ರವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ಹೆಸರನ್ನು ನೋಂದಾಯಿಸಲು ಬಿ.ಕೆ.ರವಿಚಂದ್ರ ಅವರನ್ನು ದೂರವಾಣಿ 7899678279 ಸಂಖ್ಯೆ ಮೂಲಕ ದಿನಾಂಕ 10.1.2026ರೊಳಗಾಗಿ ಸಂಪರ್ಕಿಸುವಂತೆ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕೊಡಗಹಳ್ಳಿ ಶ್ರೀ ರಾಮಮಂದಿರದಲ್ಲಿ ವೈಕುಂಠ ಏಕಾದಶಿ



ಮೈಸೂರು, ಡಿ. 30–ಬನ್ನೂರು ಹೋಬಳಿ ಕೊಡಗಹಳ್ಳಿ ಗ್ರಾಮದ ಇತಿಹಾಸ ಪ್ರಸಿದ್ಧಿ ಶ್ರೀ ಕೋದಂಡ ರಾಮಮಂದಿರದಲ್ಲಿ ವೈಕುಂಠ ಏಕಾದಶಿ ಪ್ರಯುಕ್ತ ದೇವರಿಗೆ ವಿಶೇಷ ಅಭಿಷೇಕ, ಅಷ್ಟೋತ್ತರ ಹೂವಿನ ಅಲಂಕಾರ, ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರ, ಮಹಾಮಂಗಳಾರತಿ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿತ್ತು.

ಶ್ರೀರಾಮ ದೇವಸ್ಥಾನಕ್ಕೆ ಸುತ್ತಮುತ್ತಲಿನ ಗ್ರಾಮದ ಸಾವಿರಾರು ಭಕ್ತರು ಆಗಮಿಸಿ ದೇವರ ಕೃಪೆಗೆ ಪಾತ್ರರಾದರು.

ಗ್ರಾಮದ ಯಜಮಾನರಾದ ಪಟೇಲ್ ಕೆ.ಜೆ.ಜವರಪ್ಪ, ಸಂತೋಷ್, ಕೆ.ಎಂ.ಮಂಜುನಾಥ್, ಕೆ.ಜೆ.ಮುನಿಕುಮಾರ್, ಕೆ.ಜೆ.ನಾಗರಾಜು, ಕ್ಯಾತಯ್ಯನ ಮಂಜು, ರಾಣಿ ಜಯರಾಂ, ಚನ್ನಪ್ಪ, ಪೂಜಾ ಲೋಕೇಶ್, ಧನಂಜಯ, ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ವಾನ್ ಶ್ರೀನಿವಾಸ ದೀಕ್ಷಿತ್, ಸುಮ ಶ್ರೀನಿವಾಸ್, ಕುಮಾರಿ ಸಿರಿ ದೇವಸ್ಥಾನದ ಸೇವಾಕಾರ್ಯಗಳಲ್ಲಿ ಭಾಗವಹಿಸಿದ್ದರು. ವಿಶೇಷವಾಗಿ ವಿದ್ವಾನ್ ತಾಂಡವ ಮೂರ್ತಿ, ಬಸವಣ್ಣ, ರಾಜು, ಕೃಷ್ಣ, ಗುರು ಅವರಿಂದ ಭಕ್ತಿಗೀತೆಗಳನ್ನು ಏರ್ಪಡಿಸಲಾಗಿತ್ತು.

## ಪರಿಷತ್‌ನ ಪದವೀಧರ, ಶಿಕ್ಷಕರ ಕ್ಷೇತ್ರಗಳಿಗೆ ಕಾಂಗ್ರೆಸ್ ಅಭ್ಯರ್ಥಿಗಳ ಘೋಷಣೆ

ಬೆಂಗಳೂರು,ಡಿ.30(ಕೆಎಂಶಿ)–ಅಧಿಕಾರ ಹಂಚಿಕೆ ಗೊಂದಲದ ನಡುವೆಯೇ ಕರ್ನಾಟಕ ವಿಧಾನ ಪರಿಷತ್ತಿನ ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಗೆ ನಡೆಯುವ ಚುನಾವಣೆಗೆ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ನವೆಂಬರ್ 2026ರಲ್ಲಿ ಪದವೀಧರ ಮತ್ತು ಶಿಕ್ಷಕರ ತಲಾ 2 ಕ್ಷೇತ್ರಗಳಿಗೆ ನಡೆಯುವ ಚುನಾವಣೆಗೆ 11 ತಿಂಗಳ ಮುನ್ನವೇ ತನ್ನ ಅಭ್ಯರ್ಥಿಗಳನ್ನು ಘೋಷಿಸಿದೆ. ಪಶ್ಚಿಮ ಹಾಗೂ ಆಗ್ನೇಯ ಪದವೀಧರ ಕ್ಷೇತ್ರಗಳಿಗೆ ಅನುಕ್ರಮವಾಗಿ ಮೋಹನ್ ಲಿಂಬೀಕಾಯಿ, ಶಶಿ ಹುಲಿಕುಂಟೆಮಠ ಹೆಸರುಗಳನ್ನು ಅಂತಿಮಗೊಳಿಸಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಕಟಿಸಿದ್ದಾರೆ. ಬೆಂಗಳೂರು ಹಾಗೂ ಈಶಾನ್ಯ ಶಿಕ್ಷಕರ ಕ್ಷೇತ್ರಗಳಿಗೆ ಅನುಕ್ರಮವಾಗಿ ಪುಟ್ಟಣ್ಣ ಮತ್ತು ಶರಣಪ್ಪ ಮಟ್ಟೂರು ಅವರನ್ನು ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡಲಾಗಿದೆ.

### ರಾಷ್ಟ್ರಕವಿ ಕುವೆಂಪು ಜಯಂತಿ...



ಮೈಸೂರು ವಿಜಯನಗರ 3ನೇ ಹಂತದ ಡಿ–ಬ್ಲಾಕ್‌ನ ಉದ್ಯಾನವನದಲ್ಲಿ ಕುವೆಂಪು ವಿಚಾರ ವೇದಿಕೆ ವತಿಯಿಂದ ರಾಷ್ಟ್ರಕವಿ ಕುವೆಂಪು ಜಯಂತಿ ಆಚರಿಸಲಾಯಿತು. ಈ ವೇಳೆ ಹಿರಿಯ ಸಾಹಿತಿ ಪ್ರೊ.ರಾಗೌ, ಕೃಷಿ ವಿಜ್ಞಾನಿ ವಸಂತಕುಮಾರ್, ಪ್ರೊ.ವೆಂಕಟೇಶ್, ಶಂಬಯ್ಯ, ನಂಜುಂಡಸ್ವಾಮಿ, ಡಾ.ಬೆಟ್ಟೇಗೌಡ, ರವಿಕುಮಾರ್ ಬೆಕ್ಯಾ, ಸೋಮು, ರಘು, ಮಹಾಲಿಂಗಪ್ಪ, ಪ್ರಶಾಂತ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾದ ಮಹದೇಶ್, ಡಾ.ಶಿಲ್ಪಾ, ಡಾ.ನಟರಾಜ್ ಶಿವಣ್ಣ, ಪವನ್ ಇನ್ನಿತರರಿದ್ದರು.

## ವಿಕಲಚೇತನರ ಬಸ್ ಪಾಸ್ ನವೀಕರಣಕ್ಕೆ ಅರ್ಜಿ ಆಹ್ವಾನ

ಮೈಸೂರು,ಡಿ.30– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ 2025ನೇ ಸಾಲಿನಲ್ಲಿ ವಿತರಿಸಿರುವ ಪಾಸ್‌ಗಳನ್ನು 2026 ಫೆಬ್ರವರಿ 28 ರವರೆಗೆ ಮಾನ್ಯತೆಯನ್ನು ಮಾಡಲಾಗಿದ್ದು, ವಿಕಲಚೇತನರ ರಿಯಾಯಿತಿ ಬಸ್ ಪಾಸ್ ಹೊಂದಿರುವ ಪಾಸ್ದಾರರು ರಿಯಾಯಿತಿ ಬಸ್ ಪಾಸ್ ಅನ್ನು ಜನವರಿ 8ರಿಂದ ಫೆಬ್ರವರಿ 28 ರವರೆಗೆ ಕೆ.ಆರ್.ನಗರ, ಪಿರಿಯಾಪಟ್ಟಣ, ಹುಣಸೂರು, ಹೆಚ್.ಡಿ. ಕೋಟೆ, ಬಸ್ ನಿಲ್ದಾಣದಲ್ಲಿ ಅವರ ವ್ಯಾಪ್ತಿಯ ಪಾಸ್‌ಗಳನ್ನು ನವೀಕರಿಸಲಾಗುವುದು.


2026ನೇ ಸಾಲಿನ ಪಾಸ್ ನವೀಕರಣ ಮಾಡಿಸಲು ಇಚ್ಛಿಸುವ ಅಭ್ಯರ್ಥಿಗಳು ವಿಕಲಚೇತನರ ಸೇವಾ ಸಿಂಧು ಪೋರ್ಟಲ್ https://sevasindhuservices.karnataka.gov.inನ ಮೂಲಕ ತಮ್ಮ ವಿವರಗಳೊಂದಿಗೆ ಅರ್ಜಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಅರ್ಜಿಯನ್ನು ಸಲ್ಲಿಸಿದ ನಂತರ ಪ್ರಿಂಟ್‌ನೊಂದಿಗೆ ಮೂಲ ಯುಡಿಐಡಿ ಕಾರ್ಡ್ ಅನ್ನು ಪರಿಶೀಲನೆಗೆ ತೋರಿಸಿ ಜೊತೆಗೆ ಫಲಾನುಭವಿಗಳು ರೂ. 660 ಗಳನ್ನು ನಗದು ರೂಪದಲ್ಲಿ ಪಾವತಿಸಿ 2025ರ ಪಾಸ್‌ನೊಂದಿಗೆ ಒಂದು ಪಾಸ್‌ಪೋರ್ಟ್ ಸೈಜ್ ಮತ್ತು ಒಂದು ಸ್ಟ್ಯಾಂಪ್ ಸೈಜ್ ಭಾವಚಿತ್ರವನ್ನು ಸಲ್ಲಿಸಿ ರಿಯಾಯಿತಿ ಪಾಸ್‌ಗಳನ್ನು ನವೀಕರಿಸಿಕೊಳ್ಳಬಹುದು ಎಂದು ಸಾರಿಗೆ ನಿಗಮದ ಮೈಸೂರು ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಭಿನಂದನೆ...



ಎಂಸಿಡಿಸಿಸಿ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ದೊಡ್ಡಸ್ವಾಮಿಗೌಡ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಶಾಸಕ ಡಿ.ರವಿಶಂಕರ್, ಬ್ಯಾಂಕಿನ ಮಾಜಿ ನಿರ್ದೇಶಕ ಎಸ್.ಆರ್.ರವಿ, ಕೆ.ಆರ್.ನಗರದ ಮಾದೇವ, ಶ್ರೀನಿವಾಸನಾಯಕ, ಪಂಚಮುಖಿ ಯುವಕರ ಬಳಗದ ಕುರುಗೇರಿಯ ದಿನೇಶ್, ನಾಗೇಶ್, ಅರುಣ್, ಮಾದೇವ, ಹರೀಶ್‌ಗೌಡ, ರಾಜಣ್ಣ ಮತ್ತಿತರು ಉಪಸ್ಥಿತರಿದ್ದರು.

### ರಾಷ್ಟ್ರಕವಿ ಕುವೆಂಪು ಜಯಂತಿ...




ರಾಷ್ಟ್ರಕವಿ ಕುವೆಂಪು ಜಯಂತಿ ಅಂಗವಾಗಿ ಕುವೆಂಪುನಗರದಲ್ಲಿರುವ ಅವರ ಪ್ರತಿಮೆಗೆ ಬಿಜೆಪಿ ಮುಖಂಡ, ಚಲನಚಿತ್ರ ನಾಯಕ ನಟ ಡೈರಿಂಗ್ ಸ್ಟಾರ್ ಎಸ್.ಜಯಪ್ರಕಾಶ್ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಮುಖಂಡರಾದ ಹನುಮಂತೇಗೌಡ, ಲೋಕೇಶ್, ನೇಹ, ಪುಷ್ಪ ಮಹೇಶ್‌ಗೌಡ, ಸಂಜಯ್, ಲತಾ, ಮಂಜುನಾಥ್, ಯೋಗೇಶ್, ಮಹೇಶ್ ಇನ್ನಿತರರು ಉಪಸ್ಥಿತರಿದ್ದರು.


## ನಿಧನ

### ಎಂ.ರಾಣೋಜಿರಾವ್ ಸೂರ್ಯವಂಶೆ



ಮೈಸೂರು, ಡಿ. 30–ಮೈಸೂರು ಹೆಬ್ಬಾಳಿನ ಲಕ್ಷ್ಮೀಕಾಂತ ನಗರದ ನಿವಾಸಿ ಎಂ.ರಾಣೋಜಿರಾವ್ ಸೂರ್ಯವಂಶೆ (70) ಮಂಗಳವಾರ ಬೆಳಗ್ಗೆ ನಿಧನರಾದರು. ಮೃತರು ಸಹೋದರ ಎಂ.ಲಕ್ಷ್ಮೀನಾರಾಯಣರಾವ್, ಸಹೋದರಿಯರಾದ ಎಂ.ಯಶೋಧಬಾಯಿ ಮತ್ತು ಎಂ.ರೇಖಾಬಾಯಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಭಾಗ್ಯಲಕ್ಷ್ಮಿ



ಮೈಸೂರಿನ ರಾಮಕೃಷ್ಣನಗರದ ನಿವಾಸಿ ಭಾಗ್ಯಲಕ್ಷ್ಮಿ (64) ಸೋಮವಾರ ನಿಧನರಾದರು. ಮೃತರು ಇಬ್ಬರು ಸಹೋದರರು, ಇಬ್ಬರು ಸಹೋದರಿಯರು, ಸ್ನೇಹಿತರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

31.12.2025 ಬುಧವಾರ, ಮಳೆ ನಕ್ಷತ್ರ: ಮೂಲ, 29.12.2025 ರಿಂದ 10.01.2026
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.

■ **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು:** ಸಾಂಸ್ಕೃತಿಕ–ಕ್ರೀಡಾ ಚಟುವಟಿಕೆಗಳ ಸಮಾರೋಪ, ದಿವ್ಯಾಶೀರ್ವಾದ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ, ಸಮಾರೋಪ ಭಾಷಣ: ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಸುತ್ತೂರು ಎಸ್.ಮಾಲಿನಿ, ಮುಖ್ಯ ಅತಿಥಿಗಳು: ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕಿ ಎಂ.ಪಿ.ನಾಗಮ್ಮ, ಕಿರುತೆರೆ ಕಲಾವಿದ ಹೆಚ್. ಅಶ್ವಿನ್, ಅಂತಾರಾಷ್ಟ್ರೀಯ ಕ್ರೀಡಾಪಟು ಕುಮಾರಿ ವೀಣಾ ಕುರುಬೂರು, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಸಾಧನ ಮಂದಿರ, ಮೈಸೂರು :** ವಿಶೇಷ ತರಬೇತಿ ಶಿಬಿರ ಹಾಗೂ ಸರಸ್ವತಿ ಪೂಜೆ, ಸಾನ್ನಿಧ್ಯ: ಪೂಜ್ಯ ಸ್ವಾಮಿ ಹಂಸಾನಂದ, ಸಂಜೆ 4 ರಿಂದ ಶ್ರೀ ವೆಂಕಟೇಶ್ವರ ದೇವಸ್ಥಾನ, ಸಿದ್ಧಾರ್ಥನಗರ; ಸಂಜೆ 5.15 ರಿಂದ ಬಲಮುರಿ ವಿನಾಯಕ ದೇವಸ್ಥಾನ, ಸಿದ್ಧಾರ್ಥ ಬಡಾವಣೆ, ಸಂಜೆ 6.30 ರಿಂದ ಗೀತಾ ಶಿಶು ಶಿಕ್ಷಣ ಸಂಘ, ಸಿದ್ಧಾರ್ಥ ಬಡಾವಣೆ.

■ **ಶ್ರೀ ನಟರಾಜ ಬಾಲಕಿಯರ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸಮಾರೋಪ ಭಾಷಣ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕರಾದ ಶ್ರೀಮತಿ ಎಂ.ಪಿ. ನಾಗಮ್ಮ, ಡಾ.ಟಿ.ಸಿ. ಪೂರ್ಣಿಮಾ, ಪ್ರಿನ್ಸಿಪಾಲ್ ಶ್ರೀಮತಿ ವಿ.ಡಿ. ಸುನೀತಾ ರಾಣಿ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಸ್ಥಳ: ಶ್ರೀ ನಟರಾಜ ಕಾಲೇಜು ಆವರಣ, ಸಂಜೆ 4ಕ್ಕೆ.

■ **ವಿದ್ಯಾವರ್ಧಕ ಸಂಯುಕ್ತ ಪದವಿಪೂರ್ವ ಕಾಲೇಜು :** ವಾರ್ಷಿಕೋತ್ಸವ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ಎಂ.ಪಿ. ನಾಗಮ್ಮ, ಉಪಸ್ಥಿತರು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಎಸ್. ಶಿವಲಿಂಗಯ್ಯ, ಅಬ್ದುಲ್ ಜಮೀಲ್, ಪಿ. ಮಹದೇವಸ್ವಾಮಿ, ಪ್ರಿನ್ಸಿಪಾಲ್ ಕೆ.ಎಂ. ಸುರೇಶ, ಸ್ಥಳ: ಕಾಲೇಜು ರಂಗಮಂಟಪ, ಸಂಜೆ 4ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಚಂದ್ರಶೇಖರ ದಾಮ್ಲೆ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ–ಬಾನುಲಿ ಸರಣಿ, ಪ್ರಸ್ತುತಿ–ಡಾ.ಅಮ್ಮ ಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ:ಗೀತಾ ವೈ ಪುಟ್ಟಿ, ವ್ಯಾಖ್ಯಾನ: ಡಾ.ಮ.ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.05 ಕ್ಯಾನ್ಸರ್ ತಪ್ಪು ತಿಳುವಳಿಕೆ ಈ ಕುರಿತ ಪ್ರಾಯೋಜಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು: ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10 ವೃತ್ತಿ ಮಾರ್ಗದರ್ಶನ ಸಂಶೋಧನೆ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳು ಅಂದರೆ ರಿಸರ್ಚ್ ಅಂಡ್ ಇಂಟಲೆಕ್ಚುಅಲ್ ಪ್ರಾಪರ್ಟಿ ರೈಟ್ಸ್ ಕುರಿತು ಮೈಸೂರಿನ ಜೆ.ಎಸ್.ಎಸ್. ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಅಂಡ್ ರಿಸರ್ಚ್ ಸಂಸ್ಥೆಯ ಐ.ಪಿ.ಆರ್. ಸೆಲ್‌ನ ಡೆಪ್ಯುಟಿ ಡೀನ್ ಡಾ.ವಿ.ಬಾಲಮುರಳೀಧರ ಮತ್ತು ಸಂಶೋಧನಾ ವಿಭಾಗದ ಡೆಪ್ಯುಟಿ ಡೀನ್ ಡಾ.ಚಂದನ್ ಎಸ್. ಅವರೊಂದಿಗಿನ ಮಾತುಕತೆಯ ಎರಡನೇ ಭಾಗ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಎನ್.ಮಂಜುನಾಥ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪಶ್ನೋತ್ತರ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಶಾಂತ ಜಯತೀರ್ಥ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ಚಂದ್ರಶೇಖರನ್ – ಹಾಡುಗಾರಿಕೆ, 4.00 ಮಹಿಳಾರಂಗ, ಮಹಿಳಾ ಸಾಹಿತ್ಯರಂಗ ಮಹಿಳೆಯರ ಪತ್ರಗಳನ್ನಾಧರಿಸಿದ ಸಾಹಿತ್ಯ ಕಾರ್ಯಕ್ರಮ, ಪ್ರಸ್ತುತಿ: ಬಿ.ದಿಗ್ವಿಜಯ್, ಸಹನ ಹಾಗೂ ಕೆ. ನೇತ್ರಾ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರು: ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, 6.50 ಕೃಷಿರಂಗ:ಕೃಷಿಚಕ್ರ ವರ್ಷದ ಕೃಷಿ ಕಾರ್ಯಕ್ರಮಗಳ ಸಿಂಹಾವಲೋಕನ, ಪ್ರಸ್ತುತಿ–ಎನ್. ಕೇಶವಮೂರ್ತಿ ಹಾಗೂ ಆರ್. ಲೋಕೇಶ್ವರಿ, 7.45 ನಕ್ಷತ್ರಲೋಕ–ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ, 8.00 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ಮೈಸೂರು ಆಕಾಶವಾಣಿ ತೊಂಬತ್ತು ನೆನಪುಗಳ ಹೊತ್ತು – ಮಾಲಿಕೆಯಲ್ಲಿ ಭಾಗವಹಿಸುತ್ತಾರೆ, ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕರು ಹಾಗೂ ಪೋವಿಯೆಲ್ ಲ್ಯಾಕೆಡ್ ನೆಹರು ಅಂತಾರಾಷ್ಟ್ರೀಯ ಪುರಸ್ಕಾರ ಪಡೆದ ಅನುವಾದಕರಾದ ಪ್ರೊ. ಹೆಚ್.ಎಸ್. ಹರಿಶಂಕರ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಆಕಾಶವಾಣಿ ಸಂಗೀತ್ ಸಮ್ಮೇಳನ್–2025, ವಿದುಷಿ ಡಾ. ಎನ್.ಜೆ. ನಂದಿನಿ – ಹಾಡುಗಾರಿಕೆ

■ **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಕಲಾ ಸಪ್ತಮಿ ವಾರದ ಕಾರ್ಯಕ್ರಮ, ಹೆಚ್.ಎಲ್. ಶಿವಶಂಕರಸ್ವಾಮಿ ಮತ್ತು ತಂಡದಿಂದ ಲಯ ಲಹರಿ ತಾಳವಾದ್ಯ ಮೇಳ, ಎಲ್.ವಿ. ಮುಕುಂದ್–ಕೊಳಲು, ಅಮೋಘ್ ನಾಡಾದೂರ್–ವಯೋಲಿನ್, ಹೆಚ್.ಎಲ್. ಶಿವಶಂಕರಸ್ವಾಮಿ –ಮೃದಂಗ ಮತ್ತು ಕೊನ್ನಾಕೋಲ್, ಅನುಷ್ ಶೆಟ್ಟಿ–ಇತರೆ ತಾಳವಾದ್ಯ, ವಿ.ಎಸ್. ರಮೇಶ್–ಮೋರ್ಚಿಂಗ್, ಎಸ್. ನಾಗರಾಜ್–ತಬಲ, ಹೆಚ್.ಎಲ್. ಅನಂತಕೃಷ್ಣ– ರಿದಂಪ್ಯಾಡ್, ಎಂ.ನಾರಾಯಣ್–ತವಿಲ್, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6 ರಿಂದ.

■ **ಶ್ರೀ ಮಹಾಜನ ಸಭಾ ಟ್ರಸ್ಟ್ :** ತಿರುಪ್ಪಾವೈ ಪಾರಾಯಣ, ಡಾ. ಎನ್.ಕೆ. ರಾಮಶೇಷನ್ ಅವರಿಂದ ಶ್ರೀ ಗೋದಾದೇವಿ ವಿರಚಿತ ತಿರುಪ್ಪಾವೈ ಪ್ರವಚನ, ಸ್ಥಳ: ಶ್ರೀ ಮಹಾಜನ ಸಭಾ ಟ್ರಸ್ಟ್ ಆವರಣ, ಶ್ರೀ ರಾಮಮಂದಿರ, ಕಾಂತರಾಜ ರಸ್ತೆ, ಕೃಷ್ಣಮೂರ್ತಿಪುರಂ, ಸಂಜೆ 6.30 ರಿಂದ.

**ಸುತ್ತೂರಿನಲ್ಲಿಂದು, ನಂಜನಗೂಡು ತಾಲೂಕು**

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣ ಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.





# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಡಿಸೆಂಬರ್ 31 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 253 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4


# ನಾಯಕತ್ವ ಬದಲಾವಣೆ ಆಗೋದಿದ್ರೆ ಫೆಬ್ರವರಿ ಒಳಗೆ ಆಗಬೇಕು!

■ ಇಲ್ಲದಿದ್ದರೆ ಮುಂದೆ ಸಾಧ್ಯವಿಲ್ಲ: ಡಾ. ಪರಮೇಶ್ವರ್
■ ಆ ಮೇಲೆ ಬಜೆಟ್ ತಯಾರಿ ಆರಂಭವಾಗುತ್ತದೆ

ಬೆಂಗಳೂರು, ಡಿ.30– ನಾಯಕತ್ವದ ವಿಷಯದಲ್ಲಿ ಕಾಂಗ್ರೆಸ್ ಹೈಕಮಾಂಡ್ ಏನನ್ನಾದರೂ ನಿರ್ಧರಿಸಬೇಕಾದರೆ ಫೆಬ್ರವರಿಯಲ್ಲಿ, ಬಜೆಟ್ ಸಿದ್ಧತೆಗೂ ಮೊದಲೇ ಮಾಡಬೇಕು ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಮಂಗಳವಾರ ಹೇಳಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾಯಿಸಬೇಕೇ ಅಥವಾ ಬೇಡವೇ ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಜೆಟ್ ಸಿದ್ಧತೆ ಫೆಬ್ರವರಿಯಲ್ಲಿ ಆರಂಭವಾಗಲಿದೆ. ಅದಕ್ಕಿನ್ನು ಸುಮಾರು ಒಂದು ತಿಂಗಳು ಬಾಕಿ ಇದೆ. ನಾಯಕತ್ವ ಬದಲಾವಣೆ ಬಗ್ಗೆ ಹೈಕಮಾಂಡ್ ಏನನ್ನಾದರೂ ನಿರ್ಧರಿಸಬೇಕಾದರೆ, ಅದಕ್ಕೂ ಮೊದಲೇ ನಿರ್ಧರಿಸಬೇಕು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಯಾರಾದರೂ ಬಜೆಟ್ ಸಿದ್ಧಪಡಿಸಲೇಬೇಕು, ಅಲ್ಲವೇ. ರಾಜ್ಯದ ಜನರಿಗೆ ನಾವು ನೀಡಿದ ಭರವಸೆಯ ಆಧಾರದ ಮೇಲೆ ಬಜೆಟ್ ಮಂಡಿಸಬೇಕು ಎಂದು ಹೇಳಿದರು. ನಾಯಕತ್ವ ಬದಲಾವಣೆಯ ಬಗ್ಗೆ ಊಹಾಪೋಹಗಳ ನಡುವೆಯೂ, ಸಿದ್ದರಾಮಯ್ಯ ಅವರು ಮುಂದಿನ ವರ್ಷ ತಮ್ಮ ದಾಖಲೆಯ 17ನೇ ಬಜೆಟ್ ಮಂಡಿಸುವುದಾಗಿ ಕಳೆದ ತಿಂಗಳು ಹೇಳಿದ್ದಾರೆ. ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ, ಕಳೆದ ಮಾರ್ಚ್‌ನಲ್ಲಿ ತಮ್ಮ 16ನೇ ಬಜೆಟ್ ಮಂಡಿಸಿದ್ದರು. 2026–27ನೇ ಸಾಲಿನ ಬಜೆಟ್ ಮುಂದಿನ ವರ್ಷ ಮಾರ್ಚ್‌ನಲ್ಲಿ ಮಂಡನೆಯಾಗುವ ಸಾಧ್ಯತೆ ಇದೆ.



ಡಾ. ಜಿ.ಪರಮೇಶ್ವರ್

**ನನ್ನ ಮೇಲಿನ ಪ್ರೀತಿಯಿಂದ ಹಾಗೆ ಹೇಳಿದ್ದಾರೆ:** ಇತ್ತೀಚೆಗೆ ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ, 'ಪರಮೇಶ್ವರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡ ಬೇಕೆಂದು ಒತ್ತಾಯಿಸಿ ಕೆಲವರು ಪ್ರತಿಭಟನೆ ನಡೆಸುತ್ತಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಗೃಹ ಸಚಿವರು, 'ಪರಮೇಶ್ವರ ಅವರನ್ನು ಮುಖ್ಯಮಂತ್ರಿ ಯನ್ನಾಗಿ ಮಾಡಬೇಕೆಂದು ಹೇಳುವವರು ನನ್ನ ಮೇಲಿನ ಪ್ರೀತಿಯಿಂದ ಹಾಗೆ ಹೇಳುತ್ತಿದ್ದರು. ಅಂತಹ ಮಾತುಗಳನ್ನು ಹೇಳಬೇಡಿ ಎಂದು ನಾನು ಅವರಿಗೆ ಹೇಗೆ ಹೇಳಲಿ. ಹಾಗೆ ಹೇಳಬೇಕೆಂದು ನೀವು ಸೂಚಿಸುತ್ತಿರುವಂತೆ ತೋರುತ್ತಿದೆ' ಎಂದು ಹೇಳಿದರು.

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯಾದರೆ ಪರಮೇಶ್ವರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡುವಂತೆ ಒತ್ತಾಯಿಸಿ ಕಾಂಗ್ರೆಸ್ ನಾಯಕರ ತಂಡವೊಂದು ದೆಹಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿದೆ ಎಂಬ ವರದಿಗಳ ಕುರಿತು ಮಾತನಾಡಿದ ಅವರು, 'ಕಾಂಗ್ರೆಸ್ ಹೈಕಮಾಂಡ್ ಎಲ್ಲ ಮಾಹಿತಿಯನ್ನು ಹೊಂದಿರುತ್ತದೆ. ಅವರು ಪ್ರಧಾನ ಕಾರ್ಯದರ್ಶಿಯಿಂದ ಮಾಹಿತಿಯನ್ನು ಪಡೆಯುತ್ತಾರೆ. ಅವರು ತಮ್ಮದೇ ಆದ ರೀತಿಯಲ್ಲಿ ಮಾಹಿತಿಯನ್ನು ಸಂಗ್ರಹಿಸುತ್ತಾರೆ. ಏನು ಮತ್ತು ಯಾವಾಗ ನಿರ್ಧರಿಸಬೇಕು ಎಂಬುದು ಅವರಿಗೆ ತಿಳಿದಿದೆ. ನಾಯಕತ್ವವನ್ನು ಬದಲಾಯಿಸಬೇಕೇ ಅಥವಾ ಬೇಡವೇ ಎಂಬುದನ್ನೂ ಅವರೇ ನಿರ್ಧರಿಸುತ್ತಾರೆ' ಎಂದರು. ಈ ಹಿಂದೆ ಕೆಪಿಸಿಸಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಡಾ. ಪರಮೇಶ್ವರ್, ತಾವು ಕೂಡ ಮುಖ್ಯಮಂತ್ರಿ ರೇಸ್‌ನಲ್ಲಿದ್ದೇನೆ ಎಂದು ಕಳೆದ ತಿಂಗಳು ಹೇಳಿದ್ದರು.

ಅಲ್ಲದೆ, ನಾಯಕತ್ವ ಬದಲಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್‌ನೊಳಗೆ 'ದಲಿತ ಮುಖ್ಯಮಂತ್ರಿ' ಕೂಗು ಕೇಳಿಬರುತ್ತಿದ್ದು, ಪರಮೇಶ್ವರ ಅವರ ಹೆಸರು ಮುಂಚೂಣಿಯಲ್ಲಿದೆ. ನಾಯಕತ್ವ ಬದಲಾವಣೆಗಳಿದ್ದಲ್ಲಿ, ಸಿದ್ದರಾಮಯ್ಯ ಅವರ ಬಣವು ಪರಮೇಶ್ವರ ಅಥವಾ ಅವರಲ್ಲಿನ ಇತರ ಹಿರಿಯ ನಾಯಕರನ್ನು ಮುಖ್ಯಮಂತ್ರಿ ಹುದ್ದೆಗೆ ಪರಿಗಣಿಸುವ ಬಗ್ಗೆ ಪಕ್ಷದ ವಲಯದಲ್ಲಿಯೂ ಊಹಾಪೋಹಗಳಿವೆ.

ಜನವರಿ 6 ಅಥವಾ 9ರಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿಯಾಗಲು ಶೇ 200 ರಷ್ಟು ಅವಕಾಶವಿದೆ ಎಂಬ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಅವರ ಹೇಳಿಕೆ ಬಗ್ಗೆ ಕೇಳಿದಾಗ, 'ಇಕ್ಬಾಲ್ ಹುಸೇನ್ ಒಮ್ಮೆ ಹೇಳಿದ್ದು ಅಂತಿಮ. ನಾನು ಅದನ್ನು ಸ್ವೀಕರಿಸುತ್ತೇನೋ ಇಲ್ಲವೋ ಎಂಬುದು ಪ್ರಶ್ನೆಯಲ್ಲ' ಎಂದು ಪರಮೇಶ್ವರ ತಮಾಷೆಯಾಗಿ ಹೇಳಿದರು.

# ಬೆಂಗಳೂರಲ್ಲಿ ಅಕ್ರಮ ವಲಸಿಗರಿಗೆ ಆಶ್ರಯ ನೀಡುವ ಕಾಂಗ್ರೆಸ್ ನಿರ್ಧಾರಕ್ಕೆ ಬಿಜೆಪಿ ಆಕ್ರೋಶ

• ಬಾಂಗ್ಲಾದಿಂದ ಬಂದವರಿಗೆ ಮನೆ ಕಲ್ಪಿಸಲು ಮುಂದಾಗಿರುವುದಕ್ಕೆ ಖಂಡನೆ • ಸಂಕಷ್ಟದಲ್ಲಿರುವ ಬಡ ರೈತರಿಗೆ ಪರಿಹಾರ ಕೇಳಿದರೆ ಕೇಂದ್ರದತ್ತ ಬೊಟ್ಟು ಮಾಡುತ್ತಾರೆ • ಕಾಂಗ್ರೆಸ್ ವರಿಷ್ಠರು, ಕೇರಳದ ತಾಕೀತಿಗೆ ಮಣಿದ ಸರ್ಕಾರಕ್ಕೆ ಜೋಷಿ, ಶೋಭಾ, ವಿಜಯೇಂದ್ರ ಛೀಮಾರಿ

ಬೆಂಗಳೂರು, ಡಿ.30(ಕೆಎಂಶಿ)– ಅಕ್ರಮ ವಲಸಿಗರಿಗೆ ಮನೆಗಳನ್ನು ನೀಡುತ್ತಿರುವ ಬಗ್ಗೆ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಭಾರೀ ಜಟಾಪಟಿ ನಡೆದಿದೆ. ನಗರದ ಪ್ರಮುಖ ಸ್ಥಳದಲ್ಲಿ ಅಕ್ರಮ ವಲಸಿಗರನ್ನು ಒಕ್ಕಲೆಬ್ಬಿಸಿರುವುದನ್ನು ಬಿಜೆಪಿ ಸ್ವಾಗತ ಮಾಡಿದರೂ, ಕೇರಳದ ಎಲ್‌ಡಿಎಫ್ ಮತ್ತು ಯುಡಿಎಫ್ ಪಕ್ಷಗಳ ಅಣತಿಯಂತೆ ಜಾಗ ಖಾಲಿ ಮಾಡಿಸಿದವರಿಗೆ ಮತ್ತೆ ಸೂರು ಕಲ್ಪಿಸಲು ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಾಗಿದೆ ಎಂದು ದೂರಿದ್ದಾರೆ.



ಪ್ರಹ್ಲಾದ್ ಜೋಷಿ



ಶೋಭಾ ಕರಂದ್ಲಾಜೆ



ವಿಜಯೇಂದ್ರ

ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ, ಶೋಭಾ ಕರಂದ್ಲಾಜೆ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತ್ಯೇಕ ಸುದ್ದಿಗೋಷ್ಠಿ ನಡೆಸಿ, ಪಶ್ಚಿಮ ಬಂಗಾಳದ ಮೂಲಕ ಬಾಂಗ್ಲಾದಿಂದ ಬಂದಿರುವ ಅಕ್ರಮ ವಲಸಿಗರಿಗೆ ವಸತಿಸಹಿತ ಮೂಲಸೌಕರ್ಯ ಕಲ್ಪಿಸಲು ಹೊರಟಿರುವ ರಾಜ್ಯ ಸರ್ಕಾರದ ಕ್ರಮ ಖಂಡನೀಯ ಎಂದಿದ್ದಾರೆ. ಸರ್ಕಾರದ ಈ ದ್ವಂದ್ವ ನಿರ್ಧಾರಗಳ ವಿರುದ್ಧ ಜನವರಿ 5ರಂದು ನಡೆಯುವ ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಿ ರಾಜ್ಯಾದ್ಯಂತ ಹೋರಾಟ

■ 6ನೇ ಪುಟಕ್ಕೆ

## ಸರ್ಕಾರಿ ಭೂಮಿ ಒತ್ತುವರಿ ವಿರುದ್ಧ ಕಠಿಣ ಕಾನೂನು ಕ್ರಮ

▸ ಡಿಸಿಎಂ, ಡಿ.ಕೆ.ಶಿವಕುಮಾರ್ ಎಚ್ಚರಿಕೆ
▸ ಅರ್ಹರಿಗೆ ಮಾನವೀಯ ದೃಷ್ಟಿಯಿಂದ ಮನೆ



ಬೆಂಗಳೂರು, ಡಿ.30(ಕೆಎಂಶಿ)–ಸರ್ಕಾರಿ ಭೂಮಿ ಅಕ್ರಮ ಒತ್ತುವರಿದಾರರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ನಾವು ಓಲೈಕೆ ರಾಜಕಾರಣ ಮಾಡುವ ಪ್ರಶ್ನೆಯೇ ಇಲ್ಲ. ಮಾನವೀಯತೆ ದೃಷ್ಟಿಯಿಂದ ಯಾರಿಗೆ ಅರ್ಹತೆ ಇದೆಯೋ ಅವರಿಗೆ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಮನೆ ನೀಡಲಾಗುವುದು ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಸ್ಲಿಂಮರ ಓಲೈಕೆ ಮಾಡುತ್ತಿಲ್ಲ. ಹಿಂದೆ ಕೆಲವು ಭಾಗಗಳಲ್ಲಿ ನೀಡಲಾದ ಹಕ್ಕುಪತ್ರಗಳ ಪರಿಶೀಲನೆಗೆ ಸೂಚಿಸಲಾಗಿದೆ ಎಂದರು. ಅಕ್ರಮ ಒತ್ತುವರಿಯಲ್ಲಿ ಹೊರಗಿನಿಂದ ಬಂದವರು ಯಾರು, ನೈಜ ಮತದಾರರು ಎಷ್ಟಿದ್ದಾರೆ ಎಂಬ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ, ಅರ್ಹರಿಗೆ ಪುನರ್ವಸತಿ ಕಲ್ಪಿಸಲಾಗುವುದು.

ಕರ್ನಾಟಕದ ವಿಚಾರದಲ್ಲಿ ಕೇರಳದ ಹಸ್ತಕ್ಷೇಪ ಬೇಡ, ನಾವು ಉತ್ತಮ ಸರ್ಕಾರ ನೀಡುತ್ತಿದ್ದೇವೆ. ಯಾರು ಏನು ಬೇಕಾದರೂ ಹೇಳಿಕೆ ನೀಡಲಿ, ನಾವು ಅಕ್ರಮ ಒತ್ತುವರಿಗೆ ಅವಕಾಶ ನೀಡುವುದಿಲ್ಲ.

ಈ ಹಿಂದೆ ಪ್ರವಾಹ ಸಂದರ್ಭದಲ್ಲಿ ಕೊಟ್ಟ ಭರವಸೆಯನ್ನೇ ಈಡೇರಿಸಿಲ್ಲ. ಅಂತಹವರು ನಮಗೆ ಹೇಳುವ ಅವಶ್ಯಕತೆ ಇಲ್ಲ. ನಮ್ಮ ರಾಜ್ಯದ ವಿಚಾರ ಹೇಗೆ ನಿಭಾಯಿಸಬೇಕು ಎಂಬುದು ನಮಗೆ ತಿಳಿದಿದೆ.

**ಪಾಕ್‌ಗೆ ರಾಷ್ಟ್ರೀಯ ನಾಯಕರ ಉತ್ತರ:** ಕೋಗಿಲು ಬಡಾವಣೆ ಅಕ್ರಮ ಒತ್ತುವರಿ ವಿಚಾರ ಕುರಿತು ಪಾಕಿಸ್ತಾನ ವಿದೇಶಾಂಗ ಸಚಿವರ ಪ್ರತಿಕ್ರಿಯೆಗೆ ಭಾರತದ ರಾಷ್ಟ್ರೀಯ ನಾಯಕರು ಉತ್ತರಿಸಲಿದ್ದಾರೆ.

ಸಂತ್ರಸ್ತರ ಬಳಿ ಎರಡೆರಡು ರಾಜ್ಯಗಳ ಆಧಾರ್ ಕಾರ್ಡ್, ಮತದಾರರ ಚೀಟಿ ಇರುವ ಬಗ್ಗೆ ಅಧಿಕಾರಿಗಳು ಪರಿಶೀಲನೆ ಮಾಡಲಿದ್ದಾರೆ.

ಅಕ್ರಮ ನಿವಾಸಿಗಳಿಗೆ ಮನೆ ಸಕ್ರಮ ಮಾಡಲಾಗುತ್ತಿದೆಯಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಅರ್ಹರಿಗೆ ಮಾತ್ರ ಮನೆ ನೀಡಲಾಗುವುದು. ಸ್ಥಳೀಯ ಮತದಾರರ ಪಟ್ಟಿಯಲ್ಲಿ ಹೆಸರು ಹಾಗೂ ನಿಜವಾದ ಸ್ಥಳೀಯ ವಿಳಾಸ ಇದ್ದರೆ ಮಾತ್ರ ಮನೆ ನೀಡಲಾಗುವುದು. ಯಾವುದೇ ಸಕ್ರಮ ಮಾಡುತ್ತಿಲ್ಲ, ಅರ್ಹರನ್ನು ಗುರುತಿಸಲಾಗುವುದು ಎಂದರು.

## 'ಮೈಸೂರು ಮಿತ್ರ'ನ ಕ್ಯಾಲೆಂಡರ್




'ಮೈಸೂರು ಮಿತ್ರ'ನ 2026ನೇ ಸಾಲಿನ ವರ್ಣರಂಜಿತ ಕ್ಯಾಲೆಂಡರ್ ಅನ್ನು ನಾಳಿನ (ಜ.1) ಸಂಚಿಕೆಯಲ್ಲಿ ನೀಡಲಾಗುತ್ತಿದೆ. ನಿಮ್ಮ ಪ್ರತಿಯನ್ನು ಕಾಯ್ದಿರಿಸಿ.

–ಸಂ.

ಆದಾಯಕ್ಕಿಂತ ಅಧಿಕ ಆಸ್ತಿ ಸಂಪಾದನೆ ಆರೋಪ

## ಇಬ್ಬರು ಅರಣ್ಯಾಧಿಕಾರಿಗಳ ಮನೆ, ಕಚೇರಿ ಮೇಲೆ ಲೋಕಾಯುಕ್ತ ದಾಳಿ



ಮೈಸೂರು ಅಶೋಕಪುರಂನಲ್ಲಿರುವ ಅರಣ್ಯ ಭವನ.

ಮೈಸೂರು, ಡಿ.30(ಆರ್‌ಕೆ ಸೋಮಶೇಖರ್)– ಮೈಸೂರು, ಗುಂಡ್ಲುಪೇಟೆ ವಿಭಾಗದ ಇಬ್ಬರು ಅರಣ್ಯಾಧಿಕಾರಿಗಳ ಕಚೇರಿ, ಮನೆಗಳ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು ಆಸ್ತಿಗಳ ದಾಖಲೆ ಪರಿಶೀಲಿಸಿದರು.

ಮೈಸೂರು ವಿಭಾಗದ ಡಿಸಿಎಫ್ ಪರಮೇಶ್ ಹಾಗೂ ಚಾಮರಾಜನಗರದ ಆರ್‌ಎಫ್‌ಓ ನಾಗೇಂದ್ರ ನಾಯಕ್, ಆದಾಯಕ್ಕಿಂತ ಅಧಿಕ ಆಸ್ತಿ ಗಳಿಸಿದ್ದಾರೆಂಬ ಆರೋಪಕ್ಕೆ ಗುರಿಯಾಗಿದ್ದು, ಈ ಕುರಿತು ಚಾಮರಾಜನಗರ ಲೋಕಾಯುಕ್ತ ಡಿವೈಎಸ್‌ಪಿ ಕಚೇರಿಯಲ್ಲಿ ದೂರು ದಾಖಲಾಗಿತ್ತು. ಎಸ್ಪಿ ಉದೇಶ್ ಅವರ ನಿರ್ದೇಶನದಂತೆ ಇಂದು ಮುಂಜಾನೆಯೇ ಏಕಕಾಲದಲ್ಲಿ ಹತ್ತು ಕಡೆ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರ ಹತ್ತು ತಂಡಗಳು ಸಂಜೆವರೆಗೂ ಅವರ ಕಚೇರಿ, ಮನೆ ಹಾಗೂ ಸಂಬಂಧಿಕರ ಮನೆಗಳಲ್ಲಿ ಶೋಧ ಕಾರ್ಯ ನಡೆಸಿದರು.

ನಾಗೇಂದ್ರ ನಾಯಕ್ ಅವರು ಬಂಡೀಪುರದ ಟೈಗರ್ ರಿಸರ್ವ್ ಫಾರೆಸ್ಟ್‌ನ ಕುಂದಕೆರೆ ವಲಯದ ಆರ್‌ಎಫ್‌ಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಕಳೆದ ಹಲವು ತಿಂಗಳಿನಿಂದ ಅವರ ವಿರುದ್ಧ ಅಧಿಕ ಆಸ್ತಿಗಳಿಕೆ ದೂರುಗಳು ಬಂದಿದ್ದ ಹಿನ್ನೆಲೆಯಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಯಡಿ ಚಾಮರಾಜನಗರ ಲೋಕಾಯುಕ್ತ ಡಿವೈಎಸ್ಪಿ ಕಚೇರಿಯಲ್ಲಿ ಪ್ರಕರಣ ದಾಖಲಾಗಿತ್ತು.

ಗುಂಡ್ಲುಪೇಟೆ ಪಟ್ಟಣದ ಮನೆ, ಅವರ ಮಾವನ ಮನೆ, ಕಚೇರಿ, ಕುಂದಕೆರೆಯ ವಸತಿಗೃಹ ಹಾಗೂ

■ 6ನೇ ಪುಟಕ್ಕೆ

## ಒಂದು ಮಗು ಇದ್ದರೂ ಸರ್ಕಾರಿ ಶಾಲೆ ಮುಚ್ಚಲ್ಲ

ಬೆಂಗಳೂರು, ಡಿ.30(ಕೆಎಂಶಿ)– ಒಂದು ಮಗು ಇದ್ದರೂ ಸರ್ಕಾರಿ ಶಾಲೆಗಳನ್ನು ಮುಚ್ಚುವುದಿಲ್ಲ ಎಂಬುದಾಗಿ ಸ್ಪಷ್ಟಪಡಿಸಿರುವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಆದರೆ ಕರ್ನಾಟಕ ಪಬ್ಲಿಕ್ ಶಾಲಾ (ಕೆಪಿಎಸ್) ಯೋಜನೆ ಕೈಬಿಡುವುದಿಲ್ಲ ಎಂದಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬರಗೂರು ರಾಮಚಂದ್ರಪ್ಪ ಸೇರಿದಂತೆ ಕೆಲವು ಸಾಹಿತಿಗಳು ಕನ್ನಡ ಶಾಲೆಗಳನ್ನು ಮುಚ್ಚಲಾಗುತ್ತಿದೆ ಎಂಬ ಆತಂಕ ವ್ಯಕ್ತಪಡಿಸಿದ್ದು, ಸರ್ಕಾರ ಈ ವಿಷಯದಲ್ಲಿ ಈಗಾಗಲೇ ಸ್ಪಷ್ಟಪಡಿಸಿದೆ. ಈಗಿರುವ ಶಾಲೆಗಳಲ್ಲಿ ಒಂದು ಮಗು ಇದ್ದರೂ ಏನು ಸವಲತ್ತುಗಳು ಇವೆಯೋ ಅವೆಲ್ಲಾ ಮುಂದುವರೆಯಲಿವೆ ಎಂದರು. ಸರ್ಕಾರಿ ಶಾಲೆಗಳ ವಿಲೀನ ಮಾಡುವ ಪ್ರಶ್ನೆಯೇ ಇಲ್ಲ. ಬಿಇಓಗಳು ಅಂತಹ ಪ್ರಸ್ತಾಪ ಮಾಡಿದರೆ, ಅವರನ್ನು ಸೇವೆಯಿಂದ ಅಮಾನತು

■ 6ನೇ ಪುಟಕ್ಕೆ

## ಚಲಿಸುತ್ತಿದ್ದ ಬೈಕ್‌ಗೆ ಬೆಂಕಿ; ಸವಾರನೂ ಸಜೀವ ದಹನ

ಕೊಲೆಯೋ, ಆಕಸ್ಮಿಕವೋ; ಪೊಲೀಸರ ತನಿಖೆ





ಮೃತ ಆದಿತ್ಯ

**ನಂಜನಗೂಡು:** ನಗರದ ಹೊರವಲಯದ ಕೋರೆಹುಂಡಿಗೆ ತೆರಳುವ ರಸ್ತೆಯಲ್ಲಿ ಚಲಿಸುತ್ತಿದ್ದ ಬೈಕ್‌ಗೆ ಬೆಂಕಿ ಹೊತ್ತಿಕೊಂಡಿದ್ದು, ಅದರ ಸವಾರ ಸಜೀವ ದಹನವಾಗಿದ್ದಾನೆ. ಆದರೆ ಇದು ಕೊಲೆಯೋ, ಆಕಸ್ಮಿಕವೋ ಎಂಬ ಅನುಮಾನ ಉಂಟಾಗಿದ್ದು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಯುವಕ ಮತ್ತು ಬೈಕ್ ಸುಟ್ಟು ಕರಕಲಾಗಿದ್ದು, ಘಟನೆ ಬಗ್ಗೆ ಕುಟುಂಬದವರು ಶಂಕೆ ವ್ಯಕ್ತಪಡಿಸಿ, ಪೊಲೀಸರಿಗೆ ಈಗಾಗಲೇ ದೂರು ನೀಡಿದ್ದಾರೆ. ತಾಲೂಕಿನ ರಾಂಪುರ ಗ್ರಾಮದ ನಿವಾಸಿ ಬಸವಣ್ಣ ಎಂಬುವರ ಪುತ್ರ ಆದಿತ್ಯ(23) ಮೃತ ಯುವಕ. ನಂಜನಗೂಡಿನಿಂದ ಕೋರೆಹುಂಡಿಗೆ ತೆರಳುವಾಗ ಹುಲ್ಲಹಳ್ಳಿ ನಾಲೆ ಸಮೀಪ ನಿರ್ಜನ ಪ್ರದೇಶದಲ್ಲಿ ಬೈಕ್ ಹಾಗೂ ಆದಿತ್ಯನ ದೇಹ ಸಂಪೂರ್ಣವಾಗಿ ಕರಕಲಾಗಿರುವ ಸ್ಥಿತಿಯಲ್ಲಿ ಸೋಮವಾರ ರಾತ್ರಿ ಪತ್ತೆಯಾಗಿದೆ.

ಖಾಸಗಿ ಕಾರ್ಖಾನೆಯೊಂದರಲ್ಲಿ ಗುತ್ತಿಗೆ ನೌಕರನಾಗಿ ಕೆಲಸ ನಿರ್ವಹಿಸುತ್ತಿದ್ದ ಈತ ಸೋಮವಾರ ಬೆಳಗ್ಗೆ ತನ್ನ ಬೈಕ್ ರಿಪೇರಿ ಮಾಡಿಸುತ್ತೇನೆ ಎಂದು ಮನೆಯಿಂದ ಹೋದವನು ಸಂಜೆಯಾದರೂ ವಾಪಸ್ ಬಂದಿರಲಿಲ್ಲ. ಸಂಜೆ 4ರ ವೇಳೆಯಲ್ಲಿ ಆದಿತ್ಯ ತಾಯಿ ಅಂಬಿಕಾ ಸ್ನಾನ ಮಾಡಲು ಮನೆಗೆ ಬೇಗ ಬರುವಂತೆ ಕರೆ ಮಾಡಿ ತಿಳಿಸಿದ್ದಾರೆ.

■ 6ನೇ ಪುಟಕ್ಕೆ

## ಅಕ್ರಮ ಬೆಟ್ಟಿಂಗ್ ಆರೋಪ: ಶಾಸಕ ವೀರೇಂದ್ರ ಪಪ್ಪಿಗೆ ಜಾಮೀನು ಮಂಜೂರು

ಬೆಂಗಳೂರು, ಡಿ.30– ಅಕ್ರಮ ಬೆಟ್ಟಿಂಗ್ ಆರೋಪ ಪ್ರಕರಣದಲ್ಲಿ ನಾಲ್ಕು ತಿಂಗಳ ಹಿಂದೆ ಬಂಧಿತರಾಗಿದ್ದ ಚಿತ್ರದುರ್ಗದ ಕಾಂಗ್ರೆಸ್ ಶಾಸಕ ಕೆ.ಸಿ. ವೀರೇಂದ್ರ (ಪಪ್ಪಿ) ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಈ ಮೂಲಕ ನಾಲ್ಕು ತಿಂಗಳ ಕಾಲ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ವೀರೇಂದ್ರ ಅವರಿಗೆ ಬಿಡುಗಡೆ ಭಾಗ್ಯ ಸಿಕ್ಕಿದೆ.



ಕಾನೂನು ಬಾಹಿರವಾಗಿ ಕ್ಯಾಸಿನೋದಲ್ಲಿ ಆನ್ ಲೈನ್ ಹಾಗೂ ಆಫ್ ಲೈನ್ ಮೂಲಕ ಅಕ್ರಮವಾಗಿ ಬೆಟ್ಟಿಂಗ್ ನಡೆಸುತ್ತಿರುವ ಆರೋಪದಡಿ ಕಳೆದ ಆಗಸ್ಟ್ 23ರಂದು ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು ಸಿಕ್ಕಿಂ ರಾಜಧಾನಿ ಗ್ಯಾಂಗ್ ಟಕ್‌ನಲ್ಲಿ ಕಾಂಗ್ರೆಸ್ ಶಾಸಕರನ್ನು ಬಂಧಿಸಿದ್ದರು.

ಅಕ್ರಮ ಬೆಟ್ಟಿಂಗ್ ಪ್ರಕರಣದಲ್ಲಿ ಚಿತ್ರದುರ್ಗ ಜಿಲ್ಲೆಯ 6, ಬೆಂಗಳೂರಿನ 10, ಗೋವಾದ 8,

■ 6ನೇ ಪುಟಕ್ಕೆ

# ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ದೊಡ್ಡಸ್ವಾಮೇಗೌಡ ಅವಿರೋಧ ಆಯ್ಕೆ

## ಯಳಂದೂರಿನ ಜಯರಾಮು ಉಪಾಧ್ಯಕ್ಷ

• ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ನಡೆದ ಚುನಾವಣೆ
• ಸಿದ್ದರಾಮಯ್ಯ ಆದೇಶಕ್ಕೆ ತಲೆಬಾಗಿದ 9 ನಿರ್ದೇಶಕರು
• ಕಾಂಗ್ರೆಸ್ ಕಾರ್ಯಕರ್ತರಿಂದ ವಿಜಯೋತ್ಸವ

ಮೈಸೂರು, ಡಿ.30(ಬಿಎಲ್‌ಯು)– ಪ್ರತಿಷ್ಠೆಯ ಕಣವಾಗಿದ್ದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ (ಎಂಸಿಡಿಸಿಸಿ) ಅಧ್ಯಕ್ಷರಾಗಿ ಕೆ.ಆರ್.ನಗರದ ಶಾಸಕ ಡಿ.ರವಿಶಂಕರ್ ತಂದೆ ದೊಡ್ಡಸ್ವಾಮೇಗೌಡ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಯಳಂದೂರು ತಾಲೂಕಿನ ವೈ.ಎನ್. ಜಯರಾಮು ಆಯ್ಕೆಯಾಗಿದ್ದಾರೆ.

ಮೈಸೂರಿನ ಅಶೋಕ ವೃತ್ತದ ಎಂಸಿಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಇಂದು ಬೆಳಗ್ಗೆ 9 ಗಂಟೆಗೆ ಚುನಾವಣಾ ಪ್ರಕ್ರಿಯೆ ಆರಂಭವಾಯಿತು. ಈ ವೇಳೆ ಅಧ್ಯಕ್ಷ ಸ್ಥಾನಕ್ಕೆ ದೊಡ್ಡಸ್ವಾಮೇಗೌಡ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಜಯರಾಮು ನಾಮಪತ್ರ ಸಲ್ಲಿಸಿದ್ದರು.


ನಾಮಪತ್ರ ಸಲ್ಲಿಸಲು ನಿಗದಿಗೊಳಿಸಿದ ಸಮಯ ಮುಗಿದ ನಂತರ ಚುನಾವಣಾಧಿಕಾರಿಯೂ ಆದ ಉಪ ವಿಭಾಗಾಧಿಕಾರಿ ಆಶಪ್ಪ ಇಬ್ಬರ ನಾಮಪತ್ರಗಳನ್ನು ಪರಿಶೀಲನೆ ನಡೆಸಿದರು. ನಂತರ ಎರಡೂ ನಾಮಪತ್ರ ಸಿಂಧುವಾಗಿದೆ ಎಂದು ಪ್ರಕಟಿಸಿದರು.

ಇದಾದ ಮೇಲೆ ಚುನಾವಣಾ ಪ್ರಕ್ರಿಯೆಯಂತೆ ನಾಮಪತ್ರ ವಾಪಸು ಪಡೆಯಲು ಅವಕಾಶ ನೀಡಲಾಯಿತು. ಕಣದಲ್ಲಿ ಈ ಇಬ್ಬರೇ ಇದ್ದ ಕಾರಣ ಚುನಾವಣಾಧಿಕಾರಿ ಆಶಪ್ಪ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ದೊಡ್ಡಸ್ವಾಮೇಗೌಡ ಹಾಗೂ ಉಪಾಧ್ಯಕ್ಷರಾಗಿ ಜಯರಾಮು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಘೋಷಣೆ ಮಾಡಿದರು.

ಎಂಸಿಡಿಸಿಸಿ ಬ್ಯಾಂಕ್‌ನಲ್ಲಿ ಒಟ್ಟು 13 ನಿರ್ದೇಶಕರಿದ್ದಾರೆ. ಇವರಲ್ಲಿ ಕಾಂಗ್ರೆಸ್ ಬೆಂಬಲಿತ 10, ಮೂವರು ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಬೆಂಬಲಿತ ನಿರ್ದೇಶಕರಿದ್ದಾರೆ. ಕಾಂಗ್ರೆಸ್ ಬೆಂಬಲಿತ ನಿರ್ದೇಶಕರು ಹೆಚ್ಚಾಗಿದ್ದರಿಂದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನ 'ಕೈ' ವಶವಾಯಿತು.

ಅಧ್ಯಕ್ಷರಾಗಿ ದೊಡ್ಡಸ್ವಾಮೇಗೌಡ ಹಾಗೂ ಉಪಾಧ್ಯಕ್ಷರಾಗಿ ಜಯರಾಂ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಗಳು ಘೋಷಣೆ ಮಾಡುತ್ತಿದ್ದಂತೆ ಕಾಂಗ್ರೆಸ್ ನಾಯಕರು ವಿಜಯೋತ್ಸವ ಆಚರಿಸಿದರು. ಕಾಂಗ್ರೆಸ್ ಬೆಂಬಲಿತ ನಿರ್ದೇಶಕರು ಸೇರಿದಂತೆ ಹಲವರು ದೊಡ್ಡಸ್ವಾಮೇಗೌಡರಿಗೆ ಹೂಗುಚ್ಛ ನೀಡಿ ಅಭಿನಂದನೆ ಸಲ್ಲಿಸಿದರು. ಚುನಾವಣೆ ನಂತರ ದೊಡ್ಡ ಸ್ವಾಮೇಗೌಡರು ಮೈಸೂರಿನ ಜಲದರ್ಶಿನಿಯಲ್ಲಿದ್ದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರನ್ನು ಭೇಟಿ ಮಾಡಿ, ಅಭಿನಂದನೆ ಸಲ್ಲಿಸಿದರು. ಯಾವುದೇ ಅಹಿತಕರ ಘಟನೆಗೆ ಆಸ್ಪದವಿಲ್ಲದಂತೆ ಬ್ಯಾಂಕ್ ಬಳಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.



ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ದೊಡ್ಡಸ್ವಾಮೇಗೌಡ ಅವರನ್ನು ಅಭಿನಂದಿಸಲಾಯಿತು.

### ಹೆಚ್ಚಿನ ಅನುದಾನ ತರುವೆ, ರೈತ ಪರ ಯೋಜನೆ ರೂಪಿಸುವೆ

ನಮ್ಮ ಜಿಲ್ಲೆಯವರೇ ಆದ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿರುವ ಹಿನ್ನೆಲೆಯಲ್ಲಿ ಹೆಚ್ಚಿನ ಅನುದಾನ ತಂದು ರೈತರಿಗೆ ಅನುಕೂಲವಾಗುವ ಯೋಜನೆ ರೂಪಿಸುತ್ತೇನೆ ಎಂದು ದೊಡ್ಡಸ್ವಾಮೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನ ತಂದು ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ಕಲ್ಪಿಸುತ್ತೇನೆ ಎಂದು ಹೇಳಿದರು. ಈ ಮೂಲಕ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ರೈತರ ಹಿತ ಕಾಯುತ್ತೇನೆ. ನಾನೊಬ್ಬ ರೈತ ಕುಟುಂಬದಿಂದ ಬಂದವನಾದ ಹಿನ್ನೆಲೆಯಲ್ಲಿ ರೈತರ ಕಷ್ಟಗಳೇನು ಎಂದು ನನಗೆ ಅರಿವಿದೆ. ಈ ಹಿನ್ನೆಲೆಯಲ್ಲಿ ರೈತರಿಗೆ ಅನುಕೂಲವಾಗುವ ಯೋಜನೆ ರೂಪಿಸುತ್ತೇನೆ.

### ಸಿಎಂ ಸಿದ್ದರಾಮಯ್ಯ ಕೃಪಾಕಟಾಕ್ಷ

ಮುಖ್ಯಮಂತ್ರಿ ಸಿದ್ದರಾಮಯ್ಯ ಕೃಪಾಕಟಾಕ್ಷವಿದ್ದ ಹಿನ್ನೆಲೆಯಲ್ಲಿ ದೊಡ್ಡಸ್ವಾಮೇಗೌಡರಿಗೆ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗುವ ಅದೃಷ್ಟ ಒಲಿದಿದೆ.

ಅಧ್ಯಕ್ಷ ಸ್ಥಾನಕ್ಕೆ ಮಾಜಿ ಅಧ್ಯಕ್ಷ ಎಸ್. ಚಂದ್ರಶೇಖರ್, ಶಾಸಕರಾದ ಅನಿಲ್ ಚಿಕ್ಕಮಾದು, ಪುಟ್ಟರಂಗಶೆಟ್ಟಿ, ಎಚ್.ಎಂ.ಗಣೇಶ್ ಪ್ರಸಾದ್, ಮಾಜಿ ಶಾಸಕ ಆರ್.ನರೇಂದ್ರ ಪ್ರಬಲ ಆಕಾಂಕ್ಷಿಗಳಾಗಿದ್ದರು. ಆದರೆ, ಸಿದ್ದರಾಮಯ್ಯ ಅವರು ಜೆಡಿಎಸ್‌ನಲ್ಲಿ ಉಪ ಮುಖ್ಯಮಂತ್ರಿ ಆಗಿದ್ದ ಕಾಲದಿಂದ ಇಲ್ಲಿವರೆಗೆ ತಮ್ಮ ತವರು ಜಿಲ್ಲೆಯ ಯಾವುದೇ ನೇಮಕ ನಿರ್ಧಾರದ ಕೀಲಿ ಕೈಯನ್ನು ತಮ್ಮಲ್ಲೇ ಇರಿಸಿಕೊಂಡಿದ್ದಾರೆ. ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ, ಸೋಲು ಅನುಭವಿಸಿದ್ದ ದೊಡ್ಡಸ್ವಾಮೇಗೌಡರೆ ಅಧ್ಯಕ್ಷರಾಗಬೇಕೆಂದು ಸಿದ್ದರಾಮಯ್ಯ ನಿನ್ನೆ ರಾತ್ರಿ ನಿರ್ಧರಿಸಿ, ಸೂಚನೆ ನೀಡಿದ್ದರೆನ್ನಲಾಗಿದೆ. ಅದರಂತೆ ಅಧ್ಯಕ್ಷ ಸ್ಥಾನ ದೊಡ್ಡಸ್ವಾಮೇಗೌಡರ ಪಾಲಾಗಿದೆ.

## ನಕ್ಕರೆ ಅದೇ ಸ್ವರ್ಗ

ಗಿರಾಕಿ : ಏನಪ್ಪಾ ಈ ಚೆಡ್ಡಿಗೆ ಎಷ್ಟು ರೂಪಾಯಿ?
ಗುಂಡ : ಬರೀ 300 ರೂ. ಸಾರ್.
ಗಿರಾಕಿ : ಈ ಚೆಡ್ಡಿಗೆ ಏನಾದ್ರೂ ಗ್ಯಾರಂಟಿ ಇದೆಯಾ
ಗುಂಡ : ಸರ್ ನೀವು 9ನೇ ಅಂತಸ್ತಿನಿಂದ ಬಿದ್ರು, ನಿಮ್ಮ ಸೊಂಟ ಮುರಿತದೆ ಹೊರತು ಈ ಚಡ್ಡಿ ಹರಿಯಲ್ಲ!

ಮೈಸೂರು ಮಿತ್ರ

ಬುಧವಾರ, 31 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

### ಅಮೃತ ವಾಹಿನಿ.........

ನಿಮ್ಮ ಬಗ್ಗೆ ನಿಜವಾಗಿಯೂ ಕಾಳಜಿ ಇರುವವರು ಮಾತ್ರ ನೀವು ಶಾಂತವಾಗಿದ್ದಾಗಲೂ ನಿಮ್ಮ ಮನಸ್ಸಿನ ಮಾತುಗಳನ್ನು ಅರ್ಥ ಮಾಡಿಕೊಳ್ಳುವರು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಧರ್ಮಕ್ಕೆ ದಟ್ಟಿ ಕೊಟ್ಟರೆ ಹಿತ್ತಲಲ್ಲಿ ಮೊಳ ಹಾಕಿದರಂತೆ.

## ನಿಮ್ಮ ಪತ್ರಗಳು

### ಸರ್ಕಾರ, ಇಲಾಖೆಗಳು ಏನು ಮಾಡುತ್ತಿದ್ದವು!

ಮಾನ್ಯರೆ,

ಬೆಂಗಳೂರಿನ ಕೋಗಿಲು ಬಡಾವಣೆಯಲ್ಲಿ ಘನ ತ್ಯಾಜ್ಯ ವಿಲೇವಾರಿಗಾಗಿ ಸರ್ಕಾರ ಮೀಸಲಿಟ್ಟಿದ್ದ ಜಾಗದಲ್ಲಿ ವ್ಯಕ್ತಿಯೊಬ್ಬ ಜನರಿಂದ ಹಣ ಪಡೆದು ಮನೆ ನಿರ್ಮಿಸಿಕೊಟ್ಟು, ಸರ್ಕಾರದ ಜಾಗವನ್ನು ದುರ್ಬಳಕೆ ಮಾಡಿಕೊಂಡಿದ್ದಾನೆ. ಇದೀಗ ಆ ಜಾಗವನ್ನು ನೈಜ ಉದ್ದೇಶಕ್ಕೆ ಬಳಸುವ ಸಲುವಾಗಿ ಸರ್ಕಾರ ಮನೆಗಳನ್ನು ಧ್ವಂಸ ಮಾಡಿದ್ದು, ದೇಶಾದ್ಯಂತ ಸುದ್ದಿಯಾಗಿದೆ. ಇದರ ಬೆನ್ನಲ್ಲೇ ತನ್ನ ಮುಸ್ಲಿಂ ಮತ ಬ್ಯಾಂಕ್‌ಗೆ ಹಿನ್ನಡೆಯಾಗುತ್ತದೆ ಎಂದು ಅವರೆಲ್ಲರಿಗೂ ಸರ್ಕಾರದಿಂದ ಮನೆ ಮಂಜೂರು ಮಾಡಲಾಗುತ್ತಿದೆ. ಆದರೆ ಅವರಿಗೆ ಅಲ್ಲಿ ದುಡ್ಡು ಪಡೆದು ಮನೆ ಕಟ್ಟಿಕೊಟ್ಟ ಹಾಗೂ ಬಾಡಿಗೆ ವಸೂಲಿ ಮಾಡುತ್ತಿದ್ದ ವ್ಯಕ್ತಿಯನ್ನು ಇದುವರೆಗೂ ಸರ್ಕಾರ ಬಂಧಿಸಿಲ್ಲ ಅಥವಾ ಆತನ ವಿಚಾರಣೆ ಕೂಡ ಮಾಡಿಲ್ಲ.

ಮನೆ ಕೆಡವಿದ ಸುದ್ದಿ ಕೇಳಿ, ಕೇರಳದ ಮುಖ್ಯಮಂತ್ರಿ ಟ್ವೀಟ್ ಮಾಡುತ್ತಾರೆ. ಇದನ್ನು ಪರಿಶೀಲಿಸಲು ಕೇರಳದ ಮಂತ್ರಿ ಬೆಂಗಳೂರಿಗೆ ಬರುತ್ತಾರೆ. ಕೇರಳದ ನಿಯೋಗ ಕೂಡ ಬರುತ್ತದೆ. ಕರ್ನಾಟಕದ ಮುಖ್ಯಮಂತ್ರಿ, ಉಪಮುಖ್ಯ ಮಂತ್ರಿ, ವಸತಿ ಸಚಿವರು ಮನೆ ಕೊಡುವುದಾಗಿ ಹೇಳುತ್ತಾರೆ.

ಕೇರಳದವರು ಅವರನ್ನೆಲ್ಲ ತಮ್ಮ ರಾಜ್ಯಕ್ಕೆ ಕರೆದುಕೊಂಡು ಹೋಗಿ ಅವರಿಗೆ ವಸತಿ, ನಿವೇಶನ ನೀಡಿದ್ದರೆ ಅವರನ್ನು ಮೆಚ್ಚಬಹುದಿತ್ತು. ಆದರೆ ಇಲ್ಲಿ ಬಂದು, ಸರ್ಕಾರಕ್ಕೆ ಧಮಕಿ ಹಾಕಿ ಅವರಿಗೆಲ್ಲ ಮನೆ ಮಂಜೂರಾಗುವಂತೆ ಮಾಡಿ ತಮ್ಮ ರಾಜ್ಯದ ಮುಸ್ಲಿಂ, ಅಲ್ಪ ಸಂಖ್ಯಾತ ಮತ ಬ್ಯಾಂಕ್ ಅನ್ನು ಭದ್ರ ಪಡಿಸಿಕೊಂಡರು! ಭಲೇ ಎನ್ನಬೇಕು ಅವರನ್ನು. 2–3 ವರ್ಷದಿಂದ ಈ ಜನರು ಅಲ್ಲಿ ಬಂದು ವಾಸ್ತವ್ಯ ಹೂಡಿದ್ದರೂ ಸರ್ಕಾರದ ಸಂಬಂಧ ಪಟ್ಟ ಇಲಾಖೆಗಳು ಸುಮ್ಮನಿದ್ದುದೇಕೆ? ತನ್ನ ಜಾಗಕ್ಕೆ ಕಾಂಪೌಂಡ್ ನಿರ್ಮಿಸಿ ರಕ್ಷಣೆ ಮಾಡಲಿಲ್ಲವೇಕೆ? ಕೇರಳದವರು ಇಲ್ಲಿ ಬಂದು ತಗಾದೆ ಮಾಡಿದರೂ ಅದನ್ನು ಖಂಡಿಸದಿರುವುದೇಕೆ? ಮನೆ ಬಿಟ್ಟು ಬಂದು ಸರ್ಕಾರಿ ಜಗದಲ್ಲಿ ಶೆಡ್ ನಿರ್ಮಿಸುವುದು, ಆಮೇಲೆ ಸರ್ಕಾರ ತೆರವುಗೊಳಿಸುವುದು, ಆಗ ಇದು ಒಕ್ಕಲೆಬ್ಬಿಸಿದರೆಂದು ಮಾಧ್ಯಮಗಳಲ್ಲಿ ಸುದ್ದಿಯಾಗುವುದು. ಸರ್ಕಾರ ಬೆದರಿ ಅವರಿಗೆ ಸರ್ಕಾರದಿಂದ ವಸತಿ ಸೌಲಭ್ಯ ಕಲ್ಪಿಸುವುದು ನಡೆಯುತ್ತಿದೆ.

ಹಳ್ಳಿ, ಪಟ್ಟಣ, ನಗರಗಳಲ್ಲಿ ತಮ್ಮ ಸ್ವಂತ ಸ್ಥಳದಿಂದ ವಲಸೆ ಬರುವುದು, ಅಲ್ಲಿ ಸರ್ಕಾರಿ ಜಾಗದಲ್ಲಿ ಶೆಡ್ ನಿರ್ಮಿಸುವುದು, ಆಗ ಇದು ಸ್ಥಳೀಯ ಆಡಳಿತಕ್ಕೆ ತಿಳಿದರೂ ಸುಮ್ಮನಿರುವುದು, ಈ ರೀತಿ ಅಕ್ರಮ ಶೆಡ್‌ಗಳ ಸಂಖ್ಯೆ ಜಾಸ್ತಿಯಾದಾಗ ಸ್ಥಳೀಯಾಡಳಿತ ಒಕ್ಕಲೆಬ್ಬಿಸಲು ಮುಂದಾಗುವುದು. ಆಗ ಅವರ ಜನಾಂಗದ ಪ್ರತಿನಿಧಿಗಳು ಕೂಗೆಬ್ಬಿಸುವುದು, ಆಗ ಸರ್ಕಾರದಿಂದ ವಸತಿ ನೀಡುವುದು ನಡೆಯುತ್ತಿದೆ. ಇನ್ನು ಮುಂದಾದರೂ ಆಯಾ ಸ್ಥಳೀಯ ಆಡಳಿತಗಳು ಬಡಾವಣೆಗಳಲ್ಲಿ ಫುಟ್‌ಪಾತ್‌ನಲ್ಲಿ, ಸರ್ಕಾರಿ ಜಾಗದಲ್ಲಿ ಈ ರೀತಿ ಅನಧಿಕೃತ ಮನೆ, ಬಡಾವಣೆ ನಿರ್ಮಾಣ ವಾಗದಂತೆ ಕಟ್ಟು ನಿಟ್ಟಿನ ಎಚ್ಚರಿಕೆ ವಹಿಸಿದರೆ ಮುಂದೆ ಕೋಗಿಲು ಬಡಾವಣೆಯಂತಹ ಸಮಸ್ಯೆಯನ್ನು ತಡೆಯಬಹುದು.

– ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

### ವಿವೇಕಾನಂದನಗರ ವೃತ್ತದಲ್ಲಿ ತೆರವುಗೊಳಿಸಿದ್ದ ಜಾಗದಲ್ಲಿ ಮತ್ತೆ ವ್ಯಾಪಾರ ಶುರು



ಮಾನ್ಯರೆ,

ಮೈಸೂರಿನ ವಿವೇಕಾನಂದ ವೃತ್ತದಿಂದ ಶ್ರೀರಾಂಪುರದ ಕಡೆಗೆ ಹೋಗುವ ಮುಖ್ಯ ರಸ್ತೆಯಲ್ಲಿ ಬೆಳಗ್ಗೆ ಮತ್ತು ಸಂಜೆ ತರಕಾರಿ, ಹಣ್ಣು ಹಂಪಲು ಮಾರಾಟ ಮಾಡುವ ಕೈಗಾಡಿಯವರು ಈ ಜಾಗದಲ್ಲಿ ವ್ಯಾಪಾರ ಶುರು ಮಾಡಿದ್ದಾರೆ. ಕಾರಣ ಇದೇ ಜಾಗದಲ್ಲಿ ಕಳೆದ ಎರಡು ತಿಂಗಳ ಹಿಂದೆ ಕೆಎಸ್‌ಆರ್‌ಟಿಸಿ ಬಸ್ ಹರಿದು ಸ್ಥಳದಲ್ಲೇ ಹಿರಿಯ ನಾಗರಿಕರೊಬ್ಬರು ಮೃತಪಟ್ಟ ಹೃದಯ ವಿದ್ರಾವಕ ಘಟನೆ ನಡೆದಿದೆ. ಆಗ ತಕ್ಷಣವೇ ಸಂಚಾರಿ ಪೊಲೀಸರು ಇಲ್ಲಿದ್ದ ಎಲ್ಲಾ ಕೈಗಾಡಿಗಳನ್ನು ತೆರವುಗೊಳಿಸಿ ಸಾರ್ವಜನಿಕರು ನಿರಾಳವಾಗಿ ಓಡಾಡುವ ವ್ಯವಸ್ಥೆ ಕಲ್ಪಿಸಿದ್ದರು. ಈಗ ಅದೇ ಜಾಗದಲ್ಲಿ ಮತ್ತೆ ಕೈಗಾಡಿಗಳಲ್ಲಿ ತರಕಾರಿ ವ್ಯಾಪಾರ ಪ್ರಾರಂಭವಾಗಲು ಏನು ಕಾರಣ? ಇದು ನಮ್ಮ ಪೊಲೀಸ್ ವ್ಯವಸ್ಥೆ ಮತ್ತು ನಗರ ಪಾಲಿಕೆಯ ಕಾರ್ಯ ವೈಖರಿಗೆ ಹಿಡಿದ ಕನ್ನಡಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

### ನ್ಯಾಯಸಮ್ಮತವಾದ ಬಿಪಿಎಲ್ ಪರಿಷ್ಕರಣೆ ಅಗತ್ಯ

ಮಾನ್ಯರೆ,

ಬಿಪಿಎಲ್ ಕಾರ್ಡ್ ಪರಿಷ್ಕರಣೆಯ ಬಗ್ಗೆ ಈಗಾಗಲೇ ಬಡ ಕುಟುಂಬಗಳಲ್ಲಿ ಆತಂಕದ ಅಲೆ ಎದ್ದಿದೆ. 1.20 ಲಕ್ಷ ಆದಾಯ ಮಿತಿಯನ್ನು ಒಪ್ಪಿಗೆಯಾದರೆ, ಇದು ಪ್ರಾಮಾಣಿಕವಾಗಿ ಚಿಂತನೆ ಮಾಡದ ನಿರ್ಧಾರವಾಗಲಿದೆ. ಈ ಲೆಕ್ಕಾಚಾರವು ರಾಜ್ಯದಲ್ಲಿ ಅಸ್ಥಿರ ಆದಾಯದ ಮೇಲೆ ಬದುಕುತ್ತಿರುವ ಲಕ್ಷಾಂತರ ಬಡವರಿಗೆ ಅನ್ಯಾಯವಾಗುತ್ತದೆ. ಇನ್ನೂ 8 ಲಕ್ಷ ಶಂಕಾಸ್ಪದ ಪಡಿತರ ಫಲಾನುಭವಿಗಳ ವರದಿ, ಪಡಿತರ ವ್ಯವಸ್ಥೆಯ ದುರಂತದ ಸ್ಥಿತಿಯನ್ನು ಸೂಚಿಸುತ್ತದೆ. 2017 ರ ಬಿಪಿಎಲ್ ಮಾನದಂಡಗಳು ಅನೇಕ ಅರ್ಹ ಕುಟುಂಬಗಳನ್ನು ಹೊರಗಟ್ಟಿದವು, ಇದರಿಂದ ಇಲ್ಲಿವರೆಗೂ ಆ ಕುಟುಂಬಗಳು ಕಷ್ಟಗಳನ್ನು ಅನುಭವಿಸುತ್ತಿವೆ. ಕಾರ್ಮಿಕರ ಅಸ್ಥಿರ ಆದಾಯ, ಉದ್ಯೋಗ ಭದ್ರತೆ ಇಲ್ಲದ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡು ಸರ್ಕಾರವು ಮಾನವೀಯವಾಗಿ ಆಲೋಚನೆ ಮಾಡಬೇಕು, ಬಡವರ ನಂಬಿಕೆಯನ್ನು ಕಳೆಯದೆ, ಸಮಗ್ರ ಪರಿಹಾರಗಳನ್ನು ಪ್ರಸ್ತಾಪಿಸಬೇಕು. ಸರಕಾರವು ಕೇವಲ ಸಂಖ್ಯಾ ಲೆಕ್ಕಾಚಾರಗಳನ್ನು ಮುಂದಿಟ್ಟುಕೊಳ್ಳುವುದರಿಂದ ಬಡತನದ ರೇಖೆ ಅಳಿಯಬಾರದು. ಬದ್ಧತೆ, ನ್ಯಾಯ ಮತ್ತು ಸಮೃದ್ಧಿಗಾಗಿ ಸರಕಾರವು ತಮ್ಮ ನೀತಿಯನ್ನು ಪುನಃ ಪರಿಗಣಿಸಬೇಕಾಗಿದೆ.

– ಡಾ. ಎಚ್.ಕೆ.ವಿಜಯಕುಮಾರ್, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

# ದೊಂಬರಾಟವೊ ಬಾಳು ಮುದ್ದುರಾಮ

ಬದುಕು ಸದಾ ಸುಖದ ಪಯಣವಲ್ಲ. ಅದರಲ್ಲಿ ಏರುಪೇರುಗಳು, ಏಳು ಬೀಳುಗಳು ಇದ್ದೇ ಇರುತ್ತವೆ. ಯಾವುದೇ ರಾಜನು ಎಲ್ಲ ಯುದ್ಧಗಳಲ್ಲಿ ಜಯವನ್ನು ಗಳಿಸಿಲ್ಲ. ಒಮ್ಮೆ ಸೋಲು, ಇನ್ನೊಮ್ಮೆ ಗೆಲುವು. ಕ್ರಿಕೆಟಿನ ಒಂದು ಪಂದ್ಯದಲ್ಲಿ ಶತಕ, ಇನ್ನೊಂದರಲ್ಲಿ ಶೂನ್ಯ ಸಂಪಾದನೆ. ಎದೆಗುಂದದೆ ಮುಂದಿನ ಆಟಕ್ಕೆ ಸಿದ್ಧವಾಗಬೇಕು. ಹೀಗೆ ಬದುಕನ್ನು ದೊಂಬರಾಟಕ್ಕೆ ಹೋಲಿಸಬಹುದು. ನನ್ನ ಬಾಲ್ಯದಲ್ಲಿ ನಮ್ಮ ಹಳ್ಳಿಯಲ್ಲಿ ದೊಂಬರಾಟವನ್ನು ನೋಡಿದ್ದೆನು. ದೊಂಬರು ಹಳ್ಳಿಗೆ ಬಂದು ಚಾವಡಿಯ ಮುಂದೆ ಎರಡು ಕಂಬಗಳನ್ನು ನೆಟ್ಟು ಅವುಗಳಿಗೆ ಹಗ್ಗ ಕಟ್ಟುತ್ತಿದ್ದರು. ಆಮೇಲೆ ವಾದ್ಯಗಳ ಶಬ್ದ. ಸಾಕಷ್ಟು ಹಳ್ಳಿಯ ಜನ ಸೇರುತ್ತಿದ್ದರು. ಪಟೇಲರು, ಶಾನುಭೋಗರು, ಹಿರಿಯರು ಕುರ್ಚಿಗಳಲ್ಲಿ ಕುಳಿತ ಮೇಲೆ ಆಟ ಶುರುವಾಗುತ್ತಿತ್ತು. ದೊಂಬನು ಕಂಬದ ಮೇಲೆ ಹತ್ತಿ ನಿಂತಾಗ ಅವನ ಕೈಗೆ ಅವನ ಹೆಂಡತಿಯೋ, ಮಗನೋ ಕೋಲನ್ನು ಅವನ ಕೈಗೆ ಕೊಡುತ್ತಿದ್ದರು. ಅದು ಸಮತೋಲನೆಗೆ ಸಾಧನ. ಕೋಲನ್ನು ಅಡ್ಡಡ್ಡಲಾಗಿ ಹಿಡಿದು ದೊಂಬ ಹಗ್ಗದ ಮೇಲೆ ನಡೆಯುತ್ತಿದ್ದನು. ನೆಲಕ್ಕೆ ಬೀಳದೆ ಒಂದು ತುದಿಯಿಂದ ಇನ್ನೊಂದು ತುದಿಗೆ ತಲುಪಿದಾಗ ಜನರಿಂದ ಚಪ್ಪಾಳೆ. ಅದೇ ರೀತಿ ಆ ದೊಂಬನ ಹೆಂಡತಿಯೂ ಮಗನೂ ಮಾಡಿ ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತಿದ್ದರು. ಆಮೇಲೆ ಜನರು ಪುಡಿಕಾಸುಗಳನ್ನು ಹಾಕುತ್ತಿದ್ದರು. ಅದು ದೊಂಬರ ಜೀವನಕ್ಕಾಗಿ. ಇದನ್ನೇ ಬಣ್ಣಿಸಿ ಮುದ್ದುರಾಮ ಹೇಳುತ್ತಾನೆ –

**ಇದೆ ದೊಂಬರಾಟದಲಿ ಕೌಶಲದ ಹುನ್ನಾರು;**
**ತಂತಿ ಮೇಲಿನ ನಡಿಗೆ ಸುಲಭವೇನಲ್ಲ**
**ಮುಗ್ಗರಿಸಿ ಬಿದ್ದರಿದೆ ಕಾಲು ಎಲುಬಿನ ಮುರಿತ;**
**ದೊಂಬರಾಟವೊ ಬಾಳು ಮುದ್ದುರಾಮ.**

ದೊಂಬರಾಟವನ್ನು ಆಡಿ ತೋರಿಸಲು ಕೌಶಲ ಬೇಕು. ಯಾರು ಬೇಕಾದರೂ ಹಾಗೆ ಆಡುವುದು ಸಾಧ್ಯವಿಲ್ಲ. ಆ ಕೌಶಲವನ್ನು ಪಡೆಯಲು ತರಬೇತಿ ಬೇಕು. ಏಕೆಂದರೆ ಹಗ್ಗದ ಅಥವಾ ತಂತಿಯ ಮೇಲಿನ ನಡಿಗೆ ಸುಲಭವಲ್ಲ. ಯಾವ ಘಳಿಗೆಯಲ್ಲಾದರೂ ಎಚ್ಚರಿಕೆ ತಪ್ಪಿದರೆ ಮುಗ್ಗರಿಸಿ ಬೀಳಬೇಕಾಗುತ್ತದೆ. ಬಿದ್ದಾಗ ತಡೆಯಲು ಸುಪ್ಪತ್ತಿಗೆಯನ್ನು ಹಾಸಿರುವುದಿಲ್ಲ. ಬಿದ್ದರೆ ಕಾಲಿನ, ಕೈಯಿನ ಎಲುಬು ಮುರಿಯುವ ಸಂಭವವುಂಟು.

ಬಾಳೂ ಒಂದು ದೊಂಬರಾಟ. ತಂತಿಯ ಮೇಲೆ ನಡೆದಂತೆ. ಅದಕ್ಕೆ ಕೌಶಲ ಬೇಕು. ಎಷ್ಟು ಎಚ್ಚರಿಕೆ ವಹಿಸಿದ್ದರೂ ಒಮ್ಮೊಮ್ಮೆ ಕೆಳಗೆ ಬೀಳುತ್ತೇವೆ. ಮೂಳೆ ಮುರಿಯುವುದೂ ಉಂಟು. ಅದನ್ನು ದುರಸ್ತಿ ಮಾಡಿಕೊಂಡು ಮತ್ತೆ ಆಟಕ್ಕೆ ಸಿದ್ಧರಾಗಬೇಕು. ನಿನ್ನೆ ಸೋತನೆಂಬ ಚಿಂತೆಯನ್ನು ಮನದಿಂದ ತೊಲಗಿಸಿ ಮುಂದೆ ನಡೆಯಬೇಕು. ಮುದ್ದುರಾಮನೆನ್ನುತ್ತಾನೆ –

**ನಿನ್ನೆದುಂದುಗ ನೆನೆದು ಅದನೆ ಮೂಟೆಯ ಮಾಡಿ**
**ಹೆಗಲಿಗೇರಿಸಿಕೊಂಡು ನಡೆದರದು ಭಾರ.**
**ಮರೆ ನಿನ್ನ ಹೆಣಭಾರ; ಹೊರಬಿಸುಡು ಅದ ಬೇಗ**
**ನಗೆಮೊಗದಿ ನಡೆ ಈಗ ಮುದ್ದುರಾಮ॥**

ನಿನ್ನೆಯ ದುಃಖವನ್ನು ನೆನೆದು, ಮತ್ತೆ ಮತ್ತೆ ಸ್ಮರಿಸಿಕೊಂಡು, ಅದನ್ನೇ ಹೆಗಲಮೇಲಿನ ಮೂಟೆಯನ್ನಾಗಿ ಹೊತ್ತು ನಡೆಯುತ್ತಿದ್ದರೆ ಅದು ವೃಥಾಭಾರ. ಆ ಹೆಣಭಾರವನ್ನು ಮರೆತು ಬಿಡು. ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಇಳಿಸಿಕೋ, ಮತ್ತೆ ಹೆಗಲ ಮೇಲೆ ಏರದಂತೆ ದೂರ ಅದನ್ನು ಬಿಸುಟು ಮುಖದಲ್ಲಿ ನಗೆಯನ್ನು ತಂದುಕೊಳ್ಳಬೇಕು. ಶಾಂತ ಜೀವನಕ್ಕೆ ಅದೇ ದಾರಿ. ನಗುಮೊಗದಿಂದಲೇ ಬದುಕನ್ನು ನಡೆಸಬೇಕು. ನಮ್ಮ ಎಲ್ಲಾ ದುಃಖ ದುಮ್ಮಾನಗಳಿಗೆ ಯಾರನ್ನೋ ದೂಷಿಸಬೇಡ. ನಮ್ಮ ಕಷ್ಟ ಸುಖಗಳಿಗೆ ನಾನೇ ಕಾರಣ, ಬೇರೆಯವರಲ್ಲ.

**ಯಾರನೂ ದೂರದಿರು ಯಾವುದೆ ಕಾರಣಕೆ**
**ಎಷ್ಟಿದೆಯೊ ತಲೆ ಮೇಲೆ ಅವರವರ ಭಾರ ।**
**ದೂಷಣೆಗೆ ಬಲಿಯಾಗಿ ನಗೆ ಮರೆತರೇನಿದೆಯೊ**
**ಬಾಳಪಯಣವೆ ಕಿರಿದು ಮುದ್ದುರಾಮ ॥**

ನಮ್ಮ ವೈಫಲ್ಯಗಳಿಗೆ ಯಾರನ್ನೋ ದೂಷಿಸುವುದು ದೊಡ್ಡ ತಪ್ಪು. ಪ್ರತಿಯೊಬ್ಬರಿಗೂ ಅವರವರ ಚಿಂತೆ ಮತ್ತು ಭಾರಗಳಿರುತ್ತವೆ. ಅವರು ನಮ್ಮ ನೆರವಿಗೆ ಬರಲಿಲ್ಲವೆಂದು ಗೊಣಗುವುದು ಸರಿಯಲ್ಲ. ಇನ್ನು ಯಾರೋ ನಮ್ಮನ್ನು ದೂಷಿಸಿದಾಗ ಮುಖ ಗಂಟಿಕ್ಕಿಕೊಂಡು ನಗುವನ್ನು ನಲಿವನ್ನೂ ಮರೆತರೆ ನಮಗೇ ನಷ್ಟ. ನಾಯಿಗಳು ಬೊಗಳುವುವೆಂದು ಆನೆ ಗಾಬರಿಪಡುವುದೇ ಅವರು ಹಾಗೆಂದರು, ಇವರು ಹೀಗೆ ನುಡಿದರೆಂದು ಚಿಂತೆ ಮಾಡುತ್ತಾ ಕುಳಿತುಕೊಳ್ಳುವುದಕ್ಕೆ ಜೀವನ ದೀರ್ಘವಾಗಿಲ್ಲ. ಬಾಳಿನ ಪಯಣದ ಕಾಲ ಕಿರಿದು. **ಯಃ ಪರಂ ಜೀವತಿ ಸ ವರ್ಷಶತಂ ಜೀವತಿ** (ಅಬ್ಬಾಬ್ಬಾ ಎಂದರೂ ಮನುಷ್ಯನು ಜೀವಿಸುವುದು ನೂರು ವರ್ಷ ಅಷ್ಟೆ. ಅಷ್ಟರಲ್ಲಿ ಚೆನ್ನಾಗಿ ಬಾಳಬೇಕು. ನಗುತ್ತಾ ದಾರಿಯನ್ನು ಸವೆಸಬೇಕು.)

**ಇತ್ತ ಬಂದವರೆಲ್ಲ ಇಲ್ಲೆ ಉಳಿದರೆ ನಿತ್ಯ?**
**ಮಣ್ಣಿನಲಿ ಮಣ್ಣಾಗಿ ಹೋಗುವೆಯಾ ಎಂದೋ!**
**ಅರಿತು ಈ ನಿಜವನ್ನು ಬದುಕಬೇಡವೆ ಚೆಂದ?**
**ಬಾಳು ವಾಸ್ತವಮುಖವೊ ಮಂಕುತಿಮ್ಮ ॥**

ಇದುವರೆಗೆ ಭೂಮಿಯಲ್ಲಿ ಹುಟ್ಟಿದ ಮನುಷ್ಯರು ಎಷ್ಟು ಕೋಟಿ? ಯಾರು ಲೆಕ್ಕವಿಟ್ಟಿದ್ದಾರೆ? ಯಾರಾದರೂ ಉಳಿದಿದ್ದಾರೆಯೇ? ರಾಮ, ಕೃಷ್ಣ, ಬುದ್ಧ ಯಾರೂ ಉಳಿಯಲಿಲ್ಲ. ಅಲೆಕ್ಸಾಂಡರ್, ಜ್ಯೂಲಿಯಸ್ ಸೀಸರ್, ಅಶೋಕ, ವಿಕ್ರಮಾದಿತ್ಯ ಎಲ್ಲರೂ, ವಿಶ್ವ ವಿಜೇತರೆಂದು ಹೊಗಳಿಸಿಕೊಂಡವರೂ ಮಣ್ಣಿನಲ್ಲಿ ಮಣ್ಣಾದರು ಅಥವಾ ಬೆಂಕಿಯಲ್ಲಿ ಬೂದಿಯಾದರು. ಅದರ ಹಾಗೆ ನಮ್ಮ ಕಥೆಯೂ, ಬೇರೆಯಲ್ಲ. ಆದ್ದರಿಂದ ಬದುಕುವಷ್ಟು ದಿನ ಚಂದವಾಗಿ ಬದುಕೋಣ–ಬಾಳು ವಾಸ್ತವವನ್ನು ಅವಲಂಬಿಸುತ್ತದೆ. ಯಾವ ಕಾರಣಕ್ಕೂ ಜಗತ್ತು ನಿಂತು ಹೋಗುವುದಿಲ್ಲ. ಗಡಿಯಾರ ಕೆಟ್ಟು ಹೋಯಿತೆಂದು ಕಾಲ ನಿಲ್ಲುವುದಿಲ್ಲ. ವಾಸ್ತವತೆಗೆ ಗಮನವನ್ನು ನೀಡಿ ಬದುಕಬೇಕು. ಕಲ್ಪನೆಯ ವಿಲಾಸದಲ್ಲಿ ಬಾಳು ನಡೆಯುವುದಿಲ್ಲ. ವಾಸ್ತವದ ಪ್ರಾಮುಖ್ಯವನ್ನು ಕವಿ ಮುದ್ದುರಾಮ ಸ್ಪಷ್ಟಪಡಿಸುತ್ತಾನೆ.

**ಕಾಗದದ ದೋಣಿಯಲಿ ನದಿ ದಾಟಲಾರೆ ನೀ**
**ಚಿತ್ರದಂಬಾರಿಯನು ನೀ ಏರಲಾರೆ.**
**ಹೊಲದ ತೆನೆಯನು ನೋಡಿ ಅನ್ನ ಬೇಯಿಸಲಾರೆ**
**ಬದುಕು ವಾಸ್ತವದಲ್ಲಿ ಮುದ್ದುರಾಮ**

ಮಕ್ಕಳು ಆಟಕ್ಕಾಗಿ ಕಾಗದದಿಂದ ದೋಣಿಯನ್ನು ಮಾಡುತ್ತಾರೆ. ಮಳೆ ಬಂದು ನೀರು ಬೀದಿಯಲ್ಲಿ ಹರಿಯುತ್ತಿದ್ದರೆ ಅಲ್ಲಿ ಕಾಗದದ ದೋಣಿಯನ್ನು ತೇಲಿಸಿ ಬಿಡುತ್ತಾರೆ. ಅಷ್ಟು ದೂರ ತೇಲಿ ಹೋಯಿತೆಂದು ಹಿಗ್ಗಿ ಚಪ್ಪಾಳೆ ತಟ್ಟಿ ಕುಣಿಯುತ್ತಾರೆ. ಅದು ಆಟಕ್ಕೆ ಚಂದ. ಆದರೆ ಆ ಕಾಗದದ ದೋಣಿ ನದಿ ದಾಟಲು ನೆರವಾಗಲಾರದು. ಆಟದ ಪ್ರಪಂಚವೇ ಬೇರೆ. ವಾಸ್ತವ ಪ್ರಪಂಚವೇ ಬೇರೆ. ಕಲಾವಿದನು ಗೋಡೆ ಮೇಲೆ ಆನೆ, ಅಂಬಾರಿ, ಚಾಮರ ಎಲ್ಲಾ ಬರೆಯಬಹುದು. ನೋಡಿದವರು ಎಷ್ಟು ಅದ್ಭುತ ಚಿತ್ರ, ಆನೆ ಎಷ್ಟು ಚೆನ್ನಾಗಿದೆ, ಅಂಬಾರಿ ಎಷ್ಟು ಸೊಗಸಾಗಿದೆ ಎಂದು ಹೊಗಳಬಹುದು. ಆದರೆ ಆ ಅಂಬಾರಿಯನ್ನು ಏರುವುದು ಸಾಧ್ಯವೇ? ಚಿತ್ರದಲ್ಲಿರುವ ಹೊಲದ ತೆನೆಗಳನ್ನು ನೋಡಿ ಮೆಚ್ಚಬಹುದು. ಅನ್ನವನ್ನು ಬೇಯಿಸು ವುದಂತೂ ದೂರ ದೂರ. ಬದುಕು ವಾಸ್ತವವನ್ನೇ ಅವಲಂಬಿಸಿದೆ. ಕಾವ್ಯಗಳಲ್ಲಿ ಭೋಜನದ ಅದ್ಭುತ ವರ್ಣನೆಗಳಿವೆ. ಅವುಗಳನ್ನು ಓದಿ ಆನಂದಿಸಬಹುದು. ಆದರೆ ವರ್ಣನೆಯನ್ನು ಓದಿದ ಮಾತ್ರಕ್ಕೆ ಹಸಿವು ಇಂಗುವುದಿಲ್ಲ. ಬದುಕು ಸದಾ ವಾಸ್ತವಾವಲಂಬಿ–ಕಲ್ಪನೆ ಮನಸ್ಸಿಗೆ ಹಿತವೆನಿಸಬಹುದು. ಅದರ ವಸ್ತುಗಳು ನಿಜ ಜೀವನದಲ್ಲಿ ನಿರರ್ಥಕ.

**ಕನಸ ಮಂಡಿಗೆ ತಿನಿಸು ತರದು ರುಚಿ ವಾಸ್ತವದಿ**
**ಸ್ವಪ್ನಸುಂದರಿ ನಯನ ಮಿಟುಕಿಸದು ನಿಜದಿ.**
**ಸಂದ ಗಾಳಿಯ ನಾದ ರಸಿಕನೆದೆ ತಲುಪುವುದೆ?**
**ಜಲಬರಹ ಲಿಪಿಯೇನು? ಮುದ್ದುರಾಮ.**

ಮಂಡಿಗೆಯೆಂಬುದು ತೆಳ್ಳಗಿರುವ ಅಗಲವಾದ ಹೋಳಿಗೆಯಂತಹ ಸಿಹಿ ಭಕ್ಷ್ಯ. ಅದನ್ನೇ ಕುರಿತು ಚಿಂತನೆ ಮಾಡುವವನಿಗೆ ಕತ್ತಲೆಯ ಕನಸಿನಲ್ಲಿ ಮಂಡಿಗೆ ಕಾಣಿಸಬಹುದು. ಆ ಕನಸಿನ ಮಂಡಿಗೆ ಬಾಯಿಗೆ ರುಚಿ ತಾರದು. ಕನಸಿನಲ್ಲಿ ಕಾಣಿಸುವ ಸೊಗಸುಗಾತಿ ಕಣ್ಣನ್ನು ಮಿಟಕಿಸುವುದೂ ಇಲ್ಲ. ಗಾಳಿಯ ನಾದ ಸರಿದು ಹೋಯಿತು. ಅದು ರಸಿಕನ ಎದೆಯನ್ನು ಮುಟ್ಟಲಾರದು. ಜಲಬರಹ ಎಂದರೆ ನೀರಿನಲ್ಲಿ ಬೆರಳಿನಿಂದ ಅಥವಾ ಕಟ್ಟಿಯಿಂದ ನೀರಿನಲ್ಲಿ ಮಾಡಿದ ರೇಖಾವಿನ್ಯಾಸ. ಅದು ಕ್ಷಣಮಾತ್ರದಲ್ಲಿ ಅದೃಶ್ಯವಾಗುತ್ತದೆ. ಅದು ಲಿಪಿಯಲ್ಲ ಎಂದು ಮುದ್ದುರಾಮ ಉಪದೇಶಿಸಿದ್ದಾರೆ.

## ಡಾ.ವಿಷ್ಣು ಪುಣ್ಯಸ್ಮರಣೆ: ಪೌರಕಾರ್ಮಿಕರಿಗೆ ಮಾಸ್ಕ್, ಮಫ್ಲರ್ ಟೋಪಿ ವಿತರಣೆ

### ವಿಷ್ಣು ಅಭಿನಯದ ಚಿತ್ರಗಳು ಕೌಟುಂಬಿಕ ಪ್ರಧಾನ ಚಿತ್ರಗಳು: ಶಾಸಕ ಕೆ.ಹರೀಶ್‌ಗೌಡ



ವಿಷ್ಣುವರ್ಧನ್‌ರ 16ನೇ ವರ್ಷದ ಪುಣ್ಯಸ್ಮರಣೆ ಪ್ರಯುಕ್ತ ಪೌರಕಾರ್ಮಿಕರಿಗೆ ಮಾಸ್ಕ್, ಮಫ್ಲರ್ ಟೋಪಿ ವಿತರಿಸಲಾಯಿತು.

ಮೈಸೂರು,ಡಿ.30(ಜಿಎ)–ಸಾಹಸಸಿಂಹ ವಿಷ್ಣುವರ್ಧನ್ ಅವರ ಪ್ರತಿಯೊಂದು ಚಿತ್ರಗಳು ಕೌಟುಂಬಿಕ ಪ್ರಧಾನವಾಗಿತ್ತು ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದ್ದಾರೆ.

ಮೈಸೂರಿನ ಜಗನ್ಮೋಹನ ಅರಮನೆಯ ಮುಂಭಾಗ ಕರುಣಾಮಯಿ ವಿಷ್ಣುವರ್ಧನ್ ಅಭಿಮಾನಿ ಬಳಗದಿಂದ ವಿಷ್ಣು ವರ್ಧನ್ ಅವರ 16ನೇ ಪುಣ್ಯ ಸ್ಮರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಳಿಗಾಲದ ಹಿನ್ನೆಲೆಯಲ್ಲಿ ಪೌರಕಾರ್ಮಿಕರಿಗೆ ಮಾಸ್ಕ್ ಹಾಗೂ ಮಫ್ಲರ್ ಟೋಪಿ ವಿತರಿಸಿ ಮಾತನಾಡಿ, ವಿಷ್ಣುವರ್ಧನ್ ಸಿನಿಮಾ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಜೊತೆಯಲ್ಲೆ ಚಿತ್ರರಂಗದಲ್ಲಿ ಹೊಸ ಆಯಾಮ ಸೃಷ್ಟಿಸುವಲ್ಲಿ ಕಲಾವಿದರಿಗೆ ಮಾದರಿಯಾಗಿದ್ದರು. ಕನ್ನಡ ನೆಲ ಜಲ ಭಾಷೆಯ ವಿಚಾರಕ್ಕೆ ಧಕ್ಕೆ ಬಂದಾಗ ಧ್ವನಿ ಎತ್ತುತ್ತಿದ್ದರು ಎಂದರು.

ಚಿತ್ರನಗರಿ ಮೈಸೂರಿನಲ್ಲಿ ಸ್ಥಾಪನೆಯ ಪರಿಕಲ್ಪನೆ ನೀಡಿದ್ದೇ ವಿಷ್ಣುವರ್ಧನ್. ಚಿತ್ರ ಬ್ರಹ್ಮ ಪುಟ್ಟಣ್ಣ ಕಣಗಾಲ್ ಗರಡಿಯಲ್ಲಿ ಗುರುತಿಸಿಕೊಂಡ ಅವರು ಎಷ್ಟೇ ಉನ್ನತ ಸ್ಥಾನಕ್ಕೇರಿದರೂ ಸರಳ ಜೀವನದ ಮೂಲಕ ಮಾದರಿಯಾಗಿದ್ದರು. ಎಲ್ಲಾ ಪಾತ್ರಗಳಲ್ಲಿ ನಟಿಸುವ ಮೂಲಕ ಪ್ರತಿಯೊಂದು ಕ್ಷೇತ್ರದ ಜನರ ವಿಶ್ವಾಸಗಳಿಸಿದ್ದರು. ಅವರು ನಟಿಸಿರುವ ಚಿತ್ರಗಳಲ್ಲಿ ಕೆಲ ಜಿಲ್ಲೆಯ ಸ್ಥಳಗಳು ಪ್ರವಾಸೋದ್ಯಮ ತಾಣವಾಗಿವೆ. ಚಾಮುಂಡಿಬೆಟ್ಟದಿಂದ ಚಿತ್ರದುರ್ಗದ ಕೋಟೆವರೆಗೂ ಹೊಸ ಕಲಾವಿದರಿಗೆ ಸ್ಪೂರ್ತಿಯಾಗಿದ್ದರು ಎಂದು ವರ್ಣಿಸಿದರು.

ನಗರವನ್ನು ಸ್ವಚ್ಛಗೊಳಿಸುವ ಮೂಲಕ ಜನರ ಆರೋಗ್ಯ ಕಾಪಾಡುವ ಪೌರಕಾರ್ಮಿಕರ ಆರೋಗ್ಯವೂ ಮುಖ್ಯವಾಗಿದ್ದು, ಅವರು ಈ ವಿಷಯದಲ್ಲಿ ನಿರ್ಲಕ್ಷ್ಯ ತೋರದೆ ಆರೋಗ್ಯದ ಕಡೆ ಗಮನ ಹರಿಸಬೇಕೆಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್ ಕುಮಾರ್, ಪಾಲಿಕೆ ಮಾಜಿ ಸದಸ್ಯ ಎಂ.ಡಿ ಪಾರ್ಥಸಾರಥಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕರುಣಾಮಯಿ ವಿಷ್ಣು ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಎನ್. ರಾಜೇಶ್, ಶ್ರೀ ಕನಕದಾಸ ಪತ್ತಿನ ಸಹಕಾರ ಸಂಘದ ನಿರ್ದೇಶಕ ರವಿಚಂದ್ರ, ಅಜಯ್ ಶಾಸ್ತ್ರಿ, ಗುರುರಾಜ್ ಶೆಟ್ಟಿ, ನವೀನ್, ವಿಪ್ರ ಮುಖಂಡರಾದ ಟಿ.ಎಸ್.ಅರುಣ್, ಉತ್ತನಹಳ್ಳಿ ಶಿವಣ್ಣ, ಆರೋಗ್ಯಾಧಿಕಾರಿ ಕೃಷ್ಣಪ್ಪ, ನಂಜುಂಡಿ, ನಾಗೇಶ್ ಯಾದವ್ ಹಾಗೂ ಪೌರಕಾರ್ಮಿಕ ಸಿಬ್ಬಂದಿ ಉಪಸ್ಥಿತರಿದ್ದರು.

## ಇಂದು ಬಿ.ಎಸ್ಸಿ ನರ್ಸಿಂಗ್, ಎಂ.ಎಸ್ಸಿ ನರ್ಸಿಂಗ್ ಸೀಟುಗಳಿಗೆ ನೇರ ದಾಖಲಾತಿ

ಮೈಸೂರು, ಡಿ.30– ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯದ ವತಿಯಿಂದ ಡಿಸೆಂಬರ್ 31ರಂದು ಮೈಸೂರು ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯದಲ್ಲಿ 2025–26ನೇ ಸಾಲಿನಲ್ಲಿ ಕೆ.ಇ.ಎ ವತಿಯಿಂದ ಹಂಚಿಕೆಯಾಗದೇ ಉಳಿದಿರುವ 81 ಬಿ.ಎಸ್ಸಿ ನರ್ಸಿಂಗ್ ಹಾಗೂ ಸ್ನಾತಕೋತ್ತರ ಪದವಿಗಳಾದ NPCC (5) CHN(Child Health Nursing–3), MHN (meantal Health Nursing–3), CHN(Community Health Nursing–3), OBG Nursing–3 ಸೀಟುಗಳನ್ನು ನೇರ ದಾಖಲಾತಿ ಮೂಲಕ ಭರ್ತಿ ಮಾಡಲಾಗುವುದು. ದ್ವಿತೀಯ ವರ್ಷ ಪಿಯುಸಿಯನ್ನು ವಿಜ್ಞಾನ ವಿಭಾಗದಲ್ಲಿ ತೇರ್ಗಡೆ ಹೊಂದಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ 2024–25ನೇ ಸಾಲಿನಲ್ಲಿ ನೋಂದಾಯಿಸಿಕೊಂಡ ವಿದ್ಯಾರ್ಥಿಗಳು KEA Verification Slip, SSLC and PUC Original Mark Card, Study Certificate, Cast and Income Certificate ದಾಖಲೆಗಳೊಂದಿಗೆ ಪ್ರಾಂಶುಪಾಲರ ಕಚೇರಿಯಲ್ಲಿ ಡಿಸೆಂಬರ್ 31ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆಯ ಒಳಗೆ ಹಾಜರಾಗಬೇಕಾಗಿ ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯದ ಪ್ರಾಂಶುಪಾಲರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮೈಸೂರು ಜಿಲ್ಲಾ ಅರ್ಥಶಾಸ್ತ್ರ ವೇದಿಕೆ...



ಮೈಸೂರಿನ ಮಂಚೇಗೌಡನಕೊಪ್ಪಲಿನ ಪದವಿ ಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಮೈಸೂರು ಜಿಲ್ಲಾ ಅರ್ಥಶಾಸ್ತ್ರ ವೇದಿಕೆ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ವಿವೇಕಾನಂದ ಉದ್ಘಾಟಿಸಿದರು. ಈ ವೇಳೆ ಕಾಂಗ್ರೆಸ್ ಮುಖಂಡ ರವಿ ಮಂಚೇಗೌಡನಕೊಪ್ಪಲು ಇನ್ನಿತರರು ಉಪಸ್ಥಿತರಿದ್ದರು.

## ಮೈಸೂರಿನ ಸಂತಸ ಫರ್ಟಿಲಿಟಿ ಸಂಸ್ಥೆಯಲ್ಲಿ ನೂತನ ಚಿಕಿತ್ಸಾ ವ್ಯವಸ್ಥೆ

### ಸ್ಟೇಮ್ ಸೆಲ್ ಆಧಾರಿತ, ಕೃತಕ ಬುದ್ಧಿಮತ್ತೆ ಚಾಲಿತ ಫಲವತ್ತತೆ ಚಿಕಿತ್ಸೆ




ಲಕ್ಷ್ಮೀಪುರಂನಲ್ಲಿರುವ ಸಂತಸ ಫರ್ಟಿಲಿಟಿ ಸಂಸ್ಥೆಯಲ್ಲಿ ಅತ್ಯಾಧುನಿಕ ಹಾಗೂ ಉನ್ನತ ಮೂಲ ವ್ಯವಸ್ಥೆಗೆ ಚಾಲನೆ ನೀಡಲಾಯಿತು.

ಮೈಸೂರು, ಡಿ.30(ಜಿಎ)–ಮೈಸೂರಿನ ಲಕ್ಷ್ಮೀಪುರನಲ್ಲಿರುವ ಸಂತಸ ಫರ್ಟಿಲಿಟಿ ಸಂಸ್ಥೆಯಲ್ಲಿ ಸ್ಟೆಮ್ ಸೆಲ್ ಆಧಾರಿತ ಮತ್ತು ಕೃತಕ ಬುದ್ಧಿಮತ್ತೆ (ಎಐ) ಚಾಲಿತ ನೂತನ ಫಲವತ್ತತಾ ಚಿಕಿತ್ಸೆ ಅಧಿಕೃತವಾಗಿ ಆರಂಭಗೊಂಡಿತ್ತು.

ಅತ್ಯಾಧುನಿಕ ಸುಂದರ ಮೂಲ ಸೌಕರ್ಯಗಳಿಗೆ ಚಾಲನೆ ಹಾಗೂ ವಿಸ್ತರಣಾ ಸಮಾರಂಭಕ್ಕೆ ಖ್ಯಾತ ಸಾಹಿತಿ ಡಾ.ಲತಾ ರಾಜಶೇಖರ್, ಡಾ.ರಾಜಶೇಖರ್, ಶಾಸಕ ಟಿ.ಎಸ್.ಶ್ರೀವತ್ಸ, ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಬಿಜೆಪಿ ಮುಖಂಡರಾದ ಹೇಮಾ ನಂದೀಶ್, ಜಿಲ್ಲಾ ಸರ್ವೆಲೆನ್ಸ್ ಅಧಿಕಾರಿ ಡಾ.ನಾಗರಾಜ್, ಡಿಹೆಚ್‌ಓ ಕುಮಾರಸ್ವಾಮಿ, ಹಿರಿಯ ವೈದ್ಯ ಡಾ.ಜಾವೇದ್ ನಯೀಮ್, ಡಾ.ಎಸ್.ಪಿ. ಯೋಗಣ್ಣ, ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ರಘುಲಾಲ್ ಮೆಡಿಕಲ್ ಮುಖ್ಯಸ್ಥರಾದ ರಾಘವನ್, ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಮಾಜಿ ಎಂಎಲ್‌ಸಿ ತೋಂಟದಾರ್ಯ, ಎಂ.ಚಂದ್ರಶೇಖರ್, ಡಾ.ಸೀಮಾ ಸೇರಿದಂತೆ ಹಲವು ಗಣ್ಯರು ಶುಭ ಹಾರೈಸಿದರು.

ಈ ವೇಳೆ ಸಂತಸ ಸಂಸ್ಥಾಪಕ ನಿರ್ದೇಶಕಿ ಡಾ.ಸೌಮ್ಯ ದಿನೇಶ್ ಮಾತನಾಡಿ, ಮೈಸೂರು ಪ್ರದೇಶದಲ್ಲಿ ಫಲವತ್ತತಾ ಚಿಕಿತ್ಸೆಯ ಮುಂಚೂಣಿ ಸಂಸ್ಥೆಯಾಗಿರುವ ಸಂತಸ, ಮೂಲ ಚಿಕಿತ್ಸೆಯಿಂದ ಹಿಡಿದು ಸ್ಟೆಮ್ ಸೆಲ್ ಮತ್ತು ಎಕ್ಸೋಸೋಮ್ ಆಧಾರಿತ ಚಿಕಿತ್ಸೆಗಳು, ಅಂಡಾಶಯ ಪುನರುಜ್ಜೀವನ (ಒವೇರಿಯನ್ ರಿಜುವಿನೇಷನ್), ಅಂಡಾಣು ಸಂರಕ್ಷಣೆ (ಎಗ್ ಫ್ರೀಜಿಂಗ್), ಲೇಸರ್ ಸಹಾಯಕ ಬ್ಲಾಸ್ಟೋಸಿಸ್ಟ್ ಹ್ಯಾಚಿಂಗ್ ಹಾಗೂ ನೈತಿಕ ಮತ್ತು ಕಾನೂನುಬದ್ಧ ಸರೋಗಸಿ ಸೇರಿದಂತೆ ಸಂಪೂರ್ಣ ಫಲವತ್ತತಾ ಸೇವೆಗಳನ್ನು ಒದಗಿಸುತ್ತಿದೆ ಎಂದು ತಿಳಿಸಿದರು.

ಗರ್ಭದೊಳಗಿನ ಅಮ್ನಿಯೋಟಿಕ್ ದ್ರವ ಸೋರಿಕೆಯನ್ನು ತಡೆಯುವ ಉದ್ದೇಶದಿಂದ ಇಂಟ್ರಾ–ಅಮ್ನಿಯೋಟಿಕ್ ಪ್ಲೇಟ್ಲೆಟ್ ರಿಚ್ ಫೈಬ್ರಿನ್ (PRF) ಬಳಸಿ ಜಗತ್ತಿನ ಮೊದಲ ಚಿಕಿತ್ಸೆಯನ್ನು ಅಭಿವೃದ್ಧಿ ಪಡಿಸುವ ಮೂಲಕ ಸಂತಸ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ.


ಜೊತೆಗೆ, ಆರ್ಥಿಕವಾಗಿ ಹಿಂದುಳಿದ ಸಂತಾನಹೀನ ದಂಪತಿಗಳಿಗೆ ನೆರವು ನೀಡುವ ಧನಾತ್ಮಕ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಿದೆ. ಸಂತಾನಾಪೇಕ್ಷೆಯಿರುವ ದಂಪತಿಗಳಿಗಾಗಿ ಡಿ.31ರಂದು ಉಚಿತ ಫಲವತ್ತತಾ ಶಿಬಿರವನ್ನು ಆಯೋಜಿಸಲಾಗಿದೆ ಎಂದರು.

ಸಂತಸದ ಮುಖ್ಯ ಎಂಬ್ರಿಯೋಲಜಿಸ್ಟ್ ಡಾ.ಯೋಗಿತಾರಾವ್ ಮಾತನಾಡಿ, ಐವಿಎಫ್ ಚಿಕಿತ್ಸೆಯಲ್ಲಿ ಗರ್ಭಧಾರಣೆಯ ಸಾಧ್ಯತೆಯನ್ನು ಹೆಚ್ಚಿಸಲು ಎಐ ಚಾಲಿತ ಆಂಡ್ರಾಲಜಿ ಮತ್ತು ಎಂಬ್ರಿಯೋಲಜಿ ಮಹತ್ವದ ಹೊಸ ಸಾಧನವಾಗಿದ್ದು, ಮಾನವ ಕಣ್ಣಿಗೆ ಗೋಚರಿಸದ ಸೂಕ್ಷ್ಮ ಅಸಮಾನತೆಗಳು ಮತ್ತು ಮಾದರಿಗಳನ್ನು ಕೃತಕ ಬುದ್ಧಿಮತ್ತೆ ಮೂಲಕ ಗುರುತಿಸಲು ಸಾಧ್ಯವಾಗುತ್ತದೆ ಎಂದು ವಿವರಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಬುಧವಾರ 31 ಡಿಸೆಂಬರ್ 2025



ಭಾನು ಮುಷ್ತಾಕ್‌ರಿಂದ ದಸರಾ ಉದ್ಘಾಟನೆ.





ಶೃಂಗೇರಿ ಶ್ರೀಗಳ ಸಮ್ಮುಖದಲ್ಲಿ ಸ್ತುತಿ ಶಂಕರ ಸ್ತೋತ್ರ ಪಾರಾಯಣ

# ಪ್ರಮುಖ ಘಟನಾವಳಿಗಳು

## ಸೆಪ್ಟೆಂಬರ್



ಸೆ. 1 **ಮೈಸೂರಿನ ಆಯಿಷ್ ದೇಶದ ಹೆಮ್ಮೆ, ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರಶಂಸೆ, ಆಯಿಷ್ ವಜ್ರ ಮಹೋತ್ಸವದ ಅಂಗವಾಗಿ ಲಾಂಛನ, ಲಕೋಟೆ ಬಿಡುಗಡೆ**

ಸೆ. 3 ಕೇಂದ್ರದಿಂದ ಬಡವರು, ಜನಸಾಮಾನ್ಯರಿಗೆ ದಸರಾ, ದೀಪಾವಳಿ ಕೊಡುಗೆಯಾಗಿ ಜಿಎಸ್‌ಟಿ ಬಿಗ್ ರಿಲೀಫ್

ಸೆ. 4 ರಾಜ್ಯಪಾಲ, ಸಿಎಂ, ಡಿಸಿಎಂ, ಸಚಿವರಿಗೆ ದಸರಾ ಉತ್ಸವಕ್ಕೆ ಆಹ್ವಾನ

ಸೆ. 8 ಗಣೇಶಮೂರ್ತಿ ಮೆರವಣಿಗೆ ವೇಳೆ ಕಲ್ಲು ತೂರಾಟ ಪ್ರಕರಣ ಖಂಡಿಸಿ ಪ್ರತಿಭಟನಾ ರ್‍ಯಾಲಿ ವೇಳೆಯೂ ಕಲ್ಲು ತೂರಿ, ಬಾವುಟ ಕಿತ್ತೆಸೆದು ಆಕ್ರೋಶ, ಮದ್ದೂರಲ್ಲಿ ಲಾಠಿ ಚಾರ್ಜ್, ಉದ್ವಿಗ್ನ ಪರಿಸ್ಥಿತಿ

ಸೆ. 9 ಗಣೇಶಮೂರ್ತಿ ಮೆರವಣಿಗೆ ವೇಳೆ ಕಲ್ಲು ತೂರಾಟ ಖಂಡಿಸಿ: ಮದ್ದೂರು ಬಂದ್ ಯಶಸ್ವಿ

ಸೆ. 10 ತಾರಾ ಮೆರಗಿನೊಂದಿಗೆ ಯುವ ಸಂಭ್ರಮಕ್ಕೆ ವರ್ಣರಂಜಿತ ಚಾಲನೆ

ಸೆ. 11 ಡಾ.ವಿಷ್ಣುವರ್ಧನ್, ಬಿ.ಸರೋಜಾದೇವಿಗೆ ಕರ್ನಾಟಕ ರತ್ನ ಗೌರವ, ಕುವೆಂಪುಗೆ ಭಾರತ ರತ್ನಕ್ಕೆ ಶಿಫಾರಸು



ಸೆ. 12 **ಹಾಸನ: ಗಣೇಶಮೂರ್ತಿ ಮೆರವಣಿಗೆ ಮೇಲೆ ನುಗ್ಗಿದ ಕ್ಯಾಂಟರ್ : 10 ಮಂದಿ ದುರ್ಮರಣ**

ಸೆ. 13 ರಾಜ್ಯದಲ್ಲಿ ದೇಶದಲ್ಲೇ ಮೊಟ್ಟ ಮೊದಲ ಸೈಬರ್ ಕಮಾಂಡ್ ಸೆಂಟರ್ ಸ್ಥಾಪನೆ

ಸೆ. 13 ಸೆಪ್ಟೆಂಬರ್ 22ರಿಂದ ಜಾತಿಗಣತಿ

ಸೆ. 13 ಮಳವಳ್ಳಿ : ಗಗನಚುಕ್ಕಿ ಜಲಪಾತೋತ್ಸವಕ್ಕೆ ಚಾಲನೆ

ಸೆ. 16 ಮುಡಾ ಮಾಜಿ ಆಯುಕ್ತ ದಿನೇಶ್‌ಕುಮಾರ್ ಇಡಿ ವಶಕ್ಕೆ

ಸೆ. 20 **ಮಲೆಯಾಳಂ ನಟ ಮೋಹನ್‌ಲಾಲ್‌ಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ**



ಸೆ. 22 **ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅವರಿಂದ ದಸರಾ ಉದ್ಘಾಟನೆ**

ಸೆ. 22 ಸಂಗೀತ ಸಾಧಕ ಪಂಡಿತ್ ಎಂ.ವೆಂಕಟೇಶ್‌ಕುಮಾರ್ ಅವರಿಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ



ಎಸ್.ಎಲ್.ಭೈರಪ್ಪ

ಸೆ. 24 **ಖ್ಯಾತ ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಇನ್ನಿಲ್ಲ**

ಸೆ. 26 ಮೈಸೂರಲ್ಲಿ ಸಕಲ ಗೌರವದೊಂದಿಗೆ ಎಸ್.ಎಲ್.ಭೈರಪ್ಪನವರ ಅಂತ್ಯಕ್ರಿಯೆ

ಸೆ. 27 ತಮಿಳುನಾಡು ಟಿವಿಕೆ ನಾಯಕ-ನಟ ವಿಜಯ್‌ರ ಕರೂರು ಪ್ರಚಾರ ರ್‍ಯಾಲಿಯಲ್ಲಿ ಕಾಲ್ತುಳಿತ: 38 ಮಂದಿ ಸಾವು




ಸೆ. 28 **ಭಾರತದ ಮಡಿಲಿಗೆ ಏಷ್ಯಾಕಪ್**

ಸೆ. 29 ನೇಮಕಾತಿ ವಯೋಮಿತಿ ಮೂರು ವರ್ಷ ಸಡಿಲಿಕೆ

## ಅಕ್ಟೋಬರ್

ಅ. 2 ಮೈಸೂರಲ್ಲಿ ಅದ್ಧೂರಿ ಜಂಬೂ ಸವಾರಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಗಣ್ಯರಿಂದ ನಾಡದೇವತೆ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ



ಟಿಜೆಎಸ್ ಜಾರ್ಜ್

ಅ. 3 ಮೈಸೂರು ನಗರ ಪ್ರದಕ್ಷಿಣೆ ಮೂಲಕ ದೀಪಾಲಂಕಾರ ವೀಕ್ಷಿಸಿದ ಸಿಎಂ ದಿಲ್‌ಖುಷ್

ಅ. 3 **ಖ್ಯಾತ ಪತ್ರಕರ್ತ, ಲೇಖಕ ಟಿಜೆಎಸ್ ಜಾರ್ಜ್ ಇನ್ನಿಲ್ಲ**



ಡಿ.ಮಾದೇಗೌಡ ಯು.ಟಿ.ಖಾದರ್

ಅ. 5 **ಡಿ.ಮಾದೇಗೌಡ, ಯು.ಟಿ. ಖಾದರ್ ಸೇರಿ ಮೂವರಿಗೆ ಬೆಂಗಳೂರು ವಿವಿಯಿಂದ ಗೌರವ ಡಾಕ್ಟರೇಟ್**

ಅ. 6 ವೈದ್ಯಕೀಯ ಕ್ಷೇತ್ರದಲ್ಲಿನ ಮಾನವೀಯ ಕೆಲಸಕ್ಕೆ ಮೇರಿ ಈ. ಬ್ರಂಕೋ, ಫ್ರೆಡ್ ರಾಮ್ಸ್‌ಡೆಲ್, ಶಿಮೋನ್ ಸಕಾಗುಚಿ ಅವರಿಗೆ ನೋಬೆಲ್ ಪ್ರಶಸ್ತಿ



ಚಾಮುಂಡಿ ತೆಪ್ಪೋತ್ಸವ.

ಅ. 7 ಮೈಸೂರಲ್ಲಿ ಹಾಡ ಹಗಲೇ ವ್ಯಕ್ತಿ ಕೊಚ್ಚಿ ಕೊಲೆ

ಅ. 8 **ಚಾಮುಂಡಿಬೆಟ್ಟದಲ್ಲಿ ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯ ತೆಪ್ಪೋತ್ಸವ**

ಅ. 9 ಮೈಸೂರಿನ ದಸರಾ ವಸ್ತು ಪ್ರದರ್ಶನದ ಬಳಿ ಅಪ್ರಾಪ್ತ ಬಾಲಕಿ ಅತ್ಯಾಚಾರ-ಹತ್ಯೆ

ಅ. 9 ಕೊಡಗಿನ ವಸತಿ ಶಾಲೆಯಲ್ಲಿ ಅಗ್ನಿ ಅವಘಡ : ಓರ್ವ ಬಾಲಕ ಸಾವು, ಮೂವರಿಗೆ ಗಾಯ



ಅ. 12 **ಆರ್‌ಎಸ್‌ಎಸ್ ಶತಮಾನೋತ್ಸವ: ಮೈಸೂರಲ್ಲಿ ಸ್ವಯಂ ಸೇವಕರಿಂದ ಭಾರೀ ಪಥ ಸಂಚಲನ**

ಅ. 12 ಮೈಸೂರು; ಫಾಸ್ಟ್‌ಫುಡ್‌ನ ಕುದಿಯುವ ಎಣ್ಣೆ ಮೈಮೇಲೆ ಚೆಲ್ಲಿ ಮಗು ದುರ್ಮರಣ

ಅ. 13 ಮೈಸೂರಲ್ಲಿ ರೌಡಿ ಪ್ರತಿಬಂಧಕ ದಳ ಮತ್ತೆ ಅಸ್ತಿತ್ವಕ್ಕೆ

ಅ. 19 ಮೈಸೂರು ಮಿತ್ರ ಮತ್ತು ಸ್ಟಾರ್ ಆಫ್ ಮೈಸೂರ್ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಸ್ಮರಣಾರ್ಥ ಓಟದ ಸ್ಪರ್ಧೆ

ಅ. 20 ಹಾಸನಾಂಬೆ ದರ್ಶನ ಮುಗಿಸಿ ಮರಳುತ್ತಿದ್ದಾಗ ಬೈಕ್‌ಗೆ ಇನ್ನೋವಾ ಕಾರು ಡಿಕ್ಕಿ: ಸ್ಥಳದಲ್ಲೇ ಇಬ್ಬರ ದುರ್ಮರಣ

ಅ. 23 ವರುಣಾ ಪೊಲೀಸ್ ಠಾಣೆ ವ್ಯಾಪ್ತಿಯ ಐಷಾರಾಮಿ ಬಂಗಲೆಯಲ್ಲಿ ಭ್ರೂಣ ಲಿಂಗ ಪತ್ತೆ, ಹತ್ಯೆ ದಂಧೆ

ಅ. 23 ಮಡಿಕೇರಿ : ಲಾರಿಯಿಂದ ಕಾರಿಗೆ ಡಿಕ್ಕಿ ಹೊಡೆಸಿ ಉದ್ಯಮಿ ಹತ್ಯೆಗೆ ಯತ್ನ

ಅ. 24 ಹೈದರಾಬಾದ್ : ಬೆಂಗಳೂರು-ಹೈದರಾಬಾದ್ ಹೆದ್ದಾರಿಯಲ್ಲಿ ಬಸ್ ಬೆಂಕಿಗೆ 20 ಜನ ಭಸ್ಮ, ಒಂದೇ ಕುಟುಂಬದ ನಾಲ್ವರು ದುರ್ಮರಣ

ಅ. 25 ಗುಂಡ್ಲುಪೇಟೆ: ಟಿಪ್ಪರ್-ಕಾರು ಡಿಕ್ಕಿ: ದಂಪತಿ ಸಾವು

ಅ. 28 ಬೆಂಗಳೂರು: ಆರ್‌ಎಸ್‌ಎಸ್ ನಿರ್ಬಂಧಕ್ಕೆ ಹೈಕೋರ್ಟ್ ಬ್ರೇಕ್

ಅ.29 ರಾಹುಲ್ ಗಾಂಧಿಯಂತೆ ಸಿದ್ದರಾಮಯ್ಯ ಕಾಂಗ್ರೆಸ್‌ಗೆ ಅನಿವಾರ್ಯ

ಅ. 30 ಬೆಂಗಳೂರು: ಪ್ರಕಾಶ್‌ರಾಜ್, ವಿಜಯಲಕ್ಷ್ಮಿ ಸಿಂಗ್, ಮೈಮ್ ರಮೇಶ್, ರಹಮತ್ ತರೀಕೆರೆ ಸೇರಿ 70 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ; ಮೈಸೂರಿನ ಡಾ.ಎನ್.ಎಸ್.ರಾಮೇಗೌಡ, ಅಂಶಿ ಪ್ರಸನ್ನಕುಮಾರ್, ಎಲ್.ಮಹದೇವಪ್ಪ ಉಡಿಗಾಲ, ಪ್ರೊ.ಕೆ. ರಾಮಮೂರ್ತಿರಾವ್, ಯೋಗೇಂದ್ರ, ಎಲ್.ಹೇಮಾಶೇಖರ್‌ಗೆ ರಾಜ್ಯೋತ್ಸವ ಪುರಸ್ಕಾರ



ಉಮಾಶ್ರೀ

ಅ. 30 **ಹಿರಿಯ ನಟಿ ಉಮಾಶ್ರೀಗೆ ಡಾ.ರಾಜಕುಮಾರ್ ಪ್ರಶಸ್ತಿ**

ಅ. 31 ಸರಗೂರು ಬಳಿ ಹುಲಿ ದಾಳಿಗೆ ಮತ್ತೊಬ್ಬ ರೈತ ಬಲಿ

## ನವೆಂಬರ್





ನ. 2 **ಭಾರತ ವನಿತೆಯರಿಗೆ ಚೊಚ್ಚಲ ಐಸಿಸಿ ವಿಶ್ವಕಪ್ ಕಿರೀಟ**

ನ. 2 ಟ್ರೇಡಿಂಗ್‌ನಲ್ಲಿ ಅಧಿಕ ಲಾಭದ ಆಸೆ ತೋರಿಸಿ 125 ಮಂದಿಗೆ ಸುಮಾರು 80 ಕೋಟಿ ರೂ. ಪಂಗನಾಮ

ನ. 2 ನಂಜನಗೂಡಲ್ಲಿ ಬೈಕಿಗೆ ಸಾರಿಗೆ ಬಸ್ ಡಿಕ್ಕಿ : ತಂದೆ-ತಾಯಿ, ಮಗ ಸಾವು

ನ.3 ಗ್ರೇಟರ್ ಮೈಸೂರು ಭಾಗ್ಯ, ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಭೆಯಲ್ಲಿ ಮಹತ್ವದ ನಿರ್ಧಾರ

ನ. 4 ಇ-ಸ್ವತ್ತು ಸಮರ್ಪಕ ಅನುಷ್ಠಾನ

ನ. 5 ನಂದಿನಿ ತುಪ್ಪದ ದರ 90 ರೂ. ಏರಿಕೆ

ನ. 6 **ಕೆಜಿಎಫ್ ಚಾಚಾ ಖ್ಯಾತಿಯ ಹರೀಶ್ ರಾಯ್ ನಿಧನ**



ಹರೀಶ್‌ರಾಯ್

ನ. 7 ಸರಗೂರು ತಾಲೂಕಲ್ಲಿ ಹುಲಿಗೆ ಮತ್ತೊಬ್ಬ ರೈತ ಬಲಿ

ನ. 7 ಟನ್ ಕಬ್ಬಿಗೆ 3300 ರೂ. ದರ ನಿಗದಿ

ನ. 9 ಸರಗೂರು ಬಳಿ ಮಧ್ಯರಾತ್ರಿ ಕೂಂಬಿಂಗ್‌ನಲ್ಲಿ ಹುಲಿ ಸೆರೆ



ಚಾಮುಂಡಿಬೆಟ್ಟಕ್ಕೆ ಸಿ.ಪಿ.ರಾಧಾಕೃಷ್ಣನ್ ಭೇಟಿ

ನ. 9 **ಚಾಮುಂಡಿ ಬೆಟ್ಟಕ್ಕೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಭೇಟಿ**

ನ. 10 ದೆಹಲಿಯಲ್ಲಿ ಸ್ಫೋಟ: 13ಕ್ಕೂ ಅಧಿಕ ಮಂದಿ ಸಾವು

ನ. 11 ರೇಪ್‌ಗಳಂತಹ ಘೋರ ಅಪರಾಧಗಳಿಗೆ ಪೊಲೀಸ್ ಕಮೀಷನರ್ ಹೊಣೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ

ನ. 12 20.50 ಲಕ್ಷ ಡಿಜಿಟಲ್ ಅರೆಸ್ಟ್ ವಂಚನೆ : ಮೈಸೂರಿನ ಯುವತಿ ಬಂಧನ

ನ. 12 ಮೈಸೂರಲ್ಲಿ ಆಟೋ ಪ್ರಯಾಣ ದರ ಕನಿಷ್ಠ 36 ರೂ., ಹೆಚ್ಚುವರಿ ಕಿ.ಮೀ.ಗೆ 18 ರೂ. ಹೆಚ್ಚಳ

ನ. 14 ಬಿಹಾರದಲ್ಲಿ ಎನ್‌ಡಿಎ ಪಾರುಪತ್ಯ ವಿಧಾನಸಭೆಯ ಒಟ್ಟು 243ರಲ್ಲಿ 202 ಕ್ಷೇತ್ರದಲ್ಲಿ ಜಯಭೇರಿ

ನ. 14 **ವೃಕ್ಷಮಾತೆ, ಶತಾಯುಷಿ ಸಾಲುಮರದ ತಿಮ್ಮಕ್ಕ ಇನ್ನಿಲ್ಲ**



ಸಾಲುಮರದ ತಿಮ್ಮಕ್ಕ

ನ. 15 ಕೊಡಗಿನ ಚೆಕ್‌ಪೋಸ್ಟ್‌ನಲ್ಲಿ ಸಿಕ್ತು ಮೈಸೂರು ಮಹಿಳೆ ಶವ; ಆಕೆ ಪತಿ ಸೇರಿ ಮೂವರ ವಿಚಾರಣೆ

ನ. 16 50 ಕೋಟಿ ರೂ. ವೆಚ್ಚದಲ್ಲಿ 13 ಕೆರೆಗಳ ಪುನರುಜ್ಜೀವನ

ನ. 17 ಸೌದಿಯಲ್ಲಿ ಡೀಸೆಲ್ ಟ್ಯಾಂಕರ್‌ಗೆ ಬಸ್ ಡಿಕ್ಕಿ: ಕನ್ನಡಿಗ ಸೇರಿ 46 ಭಾರತೀಯ ಯಾತ್ರಿಕರು ಸಜೀವ ದಹನ



ಶೇಖ್ ಹಸೀನಾ

ನ. 17 **ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸಿನಾಗೆ ಗಲ್ಲು ಶಿಕ್ಷೆ ಘೋಷಣೆ**

ನ. 19 ಬೆಂಗಳೂರಲ್ಲಿ ಹಾಡಹಗಲೇ ಎಟಿಎಂ ವಾಹನ ಹೈಜಾಕ್; 7.11 ಕೋಟಿ ದರೋಡೆ

ನ. 19 ಶಬರಿಮಲೆಯಲ್ಲಿ ಭಕ್ತಸಾಗರ; ಭಯದ ವಾತಾವರಣ

ನ. 20 ಡ್ರಾಪ್ ಕೊಡುವ ನೆಪದಲ್ಲಿ ಕಾರು ಹತ್ತಿಸಿಕೊಂಡು ನಿರ್ಜನ ಪ್ರದೇಶದಲ್ಲಿ ಸುಲಿಗೆ ಮಾಡುತ್ತಿದ್ದ ಖದೀಮ ಇಂಜಿನಿಯರಿಂಗ್ ವಿದ್ಯಾರ್ಥಿಗಳ ಬಂಧನ

ನ. 21 ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾಗಿ ಹೆಚ್.ಡಿ.ದೇವೇಗೌಡ, ರಾಜ್ಯಾಧ್ಯಕ್ಷರಾಗಿ ಹೆಚ್.ಡಿ.ಕುಮಾರಸ್ವಾಮಿ ಅವಿರೋಧ ಆಯ್ಕೆ



ನ. 23 **ಚೊಚ್ಚಲ ಅಂಧರ ಟಿ20 ವಿಶ್ವಕಪ್ ಗೆದ್ದ ಮಹಿಳಾ ಕ್ರಿಕೆಟ್ ತಂಡ**



ಧರ್ಮೇಂದ್ರ ಉಮೇಶ್

ನ.24 **ಬಾಲಿವುಡ್ ಹಿರಿಯ ನಟ ಧರ್ಮೇಂದ್ರ ಇನ್ನಿಲ್ಲ**

ನ. 28 ಉಡುಪಿಯಲ್ಲಿ ಲಕ್ಷ ಕಂಠ ಗೀತಾ ಪಾರಾಯಣದಲ್ಲಿ ಪ್ರಧಾನಿ ಭಾಗಿ, ಗೀತೆಯ 15ನೇ ಅಧ್ಯಾಯ ಪಠಣ, ಸ್ವರ್ಣಲೇಪಿತ ಕನಕನ ಕಿಂಡಿ ಅನಾವರಣ

ನ.30 ಮೇಲುಕೋಟೆ ಬಳಿ ರೌಡಿಶೀಟರ್ ಭೀಕರ ಹತ್ಯೆ

ನ. 30 ಮೈಸೂರು: 42 ದಿನದಲ್ಲಿ 22 ಹುಲಿಗಳ ಸೆರೆ

ನ. 30 **ಹಾಸ್ಯ ನಟ ಉಮೇಶ್ ನಿಧನ**

## ಡಿಸೆಂಬರ್

ಡಿ. 3 ಕಾಫಿ ತೋಟದಲ್ಲಿ ನಾಪತ್ತೆಯಾಗಿದ್ದ ಮಗು ಪತ್ತೆ ಹಚ್ಚಿದ ಓರಿಯೋ

ಡಿ. 4 ಶಾಲಾ ಶಿಕ್ಷಕರಿಗೆ ಟಿಇಟಿ ಪ್ರಮಾಣಪತ್ರ ಕಡ್ಡಾಯವಿಲ್ಲ

ಡಿ. 4 ಮನೆಗಳ್ಳತನ ಸಂಬಂಧ ಇಂಜಿನಿಯರ್ ಬಂಧನ



ಭಾರತಕ್ಕೆ ಭೇಟಿ ನೀಡಿದ ರಷ್ಯಾ ಅಧ್ಯಕ್ಷ ಪುಟಿನ್-ಮೋದಿ ಸಂಭ್ರಮ

ಡಿ. 4 **ಭಾರತಕ್ಕೆ ಬಂದ ರಷ್ಯಾ ಅಧ್ಯಕ್ಷ ಪುಟಿನ್; ದೆಹಲಿ ವಿಮಾನ ನಿಲ್ದಾಣದಲ್ಲಿ ಖುದ್ದು ಸ್ವಾಗತಿಸಿದ ಪ್ರಧಾನಿ ಮೋದಿ**

ಡಿ. 5 ಭಾರತಕ್ಕೆ ತೈಲ ಸರಬರಾಜು ನಿಲ್ಲಲ್ಲ; ರುಪಾಯಿ-ರುಬೆಲ್‌ನಲ್ಲೇ ವ್ಯವಹಾರ; ರಷ್ಯಾ ಅಧ್ಯಕ್ಷ ಪುಟಿನ್ ಘೋಷಣೆ

ಡಿ. 6 ದಕ್ಷಿಣ ಆಫ್ರಿಕಾ ವಿರುದ್ಧದ ಏಕದಿನ ಸರಣಿ: ಭಾರತದ ಕೈವಶ

ಡಿ. 7 ಕೆಎಸ್‌ಸಿಎ ಅಧ್ಯಕ್ಷರಾಗಿ ವೆಂಕಟೇಶ್ ಪ್ರಸಾದ್ ಆಯ್ಕೆ

ಡಿ.10 ಸಂರಕ್ಷಣೆಯಲ್ಲಿದ್ದ ನಾಲ್ಕು ಹುಲಿ ಮರಿಗಳು ಸಾವು

ಡಿ. 10 ಮಡಿಕೇರಿ: ಪತ್ನಿಯೂ ಸೇರಿದಂತೆ ನಾಲ್ವರ ಹತ್ಯೆ : ಅಪರಾಧಿಗೆ ಗಲ್ಲು ಶಿಕ್ಷೆ

ಡಿ. 11 ಮೈಸೂರು ಅರಮನೆ ಮಹಾದ್ವಾರದ ಮೇಲ್ಚಾವಣಿ ಕಾಂಕ್ರೀಟ್ ಕುಸಿತ

ಡಿ. 13 ಮೈಸೂರಲ್ಲಿ ಅದ್ಧೂರಿ ಹನುಮನ ಉತ್ಸವ



ಶಿವಶಂಕರಪ್ಪ

ಡಿ. 14 ಹಿರಿಯ ಕಾಂಗ್ರೆಸ್ ಮುಖಂಡ ಶಾಮನೂರು ಶಿವಶಂಕರಪ್ಪ ಇನ್ನಿಲ್ಲ

ಡಿ. 14 ಸಿಡ್ನಿ ಬೊಂಡಿ ಬೀಚ್‌ನಲ್ಲಿ ಯಹೂದಿಗಳ ಮೇಲೆ ಗುಂಡಿನ ದಾಳಿ: 12 ಮಂದಿ ಸಾವು

ಡಿ. 17 ರಾಜ್ಯದಲ್ಲಿ 13 ಲಕ್ಷ ಬಿಪಿಎಲ್ ಕಾರ್ಡ್‌ಗಳು ಅನರ್ಹ

ಡಿ. 17 ಪತ್ನಿ ಹತ್ಯೆಗೆ ಪತಿಯೇ ಸುಪಾರಿ : ಮೂವರ ಬಂಧನ

ಡಿ. 18 ದ್ವೇಷ ಭಾಷಣಕ್ಕೆ ಕಡಿವಾಣ: ವಿಧಾನಸಭೆಯಲ್ಲಿ ವಿಧೇಯಕ ಅಂಗೀಕಾರ

ಡಿ. 19 ಶೃಂಗೇರಿ ಪೀಠದ ಶ್ರೀಗಳಾದ ಶ್ರೀ ಶ್ರೀ ವಿಧುಶೇಖರ ಭಾರತೀ ಶ್ರೀಪಾದಂಗಳಿಗೆ ಮೈಸೂರಲ್ಲಿ ಭಕ್ತಿಪೂರ್ವಕ ಸ್ವಾಗತ

ಡಿ. 19 ಇಂದು, ಮುಂದೂ ನಾನೇ ಮುಖ್ಯಮಂತ್ರಿ, ಬೆಳಗಾವಿ ಅಧಿವೇಶನದಲ್ಲಿ ಸಿದ್ದರಾಮಯ್ಯ ಘೋಷಣೆ

ಡಿ. 20 ಸಹಸ್ರಾರು ಭಕ್ತಿ ಕಂಠಗಳಿಂದ ಪವಿತ್ರ ಸ್ತುತಿ ಶಂಕರ ಸ್ತೋತ್ರ ಪಾರಾಯಣ

ಡಿ. 21 ಆರ್ಥಿಕ ಶಕ್ತಿಯಿಂದಷ್ಟೇ ಜಾತಿ ಅವನತಿ : ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತ್ಯೋತ್ಸವ ಸಮಾರೋಪ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ



ಡಿ. 21 **ಮೈಸೂರು ಅರಮನೆ ಆವರಣದಲ್ಲಿ ಮಾಗಿ ಉತ್ಸವಕ್ಕೆ ವಿಧ್ಯುಕ್ತ ಚಾಲನೆ**

ಡಿ. 22 ಮೈಸೂರಲ್ಲಿ 2 ಎಕರೆ ಪ್ರದೇಶದಲ್ಲಿ ಟೌನ್‌ಶಿಪ್ ನಿರ್ಮಾಣ



ಡಿ. 24 **ಮೈಸೂರಲ್ಲಿ ಸಂಭ್ರಮದ ಕ್ರಿಸ್‌ಮಸ್**



ಡಿ. 25 **ಮೈಸೂರು ಅರಮನೆ ಜಯ ಮಾರ್ತಾಂಡ ದ್ವಾರದ ಮುಂದೆಯೇ ಭಾರಿ ಸ್ಫೋಟ : ವ್ಯಕ್ತಿ ಛಿದ್ರ ಛಿದ್ರ**



ಚಿತ್ರದುರ್ಗ ಬಳಿ ಬಸ್ ಅಗ್ನಿಗಾಹುತಿ

ಡಿ. 25 **ಚಿತ್ರದುರ್ಗ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಘೋರ ದುರಂತ: ಬಸ್‌ಗೆ ಲಾರಿ ಡಿಕ್ಕಿಯಾಗಿ ಆರು ಮಂದಿ ಸಜೀವ ದಹನ**

ಡಿ.26 ಅರಮನೆ ಮುಂಭಾಗ ಹೀಲಿಯಂ ಗ್ಯಾಸ್ ಸಿಲಿಂಡರ್ ಸ್ಫೋಟ ದುರಂತ : ಸಾವಿನ ಸಂಖ್ಯೆ ಮೂರಕ್ಕೆ ಏರಿಕೆ, ನಂಜನಗೂಡಿನ ಮಂಜುಳಾ, ಬೆಂಗಳೂರಿನ ಲಕ್ಷ್ಮಿ ಸಾವು

ಡಿ. 26 ಲೋಕಸಭೆ, ವಿಧಾನಸಭೆಗಷ್ಟೇ ಬಿಜೆಪಿ-ಜೆಡಿಎಸ್ ಮೈತ್ರಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಿಲ್ಲ: ಹೆಚ್.ಡಿ.ದೇವೇಗೌಡ

ಡಿ. 26 ಮೈಸೂರಿನ ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ಜ.1 ರಂದು ಭಕ್ತಾದಿಗಳಿಗೆ 2 ಲಕ್ಷ ಲಡ್ಡು ವಿತರಣೆ



ಹುಣಸೂರಲ್ಲಿ ಚಿನ್ನಾಭರಣ ಲೂಟಿ

ಡಿ. 27 ಬಂಡೀಪುರದಲ್ಲಿ ಹುಲಿ ದಾಳಿಗೆ ವಾಚರ್ ಬಲಿ

ಡಿ. 28 **ಹುಣಸೂರಿನ ಹೃದಯ ಭಾಗದಲ್ಲಿ ಹಾಡಹಗಲೇ ಚಿನ್ನಾಭರಣ ಮಳಿಗೆ ದರೋಡೆ; ಸಿಬ್ಬಂದಿಗೆ ರಿವಾಲ್ವಾರ್ ತೋರಿಸಿ ಕೋಟ್ಯಾಂತರ ರೂ. ಮೌಲ್ಯದ ಆಭರಣ ಲೂಟಿ**

ಡಿ. 28 ಬೆಂಗಳೂರಲ್ಲಿ ಮೂರು ಡ್ರಗ್ಸ್ ಫ್ಯಾಕ್ಟರಿ ಪತ್ತೆ

ಡಿ. 28 **ಮೈಸೂರಲ್ಲಿ ಅಪರಾಧ ತಡೆ-ಪತ್ತೆ, ಪೊಲೀಸ್ ಗಸ್ತಿಗೆ ಡ್ರೋನ್ ಬಳಕೆ**

ಡಿ. 29 ಡಿ.ಕೆ.ಶಿವಕುಮಾರ್ ನಡೆ ನಿಗೂಢ!: ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಭೇಟಿ



ಪೊಲೀಸ್ ಗಸ್ತಿಗೆ ಡ್ರೋನ್ ಬಳಕೆ



ಖಲೀದಾ ಜಿಯಾ

ಡಿ. 30 ಬಾಂಗ್ಲಾದೇಶದ ಮೊದಲ ಪ್ರಧಾನಿ ಖಲೀದಾ ಜಿಯಾ ನಿಧನ

ಡಿ. 30 ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ದೊಡ್ಡಸ್ವಾಮೇಗೌಡ ಆಯ್ಕೆ



ದೊಡ್ಡಸ್ವಾಮೇಗೌಡ

ಮೈಸೂರು ಮಿತ್ರ ಬುಧವಾರ 31 ಡಿಸೆಂಬರ್ 2025

# ಮಂಡ್ಯದಲ್ಲಿ ಕೈಗಾರಿಕಾಭಿವೃದ್ಧಿಗೆ ಚಲುವರಾಯಸ್ವಾಮಿಗೆ ಇಚ್ಛೆ ಇಲ್ಲ

**ಕೇಂದ್ರ ಸಚಿವ ಹೆಚ್ಡಿಕೆಗೆ ಕ್ರೆಡಿಟ್ ಬರಲಿದೆ ಎಂಬ ಆತಂಕ: ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಕಿಡಿ**

ಮಂಡ್ಯ, ಡಿ.30– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಮಗೆ ಮತ ಕೊಟ್ಟ ಜಿಲ್ಲೆಗೆ ಕಾರ್ಖಾನೆ ತರಬೇಕೆಂಬ ಹಂಬಲ ಹೊಂದಿದ್ದು, ಇದಕ್ಕೆ ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅಡ್ಡಿಪಡಿಸುತ್ತಿದ್ದು, ಜಿಲ್ಲೆಯ ಕೈಗಾರಿಕೋದ್ಯಮ ಬೆಳವಣಿಗೆಗೆ ಇಚ್ಛೆ ಇಲ್ಲ ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಕಿಡಿಕಾರಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಗೆ ಕುಮಾರಸ್ವಾಮಿ ಅವರು ಕೈಗಾರಿಕೆ ತಂದರೆ ಅದರ ಶ್ರೇಯಸ್ಸು ಕುಮಾರಸ್ವಾಮಿ ಮತ್ತು ಜೆಡಿಎಸ್ ಪಕ್ಷಕ್ಕೆ ಹೋಗುತ್ತದೆ. ಇದರಿಂದ ತಮಗೇನು ಲಾಭವಿಲ್ಲವೆಂದು ರಾಜ್ಯ ಸರ್ಕಾರ ಕುಮಾರಸ್ವಾಮಿ ಅವರ ಯೋಜನೆಗೆ ಭೂಮಿ ನೀಡದೇ ಮೀನಾಮೇಷ ಎಣಿಸುತ್ತಿದೆ ಎಂದು ಆರೋಪಿಸಿದರು.

ಆಂಧ್ರ, ತೆಲಂಗಾಣ, ಒಡಿಶಾ, ಗೋವಾ ಮುಖ್ಯಮಂತ್ರಿಗಳು ಹೆಚ್ಡಿಕೆ ಭೇಟಿಯಾಗಿ ತಮಗೆ ಬೇಕಾದ ಲಾಭ ಪಡೆಯುತ್ತಿದ್ದಾರೆ. ಆದರೆ ರಾಜ್ಯದಲ್ಲಿ ಕೈಗಾರಿಕೆ ಸ್ಥಾಪಿಸಲು ಕುಮಾರಸ್ವಾಮಿ ಉತ್ಸಾಹ ತೋರುತ್ತಿದ್ದರೂ ರಾಜ್ಯ ಸರ್ಕಾರ ಸ್ಪಂದಿಸುತ್ತಿಲ್ಲ. ಮಂಡ್ಯ ಜಿಲ್ಲೆ ಉಸ್ತುವಾರಿ ಮಂತ್ರಿಗಳು ಜಿಲ್ಲೆಯಿಂದ ಆಯ್ಕೆಯಾದ ಕೇಂದ್ರ ಸಚಿವರನ್ನು ಭೇಟಿ ಮಾಡಿ ಜಿಲ್ಲೆಯ ಉದ್ಯೋಗ ಸಮಸ್ಯೆ ಬಗೆಹರಿಸಲು ಏಕೆ ಕ್ರಮ ವಹಿಸುತ್ತಿಲ್ಲ ಎಂದು ಪ್ರಶ್ನಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾಗಿ ಅವರು ಕೇಂದ್ರ ಸಚಿವರ ಬಳಿಗೆ ತೆರಳಬೇಕೋ ಅಥವಾ ಕೇಂದ್ರ ಸಚಿವರೇ ಇವರ ಬಳಿಗೆ ಬರಬೇಕೋ ಎಂದು ಪ್ರಶ್ನಿಸಿದ ಅವರು, ಜಿಲ್ಲೆಗೆ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಬಂದಾಗ ಜಿಲ್ಲಾ ಉಸ್ತುವಾರಿ ಸಚಿವರಾಗಿ ಮಾತನಾಡಿಸಲು ಮುಂದೆ ಬರುವುದಿಲ್ಲ. ಕುಮಾರಸ್ವಾಮಿ ವಿರುದ್ಧ ಯಾಕಿಷ್ಟು ದ್ವೇಷ ಎಂದು ಕಿಡಿಕಾರಿದರು.

2006ರಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾದ ಮೇಲೆ ಜಿಲ್ಲೆಯಲ್ಲಿ ಸರ್ಕಾರಿ ಶಾಲೆಗಳು, ಐಟಿಐ ಕಾಲೇಜುಗಳು, ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಜಿಲ್ಲೆ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಏನು ಮಾಡಬೇಕು. ಅದಕ್ಕೆ ರಾಜ್ಯ ಸರ್ಕಾರ ಏನು ಸವಲತ್ತು ನೀಡಬೇಕು ಎಂದು ಚರ್ಚಿಸಲು ಸಭೆ ಆಯೋಜಿಸುವಂತೆ ಸಲಹೆ ನೀಡಿದರು.

ಬಾಯಿ ಇದೆ ಎಂಬ ಕಾರಣಕ್ಕೆ ಪತ್ರಕರ್ತರಿಗೆ ಬೆದರಿಕೆಯೊಡ್ಡುವ ಕೆಲಸ ಮಾಡುತ್ತಿದ್ದಾರೆ. ಇಷ್ಟ ಬಂದಂತೆ ಮಾತನಾಡಬೇಡಿ. ಅಧಿಕಾರ ಶಾಶ್ವತವಲ್ಲ. ದರ್ಪ ಬಿಟ್ಟು ಸೌಜನ್ಯದಿಂದ ನಡೆದುಕೊಳ್ಳುವಂತೆ ಎಚ್ಚರಿಸಿದರು.

ಮಾಜಿ ಶಾಸಕ ಕೆ.ಸುರೇಶ್‌ಗೌಡ ಮಾತನಾಡಿ, ಇತ್ತೀಚೆಗೆ ಮಳವಳ್ಳಿಯಲ್ಲಿ ನಡೆದ ರಾಷ್ಟ್ರಪತಿಗಳ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಒಂದೇ ವೇದಿಕೆಯಲ್ಲಿದ್ದರು. ಆಗ ರಾಷ್ಟ್ರಪತಿಯವರು ಕುಮಾರಸ್ವಾಮಿ ಹೆಸರೇಳಿದಾಗ ಜನರ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಇದನ್ನು ಸಹಿಸದ ಚಲುವರಾಯಸ್ವಾಮಿ ಇತ್ತೀಚೆಗೆ ಮಾಧ್ಯಮಗಳ ಮೇಲೆ ರಂಪಾಟ ಮಾಡಿದ್ದಾರೆ. ಜಿಲ್ಲೆಯ ಅಭಿವೃದ್ಧಿಗೆ ಕೇಂದ್ರ ಸಚಿವರ ಸಹಕಾರ ಬೇಡ ಎಂದು ರಾಜ್ಯ ಸರ್ಕಾರ ಬಹಿರಂಗವಾಗಿ ಹೇಳಲಿ ಎಂದು ಸವಾಲು ಹಾಕಿದರು.

ಶಾಸಕ ಹೆಚ್.ಟಿ.ಮಂಜು ಮಾತನಾಡಿ, ಜಿಲ್ಲೆಯಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಭೂಮಿ ಒದಗಿಸಲು ಸರ್ಕಾರಕ್ಕೆ ನಾನೇ ಪತ್ರ ಬರೆದಿದ್ದು, ಅದನ್ನು ಯಾರೋ ಶಾಸಕ ಎಂದು ಸಚಿವ ಚಲುವರಾಯಸ್ವಾಮಿ ಸಂಭೋದಿಸುತ್ತಾರೆ. ಒಬ್ಬ ಶಾಸಕರನ್ನು ಅಗೌರವದಿಂದ ಕಾಣುತ್ತಾರೆ. ಜಿಲ್ಲೆಗೆ ಕೈಗಾರಿಕೆಗಳು ಬಂದಲ್ಲಿ ದೇವೇಗೌಡರಿಗೆ, ಕುಮಾರಸ್ವಾಮಿ ಅವರಿಗೆ ಹೆಸರು ಬರಲಿದೆ ಎಂಬ ಕಾರಣಕ್ಕೆ ಸಹಕರಿಸುತ್ತಿಲ್ಲ. ಚಲುವರಾಯಸ್ವಾಮಿ ಸಹ ಅಭಿವೃದ್ಧಿ ಕೆಲಸ ಮಾಡಿ ಹೆಸರು ಸಂಪಾದಿಸಲಿ ಎಂದು ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಮುಖಂಡ ಬಿ.ಆರ್.ರಾಮಚಂದ್ರ, ಭೀಮ್ ಆರ್ಮಿ ಸಂಘಟನೆ ಅಂದಾನಿ ಇದ್ದರು.



ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು.

## ಕೈಗಾರಿಕೆ ಅಭಿವೃದ್ಧಿ ಸಂಬಂಧ ಶಾಸಕರ ಸಭೆ ಆಯೋಜಿಸಿ

**ಮಂಡ್ಯ:** ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಮಾತನಾಡಿ, ಜಿಲ್ಲೆಯಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಎಲ್ಲಾ ಶಾಸಕರ ಸಭೆ ಆಯೋಜಿಸಿ. ಆಹ್ವಾನಿಸಿದರೆ ಮಂಡ್ಯದ ಎಲ್ಲಾ ಮಾಜಿ, ಹಾಲಿ ಶಾಸಕರನ್ನು ಸಭೆಗೆ ಕರೆ ತರುತ್ತೇನೆ ಎಂದರು.

ಅನುದಾನ ತರಲಾಗದೇ ರಾಜ್ಯ ಸರ್ಕಾರವನ್ನು ಟೀಕಿಸುತ್ತಿದ್ದಾರೆ ಎನ್ನುವ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರ ಹೇಳಿಕೆ ಬಾಲಿಶವಾದದು. ರಾಜ್ಯ ಸರ್ಕಾರ ಕೈಗಾರಿಕೆಗಳ ಸ್ಥಾಪನೆಗೆ ಸೂಕ್ತ ಮೂಲ ಸೌಕರ್ಯ ಒದಗಿಸಲು ಮುಂದಾಗುವಂತೆ ತಾಕೀತು ಮಾಡಿದರು. ಮಂಡ್ಯ ಜಿಲ್ಲೆ ಬೆಂಗಳೂರು– ಮೈಸೂರು ಜಿಲ್ಲೆಗಳ ನಡುವಿನಲ್ಲಿದೆ. ಅಷ್ಟ ಪಥದ ರಸ್ತೆ, ದ್ವಿಪಥ ರೈಲು ಸಂಚಾರ ವ್ಯವಸ್ಥೆ, ನೀರಾವರಿ ಸೌಲಭ್ಯವಿದ್ದರೂ, ಕೈಗಾರಿಕೆ ಸ್ಥಾಪನೆಗೆ ಕಾಂಗ್ರೆಸ್ ಸರ್ಕಾರ ಹಿಂದೇಟು ಹಾಕುತ್ತಿದೆ. ಮಿಮ್ಸ್‌ಗೆ ಸಂಬಂಧಪಟ್ಟ ಸ್ಥಳ ಒತ್ತುವರಿ ತೆರವಿಗೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕ್ಷೇತ್ರದ ಶಾಸಕರು ಇಚ್ಛಾಸಕ್ತಿ ತೋರುತ್ತಿಲ್ಲ. ಅವರಿಗೆ ಜಿಲ್ಲೆಯಲ್ಲಿ ಸುಸಜ್ಜಿತ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪನೆಯಾಗುವುದು ಬೇಕಾಗಿಲ್ಲ. ಆದ್ದರಿಂದ ನಿರ್ಲಕ್ಷ್ಯ ತೋರುತ್ತಿದ್ದಾರೆ ಎಂದು ಆರೋಪಿಸಿದರು.

## ಭಾರತೀನಗರದಲ್ಲಿ ವೈಭವದ ವೈಕುಂಠ ಏಕಾದಶಿ



ವೈಕುಂಠ ಏಕಾದಶಿ ಅಂಗವಾಗಿ ವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಅವರನ್ನು ಅಭಿನಂದಿಸಲಾಯಿತು.

ಭಾರತೀನಗರ, ಡಿ.30– ಇಲ್ಲಿನ ಶ್ರೀವೆಂಕಟೇಶ್ವರಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ಸೋಮವಾರ ರಾತ್ರಿ ದೇವಾಲಯದ ಪ್ರಧಾನ ಅರ್ಚಕ ನರಸಿಂಹ ಭಟ್ಟರ್, ವಾಸ್ತು ಪ್ರವೀಣ ಯು.ವಿ.ಗಿರೀಶ್, ಮೈಸೂರು ಅರಮನೆ ಶ್ವೇತ ವರಾಹಸ್ವಾಮಿ ದೇವಾಲಯದ ಅರ್ಚಕ ಅನಂತಕೃಷ್ಣ ಭಟ್ಟರ್ ನೇತೃತ್ವದಲ್ಲಿ ವೆಂಕಟೇಶ್ವರಸ್ವಾಮಿಗೆ ಹಾಲು, ಮೊಸರು, ಎಳನೀರು, ಅರಿಶಿಣ, ಕುಂಕುಮ, ಫಲ, ಪುಷ್ಪಗಳ ಸಮೇತ ಅಭಿಷೇಕ ನೆರವೇರಿಸಲಾಯಿತು.

ದೇವಾಲಯದ ಆವರಣದಲ್ಲಿ ಅನಂತ ಶೇಷಶಯನ ಲಕ್ಷ್ಮೀ ಸಮೇತ ನಾರಾಯಣಸ್ವಾಮಿ, ನಾಟ್ಯ ಭಂಗಿಯ ಶಿವ, ಪಾರ್ವತಿಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿತ್ತು. ಭಕ್ತರು ವೈಕುಂಠ ದ್ವಾರದಿಂದ ಆಗಮಿಸಿ ದೇವರ ದರ್ಶನ ಪಡೆದರು.

ಬೆಳಗ್ಗೆ 7.30ಕ್ಕೆ ಸೋಮು ತಂಡದಿಂದ ವಾದ್ಯಗೋಷ್ಠಿ, ಮೈಸೂರು ಜೆ.ಪಿ.ನಗರದ ಜೈಶಂಕರ್ ಮತ್ತು ನಿರ್ಮಲ ತಂಡದ ಸಂಜೀವಿನಿ ಭಜನಾ ಮಂಡಳಿಯಿಂದ ದೇವರ ಭಜನೆ ನಡೆಯಿತು. ನಂತರ ಬೆಂಗಳೂರು ಗೋವರ್ಧನ ನಾಟ್ಯ ಶಾಲೆ ವಿದುಷಿ ಐಶ್ವರ್ಯ ಅವರಿಂದ ಭರತನಾಟ್ಯ ನಡೆಯಿತು. ಯರಹಳ್ಳಿ ಪುಟ್ಟಸ್ವಾಮಿ ತಂಡದಿಂದ ಭಕ್ತಿಗೀತೆ ಗಾಯನ, ನಾಡಪ್ರಭು ಕೆಂಪೇಗೌಡ ರಂಗಭೂಮಿ ಕಲಾವಿದರ ಸೇವಾಟ್ರಸ್ಟ್ ವತಿಯಿಂದ 'ಶ್ರೀನಿವಾಸ ಕಲ್ಯಾಣ' ಪೌರಾಣಿಕ ನಾಟಕ ಪ್ರದರ್ಶನ ನಡೆಯಿತು.

ಭಕ್ತರಿಗೆ ಪಂಚ ಕಜ್ಜಾಯ, ಬದಾಮಿ ಹಾಲು, ಬಾಳೆಹಣ್ಣು ವಿತರಿಸಲಾಯಿತು. 30ಸಾವಿರಕ್ಕೂ ಅಧಿಕ ಭಕ್ತರು ವೈಕುಂಠದ್ವಾರ ಪ್ರವೇಶ ಮಾಡಿ ಭಗವಂತನ ಕೃಪೆಗೆ ಪಾತ್ರರಾದರು.

ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ, ಮೇಲುಕೋಟೆಯ ಡಾ. ಸೆಲ್ವಪಿಳ್ಳೈ ಅಯ್ಯಂಗಾರ್ ಎಂಎಲ್‌ಸಿ ಮಧು ಜಿ.ಮಾದೇಗೌಡ, ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ಬಿಇಟಿ ಸಿಇಓ ಆಶಯ್ ಮಧು, ಎಎಸ್ಪಿ ತಿಮ್ಮಯ್ಯ, ಚಾಂಷುಗರ್ ಕಾರ್ಖಾನೆ ಉಪಾಧ್ಯಕ್ಷ ಆರ್.ಮಣಿ, ಜೆಡಿಎಸ್ ತಾಲೂಕು ಮಹಿಳಾಧ್ಯಕ್ಷೆ ದಿವ್ಯ, ಪುರಸಭಾ ಸದಸ್ಯೆ ಪ್ರಿಯಾಂಕ, ಇನ್ಸ್‌ಪೆಕ್ಟರ್ ಅನಿಲ್ ಕುಮಾರ್ ಸೇರಿದಂತೆ ಜನಪ್ರತಿನಿಧಿಗಳು, ಗಣ್ಯರು ದೇವರ ದರ್ಶನ ಪಡೆದರು.

## ಪೌತಿ ಖಾತೆ ಅರ್ಜಿಗಳ ಶೀಘ್ರ ವಿಲೇವಾರಿ ಮಾಡಿ

**ಅಧಿಕಾರಿಗಳಿಗೆ ಸಚಿವ ಎನ್.ಚಲುವರಾಯಸ್ವಾಮಿ ಸೂಚನೆ**

ಮಂಡ್ಯ, ಡಿ.30– ಪೌತಿ ಖಾತೆ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಿ. ಮುಂದಿನ 6 ತಿಂಗಳೊಳಗೆ ಪೌತಿ ಖಾತಾ ಆಂದೋಲನದಲ್ಲಿ ಯಾವುದೇ ಅರ್ಜಿ ಬಾಕಿ ಉಳಿಸಿಕೊಳ್ಳಬಾರದು ಎಂದು ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸೂಚಿಸಿದರು.

ನಗರದ ಜಿಪಂ ಕಾವೇರಿ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಎಂಎಲ್‌ಸಿ ಕೆ.ವಿವೇಕಾನಂದ ಅವರು, ರೈತರ ಹೆಸರಿಗೆ ಖಾತೆ ಮಾಡಿಕೊಡಲು ಅಧಿಕಾರಿಗಳು 1 ಸಾವಿರ ರೂ.ವರೆಗೆ ಲಂಚ ಪಡೆಯುತ್ತಿದ್ದಾರೆ ಎಂದು ಆರೋಪಿಸಿದರು.

ರೈತರಿಗೆ ಖಾತೆ ಮಾಡಿಕೊಡಲು ಅಧಿಕಾರಿಗಳು ಲಂಚ ತೆಗೆದುಕೊಳ್ಳುತ್ತಿರುವ ಬಗ್ಗೆ ಸಾಕ್ಷಿ ಇದ್ದರೆ ಕೊಡಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ಕೇಳಿದಾಗ ವಿವೇಕಾನಂದ ಅವರು 500, ಸಾವಿರ ರೂಪಾಯಿಗೆಲ್ಲಾ ಸಾಕ್ಷಿ ಕೊಡಲು ಸಾಧ್ಯವಿಲ್ಲ ಎಂದರು. ಈ ವೇಳೆ ಸಚಿವ ಚಲುವರಾಯಸ್ವಾಮಿ ಈ ಸಂಬಂಧ ತಹಸೀಲ್ದಾರ್ ನೇತೃತ್ವದಲ್ಲಿ ತನಿಖೆ ನಡೆಸಿ, ವರದಿ ತರಿಸಿಕೊಳ್ಳಿ, ಯಾರು ತಪ್ಪಿತಸ್ಥರೆಂದು ತಿಳಿಯುತ್ತದೋ ಅಂತಹವರನ್ನು ಅಮಾನತುಗೊಳಿಸಿ ಎಂದರು.

**6 ತಿಂಗಳಲ್ಲಿ ಪೂರ್ಣಗೊಳಿಸಿ:** ಹಿಂದೆ ದರಖಾಸ್ತು ಪೋಡಿ ಮಾಡಲು 5 ದಾಖಲೆಗಳ ಆಗತ್ಯ ಇತ್ತು. ಆದರೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ 3 ದಾಖಲೆ ಇದ್ದರೆ ಸಾಕು ದರಖಾಸ್ತು ಪೋಡಿ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಯಾವುದೇ ದಾಖಲೆ ಇಲ್ಲದೆ ಇದ್ದಲ್ಲಿ ಸದರಿ ಅರ್ಜಿದಾರರ ಊರಿಗೆ ಹೋಗಿ ಪರಿಶೀಲಿಸಿ ಯಾವುದೇ ಅಡಚಣೆ ಇಲ್ಲದಿದ್ದಲ್ಲಿ ಅವರಿಗೆ ದರಖಾಸ್ತು ಪೋಡಿ ಮಾಡಿಕೊಡಲು ಚಿಂತಿಸಲಾಗಿದ್ದು, ಸದರಿ ಯೋಜನೆಯನ್ನು ಜಾರಿಗೆ ತರಲಾಗುವುದು. ಮುಂದಿನ 6 ತಿಂಗಳೊಳಗೆ ಪೌತಿ ಖಾತಾ ಆಂದೋಲನದಲ್ಲಿ ಯಾವುದೇ ಅರ್ಜಿ ಬಾಕಿ ಉಳಿಸಿಕೊಳ್ಳದೆ ವಿಲೇವಾರಿ ಮಾಡಿ ಎಂದು ಆದೇಶಿಸಿದರು.

ಪೌತಿಖಾತೆ ಆಂದೋಲನದಲ್ಲಿ ಆಫ್‌ಲೈನ್‌ನಲ್ಲಿ 67,659 ಖಾತೆಗಳನ್ನು ವಿಲೇವಾರಿ ಮಾಡಲಾಗಿದೆ. ಆನ್‌ಲೈನ್‌ನಲ್ಲಿ 59,528 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ. ಪೌತಿ ಖಾತೆ ಆಂದೋಲನದಲ್ಲಿ ಜಿಲ್ಲೆ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ. ಮುಂದೆಯೂ ಸದರಿ ಸ್ಥಾನ ಕಾಪಾಡಿಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ್ ತಿಳಿಸಿದರು.

**ನಿರಾಶ್ರಿತರಿಗೆ ಮನೆ ಒದಗಿಸಿ:** ಜಿಲ್ಲೆಯಲ್ಲಿ ಸದರಿ ವರ್ಷ ಒಟ್ಟು 151 ಮನೆಗಳು ಮುಂಗಾರಿನಲ್ಲಿ ಹಾನಿಗೊಳಗಾಗಿದ್ದು, ಈಗಾಗಲೇ ಅರ್ಹರಿಗೆ 60.36 ಲಕ್ಷ ಪರಿಹಾರ ನೀಡಲಾಗಿದೆ. ಅಧಿಕಾರಿಗಳು ಮನೆ ಹಾನಿಗೊಳಗಾದವರ ವಿವರಗಳನ್ನು ರಾಜೀವ್ ಗಾಂಧಿ ಹೌಸಿಂಗ್ ಪೋರ್ಟಲ್‌ನಲ್ಲಿ ನಮೂದಿಸಿ ಶೀಘ್ರವಾಗಿ ಮನೆ ನಿರಾಶ್ರಿತರಿಗೆ ಪರಿಹಾರ ಒದಗಿಸಿ ಎಂದರು.

ಜಿಪಂ ಸಿಇಓ ಕೆ.ಆರ್.ನಂದಿನಿ ಮಾತನಾಡಿದರು. ಸಭೆಯಲ್ಲಿ ಶಾಸಕರಾದ ಹೆಚ್.ಟಿ.ಮಂಜು, ಪಿ.ಎಂ.ನರೇಂದ್ರಸ್ವಾಮಿ, ಎಂಎಲ್‌ಸಿ ದಿನೇಶ್ ಗೂಳಿಗೌಡ, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಕೆಡಿಪಿ ನಾಮ ನಿರ್ದೇಶನ ಸದಸ್ಯರಾದ ಸಿ.ಎಂ. ದ್ಯಾವಪ್ಪ, ನಟರಾಜು, ಆಶಾ ಭಾಗವಹಿಸಿದ್ದರು.



ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿದರು.

ಮೂರನೇ ಪುಟದಿಂದ

## ಕಾಂಗ್ರೆಸ್ ನಿರ್ಧಾರಕ್ಕೆ ಬಿಜೆಪಿ ಆಕ್ರೋಶ

ನಡೆಸುವುದಾಗಿ ತಿಳಿಸಿದ್ದಾರೆ. ಅತಿಕ್ರಮಣದಾರರಿಗೆ ಕೇವಲ ಎರಡೇ ದಿನದಲ್ಲಿ ಪರಿಹಾರ ವ್ಯವಸ್ಥೆಗೆ ಮುಂದಾಗಿರುವುದು ಕಾಂಗ್ರೆಸ್‌ನ ತುಷ್ಟೀಕರಣದ ಶರವೇಗ ತೋರಿಸುತ್ತದೆ ಎಂದು ಟೀಕಿಸಿದ್ದಾರೆ. ಬೆಳೆ ಕಳೆದುಕೊಂಡ ರೈತರಿಗೆ ಪರಿಹಾರ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರದಿಂದ ಸಾಧ್ಯವಾಗಿಲ್ಲ, ಅಕ್ರಮ ವಲಸಿಗರಿಗೆ ಬೈಯಪ್ಪನಹಳ್ಳಿಯ ರಾಜೀವ್ ಗಾಂಧಿ ಹೌಸಿಂಗ್ ಸೊಸೈಟಿ ಮನೆಗಳನ್ನು ಕೊಡುವುದಾಗಿ ಘೋಷಿಸಿದ್ದಾರೆ.

ಎಐಸಿಸಿ ಹೈಕಮಾಂಡ್‌ಗೆ ಬೆದರಿ, ಕುರ್ಚಿ ಉಳಿಸಿಕೊಳ್ಳಲು ಮುಖ್ಯಮಂತ್ರಿ ಮನಬಂದಂತೆ ತೀರ್ಮಾನ ಮಾಡಲು ಕಾನೂನಿನಡಿ ಅಧಿಕಾರ ಇಲ್ಲ. ನಿಯಮಗಳನ್ನು ಗಾಳಿಗೆ ತೂರಿ, ಅಕ್ರಮ ವಲಸಿಗರಿಗೆ ಮನೆ ಕೊಡುವುದು ಕಾನೂನಿಗೆ ವಿರುದ್ಧವಾದುದು. ರಾಜ್ಯದ ತೆರಿಗೆದಾರರ ಹಣದಿಂದ ಕಟ್ಟಿದ ಮನೆಗಳನ್ನು ಖುಷಿ ಬಂದಂತೆ ವಿತರಿಸುವುದು ಸರಿಯಲ್ಲ. ಇದು ಕನ್ನಡಿಗರ ಆತ್ಮಗೌರವಕ್ಕೆ ಧಕ್ಕೆ ತರುವಂತಹ ನಿರ್ಧಾರ.

ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಎಐಸಿಸಿ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಬೆದರಿಕೆ ಹಿನ್ನೆಲೆಯಲ್ಲಿ ಕುರ್ಚಿ ಉಳಿಸಿಕೊಳ್ಳುವ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಸಿಲುಕಿದ್ದಾರೆ.

ಕೇರಳದ ವಯನಾಡಿನಲ್ಲಿ ಭೀಕರ ಪ್ರವಾಹದಿಂದ ಹಾನಿಗೊಳಗಾದವರಿಗೆ 100 ಮನೆಗಳನ್ನು ಕಟ್ಟಿಸಿಕೊಡುವುದಾಗಿ ಸಿದ್ದರಾಮಯ್ಯ ಘೋಷಿಸಿದ್ದರು. ವಯನಾಡಿನಲ್ಲಿ ಆನೆ ತುಳಿತದಿಂದ ಸಾವಿಗೀಡಾದವರಿಗೆ ತತ್‌ಕ್ಷಣ 15 ಲಕ್ಷ ರೂ. ಪರಿಹಾರ ನೀಡಿದ್ದರು. ನಮ್ಮ ರಾಜ್ಯದ ಬಡವರು ಮಾಡಿರುವ ಅನ್ಯಾಯವಾದರೂ ಏನು ಎಂದು ಪ್ರಶ್ನಿಸಿದ್ದಾರೆ. ಅತಿವೃಷ್ಟಿಯಿಂದ ಕಂಗಾಲಾಗಿ ಪರಿಹಾರ ನಿರೀಕ್ಷೆಯಲ್ಲಿದ್ದ ಕರ್ನಾಟಕ ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕಾದಾಗ ಮುಖ್ಯಮಂತ್ರಿ ಕೇಂದ್ರದ ಕಡೆ ಬೊಟ್ಟು ಮಾಡುತ್ತಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರ ಬಡವರಿಗೆ ಅನ್ಯಾಯ ಮಾಡುತ್ತಿದೆ. ಕಡುಬಡವರಿಗೆ ಮನೆ ಕೊಟ್ಟು ನಂತರ ಪಕ್ಕದ ರಾಜ್ಯದವರ ಬಗ್ಗೆ ಚಿಂತನೆ ಮಾಡಬೇಕು. ಕನ್ನಡಿಗರ ಹೊಟ್ಟೆ ಮೇಲೆ ಹೊಡೆಯುವ ಕೆಲಸಕ್ಕೆ ಮುಖ್ಯಮಂತ್ರಿ ಮುಂದಾಗಿರುವುದು ನಾಡಿನ ದುರ್ದೈವ ಎಂದಿದ್ದಾರೆ.

ಈ ಮಧ್ಯೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ವಸತಿ ಸಚಿವ ಜಮೀರ್ ಅಹಮದ್ ಖಾನ್ ಮಾತನಾಡಿ, ಅರ್ಹ ಕನ್ನಡಿಗರಿಗೆ ಮಾತ್ರ ಮನೆ ವಿತರಿಸಲಾಗುವುದು. ಎಲ್ಲ ದಾಖಲೆಗಳ ಪರಿಶೀಲನೆ ನಂತರ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

## ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಲಕ್ಕೂರಿನ ಫಾರಂ ಹೌಸ್‌ಗಳ ಮೇಲೆ ಏಕಕಾಲದಲ್ಲಿ ದಾಳಿ ನಡೆಸಿದ ಪೊಲೀಸರು, ಆಸ್ತಿಗಳ ದಾಖಲೆ, ಸ್ಥಿರ–ಚರಾಸ್ತಿಗಳು ಚಿನ್ನಾಭರಣ, ವಾಹನಗಳು ಬ್ಯಾಂಕ್ ಖಾತೆಗಳ ವಿವರಗಳನ್ನು ಪರಿಶೀಲಿಸಿದರು. ಶೋಧ ಕಾರ್ಯಾಚರಣೆಯಲ್ಲಿ ಚಾಮರಾಜನಗರ ಲೋಕಾಯುಕ್ತ ಡಿವೈಎಸ್ಪಿ ಎಸ್.ಜಿ.ಗಜೇಂದ್ರ ಪ್ರಸಾದ್, ಇನ್ಸ್‌ಪೆಕ್ಟರ್‌ಗಳಾದ ಉಮೇಶ್, ಶಶಿಕುಮಾರ್, ಲೋಹಿತ್ ಕುಮಾರ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಮೈಸೂರು ಅರಣ್ಯ ವಲಯದ ಡಿಸಿಎಫ್ ಆಗಿರುವ ಪರಮೇಶ್ ಅವರ ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯಭವನದ ಕಚೇರಿ, ವಸತಿಗೃಹ, ಹುಣಸೂರು ರಸ್ತೆಯಲ್ಲಿರುವ ಆದಿತ್ಯ ಲೇಔಟ್‌ನ ಮನೆ, ಬೋಗಾದಿ 2ನೇ ಹಂತದಲ್ಲಿರುವ ಸಹೋದರ ಜಗದೀಶ್ ಮನೆ ಹಾಗೂ ಬೆಂಗಳೂರಿನ ಬನಶಂಕರಿ ಯಲ್ಲಿರುವ ಅತ್ತೆ ಮನೆ ಮೇಲೆ ಲೋಕಾಯುಕ್ತ ಪೊಲೀಸರು ಏಕಕಾಲದಲ್ಲಿ ದಾಳಿ ನಡೆಸಿ ಶೋಧ ಕಾರ್ಯಾಚರಣೆ ನಡೆಸಿದಾಗ ಅಪಾರ ಪ್ರಮಾಣದ ಆಸ್ತಿ ಗಳಿಸಿರುವುದು ಪತ್ತೆಯಾಯಿತು.

ಮೈಸೂರು ಲೋಕಾಯುಕ್ತ ಡಿವೈಎಸ್ಪಿ ಅರಗ ಶೈಲೇಂದ್ರ, ಕೊಡಗು ಲೋಕಾಯುಕ್ತ ಡಿವೈಎಸ್ಪಿ ದಿನಕರ್ ಶೆಟ್ಟಿ, ಇನ್ಸ್‌ಪೆಕ್ಟರ್‌ಗಳಾದ ಗಿರೀಶ್, ವಿಜಯ ಕುಮಾರ್, ಶಾಂತಿನಾಥ ಹೊನ್ನೂರು, ಬೆಂಗಳೂರು ಲೋಕಾಯುಕ್ತ ಇನ್ಸ್‌ಪೆಕ್ಟರ್ ಆನಂದ್ ಹಾಗೂ ಸಿಬ್ಬಂದಿ ದಾಳಿಯಲ್ಲಿ ಭಾಗವಹಿಸಿದ್ದರು.

## ಬೆಂಕಿ; ಸವಾರನೂ ಸಜೀವ ದಹನ

ಆಗ ಆದಿತ್ಯ, ಮನೆಗೆ ಬೇಗ ಬರುವುದಾಗಿಯೂ ತಾಯಿಗೆ ಹೇಳಿದ್ದಾನೆ. ಆದರೆ ರಾತ್ರಿ 7 ಗಂಟೆ ಸಮಯದಲ್ಲಿ ಬೈಕ್ ಸಮೇತ ಬೆಂಕಿಗೆ ಆಹುತಿಯಾಗಿರುವುದಾಗಿ ಪರಿಚಿತರು ಫೋನ್ ಮಾಡಿ ಪೋಷಕರಿಗೆ ಮಾಹಿತಿ ನೀಡಿದ್ದಾರೆ. ನಿರ್ಜನ ಪ್ರದೇಶದಲ್ಲಿ ಚಲಿಸುತ್ತಿದ್ದ ಬೈಕ್‌ಗೆ ಬೆಂಕಿ ಹೊತ್ತಿಕೊಂಡಿತ್ತು. ಅದರಲ್ಲಿ ಕುಳಿತಿದ್ದ ಯುವಕನಿಗೂ ಬೆಂಕಿ ಹೊತ್ತಿ ಜ್ವಾಲೆ ಧಗಧಗಿಸುತ್ತಿತ್ತು. ಇದರಿಂದ ಬಚಾವ್ ಆಗಲು ಆತ ವಸತಿ ಪ್ರದೇಶದತ್ತ ಬೈಕ್ ತಿರುಗಿಸಿದ್ದ. ಆದರೆ ಅಷ್ಟರಲ್ಲಿ ಬೈಕ್‌ನೊಂದಿಗೆ ಸುಟ್ಟು ಕರಕಲಾದ ಎಂದು ಈ ದೃಶ್ಯವನ್ನು ನೋಡಿದ ಕೆಲವರು ಪೊಲೀಸರಿಗೆ ತಿಳಿಸಿದ್ದಾರೆ. ಮೃತನ ತಂದೆ ಮಾದೇಶ ಮಗನ ಸಾವಿನ ಬಗ್ಗೆ ಶಂಕೆ ವ್ಯಕ್ತಪಡಿಸಿ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ಶವವನ್ನು ಮರಣೋತ್ತರ ಪರೀಕ್ಷೆಗೊಳಪಡಿಸಿ ಬಳಿಕ ವಾರಸುದಾರರಿಗೆ ಹಸ್ತಾಂತರಿಸಿದ್ದಾರೆ. ನಿರ್ಜನ ಪ್ರದೇಶದಲ್ಲಿ ಆದಿತ್ಯ ಬೈಕ್‌ನಲ್ಲಿ ಹೋಗುವ ವೇಳೆ ಬೆಂಕಿಗೆ ಆಹುತಿಯಾಗಿದ್ದು, ಈ ಸಾವು ಆಕಸ್ಮಿಕವೋ ಅಥವಾ ಕೊಲೆಯೋ ಎಂಬುದು ಪೊಲೀಸರ ತನಿಖೆಯಿಂದ ತಿಳಿಯಬೇಕಿದೆ.

## ಪಪ್ಪಿಗೆ ಜಾಮೀನು ಮಂಜೂರು

ಜೋಧ್‌ಪುರದ 3, ಮುಂಬೈನ 2, ಹುಬ್ಬಳ್ಳಿಯ 1 ಸೇರಿದಂತೆ 31 ಕಡೆಗಳಲ್ಲಿ ಕೆ.ಸಿ. ವೀರೇಂದ್ರಗೆ ಸಂಬಂಧಿಸಿದ ಸ್ಥಳಗಳಲ್ಲಿ ಇ.ಡಿ ಅಧಿಕಾರಿಗಳು ದಾಳಿ ನಡೆಸಿದ್ದರು. ದಾಳಿ ವೇಳೆ ಸುಮಾರು 1 ಕೋಟಿ ರೂ. ವಿದೇಶಿ ಕರೆನ್ಸಿ, 6 ಕೋಟಿ ರೂ. ಮೌಲ್ಯದ ಚಿನ್ನಾಭರಣಗಳು, 10 ಕೆ.ಜಿ ಬೆಳ್ಳಿಯ ವಸ್ತುಗಳು ಸೇರಿದಂತೆ 12 ಕೋಟಿ ರೂಪಾಯಿ ನಗದು ಹಾಗೂ 4 ವಾಹನಗಳನ್ನು ಅಕ್ರಮ ಹಣ ವರ್ಗಾವಣೆ ಕಾಯ್ದೆ 2002ರಡಿಯಲ್ಲಿ ವಶಪಡಿಸಿಕೊಳ್ಳಲಾಗಿತ್ತು. ಇದಲ್ಲದೆ, 17 ಬ್ಯಾಂಕ್ ಖಾತೆಗಳು, 2 ಬ್ಯಾಂಕ್ ಲಾಕರ್‌ಗಳನ್ನು ಸಹ ಸ್ಥಗಿತಗೊಳಿಸಲಾಗಿದೆ. ಮತ್ತು ವೀರೇಂದ್ರ ಅವರ ಸಹೋದರ ಕೆ.ಸಿ ನಾಗರಾಜ್, ಅವರ ಮಗ ಪೃಥ್ವಿ ಎನ್ ರಾಜ್ ಅವರಿಂದ ಆಸ್ತಿಗೆ ಸಂಬಂಧಿಸಿದ ಅನೇಕ ದಾಖಲೆಗಳನ್ನು ಸಹ ವಶಪಡಿಸಿಕೊಳ್ಳಲಾಗಿತ್ತು.

ತನಿಖೆ ವೇಳೆ ಎಂಜಿಎಂ ಕ್ಯಾಸಿನೊ, ಮೆಟ್ರೋಪಾಲಿಟನ್ ಕ್ಯಾಸಿನೊ, ಬೆಲ್ಲಾಜಿಯೊ ಕ್ಯಾಸಿನೊ, ಮರೀನಾ ಕ್ಯಾಸಿನೊ, ಕ್ಯಾಸಿನೊ ಜ್ಯುವೆಲ್ ಹೀಗೆ ಅಂತಾರಾಷ್ಟ್ರೀಯ ಕ್ಯಾಸಿನೊ ಸದಸ್ಯತ್ವ, ವಿವಿಧ ಬ್ಯಾಂಕ್‌ಗಳ ಕ್ರೆಡಿಟ್ ಮತ್ತು ಡೆಬಿಟ್ ಕಾರ್ಡ್‌ಗಳು, ತಾಜ್, ಹಯಾತ್, ಲೀಲಾ ಐಷಾರಾಮಿ ಆತಿಥ್ಯ ಸದಸ್ಯತ್ವ ಕಾರ್ಡ್‌ಗಳನ್ನು ಪಪ್ಪಿ ಹೊಂದಿರುವುದು ದಾಳಿ ವೇಳೆ ಬಯಲಾಗಿತ್ತು. ಕಳೆದ ಎರಡು ತಿಂಗಳ ಹಿಂದೆ ಪಪ್ಪಿ ವಿರುದ್ಧ ಇ.ಡಿ. ಅಧಿಕಾರಿಗಳು ಚಾರ್ಜ್ ಶೀಟ್ ಸಲ್ಲಿಸಿದ್ದರು.

**2022ರಲ್ಲಿ ಪ್ರಕರಣ ದಾಖಲು:** ಆನ್ಲೈನ್ ಹಾಗೂ ಆಫ್ಲೈನ್ ಅಕ್ರಮ ಗೇಮಿಂಗ್ ಪ್ರಕರಣ ಸಂಬಂಧ 2022ರ ಜು.6ರಂದು ಹಾರೋಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು ಈ ಎಫ್‌ಐಆರ್‌ನಲ್ಲಿ ಯಾರ ಹೆಸರು ಉಲ್ಲೇಖವಾಗಿರಲಿಲ್ಲ. ಈ ಎಫ್‌ಐಆರ್ ಆಧರಿಸಿ 2025ರ ಆ.21ರಂದು ಇಡಿ ಇಸಿಐಆರ್ ದಾಖಲಿಸಿತ್ತು. ಬಳಿಕ ಆ.23ರಂದು ಕೆ.ಸಿ ವೀರೇಂದ್ರ ಅವರನ್ನು ಬಂಧಿಸಲಾಗಿತ್ತು.

## ಸರ್ಕಾರಿ ಶಾಲೆ ಮುಚ್ಚಲ್ಲ

ಮಾಡಲಾಗುವುದು ಎಂದು ಎಚ್ಚರಿಸಿದರು. ಗ್ರಾಮೀಣ ಮಕ್ಕಳಿಗೆ ಉತ್ತಮ ಶಿಕ್ಷಣ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಕೆಪಿಎಸ್ ಶಾಲೆಗಳನ್ನು ಆರಂಭಿಸುವ ದೊಡ್ಡ ಯೋಜನೆ ಕಾರ್ಯರೂಪಕ್ಕೆ ಬಂದಿದೆ. ಇಂತಹ ಶಾಲೆಗಳಿಗೆ ಮತ್ತೊಂದು ಶಾಲೆ ವಿಲೀನ ಆಗಬಹುದಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಉತ್ತೀರ್ಣ ಅಂಕಗಳ ಕಡಿತಕ್ಕೂ ಆಕ್ಷೇಪ ವ್ಯಕ್ತವಾಗಿದೆ. ಆದರೆ, ಬೇರೆ ರಾಜ್ಯಗಳಲ್ಲಿನ ವ್ಯವಸ್ಥೆಯನ್ನೇ ನಾವು ಅನುಷ್ಠಾನಕ್ಕೆ ತಂದಿದ್ದೇವೆ ಎಂದರು.

## ನಾಡು–ನುಡಿ, ಗಡಿ ವಿಚಾರ ಬಂದಾಗ ಕನ್ನಡಿಗರು ಒಂದಾಗಬೇಕಿದೆ

● ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಭಿಮತ ● ಕನ್ನಡಿಗರ ಒಗ್ಗೂಡಿಸಲು ಶ್ರಮಿಸಿದವರಿಗೆ ಕೃತಜ್ಞತೆ ಸಲ್ಲಿಸುವ ಕರ್ತವ್ಯ ಪಾಲಿಸಿ

ಮೈಸೂರು, ಡಿ.30(ಎಸ್‌ಪಿಎನ್)– ಕನ್ನಡ ನಾಡು–ನುಡಿ, ಗಡಿ ವಿಚಾರ ಬಂದಾಗ ಕನ್ನಡಿಗರೆಲ್ಲರೂ ಒಗ್ಗಟ್ಟಾಗಬೇಕು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಅಭಿಪ್ರಾಯಪಟ್ಟರು.

ಮೈಸೂರು ವಿವೇಕಾನಂದನಗರದ ವಿವೇಕಾನಂದ ವೃತ್ತದಲ್ಲಿ ಕರ್ನಾಟಕ ಸೇನಾ ಪಡೆ ಮೈಸೂರು ಘಟಕ, ಸ್ವಾಮಿ ವಿವೇಕಾನಂದ ಆಟೋ ಮಾಲೀಕರ ಮತ್ತು ಚಾಲಕರ ಸಂಘ, ಜೈಭೀಮ್ ಯುವಕರ ಸಂಘ, ಚಾಮುಂಡೇಶ್ವರಿ ಯುವಕರ ಸಂಘ, ವಿನಾಯಕ ಆಟೋ ಗೆಳೆಯರ ಬಳಗ, ಮ್ಯಾಂಗೋ ಬಾಯ್ಸ್, ವಿವೇಕಾನಂದನಗರ, ಅರವಿಂದ ನಗರ, ಕುವೆಂಪುನಗರ, ಶ್ರೀರಾಂ ಪುರ ಬಡಾವಣೆ ನಿವಾಸಿಗಳು ಹಾಗೂ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಏರ್ಪಡಿಸಿದ್ದ '70ನೇ ಕನ್ನಡ ರಾಜ್ಯೋತ್ಸವ' ಹಾಗೂ 'ವಿಶ್ವಮಾನವ ಕುವೆಂಪು ಜಯಂತಿ' ಕಾರ್ಯಕ್ರಮದಲ್ಲಿ ಭುವನೇಶ್ವರಿ, ಕುವೆಂಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಮಾತನಾಡಿದರು.

**'ಭಾರತರತ್ನ' ಪ್ರಶಸ್ತಿ ಘೋಷಿಸಿ:** ಕುಲಪುರೋಹಿತ ಆಲೂರು ವೆಂಕಟರಾಯರು ಸೇರಿದಂತೆ ಅನೇಕರು ಕನ್ನಡ ನಾಡಿನ ಉದಯಕ್ಕೆ ಶ್ರಮಿಸಿದ್ದಾರೆ. ಕುವೆಂಪು ಅವರ ಸಾಹಿತ್ಯದಲ್ಲಿ ನಾಡು, ನುಡಿ ಹಾಗೂ ವಿಶ್ವಮಾನವ ಸಂದೇಶ ನೀಡುವ ಕವಿತೆಗಳನ್ನು ರಚಿಸಿ, ನಾಡಿನ ಮನೆ ಮಾತಾಗಿದ್ದು, ಇವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿ ನೀಡುವಂತೆ ಒತ್ತಾಯಿಸಿದರು.

ಕರ್ನಾಟಕ ಸೇನಾ ಪಡೆಯ ಜಿಲ್ಲಾಧ್ಯಕ್ಷ ತೇಜಸ್‌ಲೋಕೇಶ್ ಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರು.

**ಸನ್ಮಾನ:** ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ, ಜಿಲ್ಲಾ ರಾಜ್ಯೋತ್ಸವ ಪುರಸ್ಕೃತರಾದ ಕೆ.ಬಿ.ಲಿಂಗರಾಜು, ವಲಯ ಕಚೇರಿ–3ರ ಆಯುಕ್ತ ಎಂ. ಸಂದೀಪ್, ಹಿರಿಯ ಪತ್ರಕರ್ತ ಆರ್.ಕೃಷ್ಣ, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಬಿ.ಎಚ್.ಗೋವಿಂದೇಗೌಡ, ಪಿಡಬ್ಲ್ಯೂಡಿ ಪ್ರಥಮ ದರ್ಜೆ ಗುತ್ತಿಗೆದಾರ ಎಂ.ಕೆ.ಯಶವಂತ್‌ಕುಮಾರ್, ಮೈಸೂರು ಜಿಲ್ಲಾ ಹಾಪಕಾಮ್ಸ್ ಅಧ್ಯಕ್ಷ ಹೊಸಹುಂಡಿ ರಘು ಇತರರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ಕರ್ನಾಟಕ ಸೇನಾ ಪಡೆಯ ರಾಜ್ಯಾಧ್ಯಕ್ಷ ಚಾ.ರಂ.ಶ್ರೀನಿವಾಸ ಗೌಡ, ಸಿ.ವೈ.ಶಿವೇಗೌಡ, ವಿಪ್ರ ಮುಖಂಡ ಬಿ.ಆರ್.ನಟರಾಜ್ ಜೋಯ್ಸ್, ಸಿ.ರಮೇಶ್ ಮತ್ತಿತರರು ಉಪಸ್ಥಿತರಿದ್ದರು.



70ನೇ ಕನ್ನಡ ರಾಜ್ಯೋತ್ಸವ ಹಾಗೂ ವಿಶ್ವಮಾನವ ಕುವೆಂಪು ಜಯಂತಿ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

## ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಅಬಕಾರಿ ಅಧಿಕಾರಿಗಳು ದಿಢೀರ್ ದಾಳಿ; ಅಕ್ರಮ ಮದ್ಯ, ಮಾದಕ ವಸ್ತು ಮಾರಾಟ ಪರಿಶೀಲನೆ

**ಜನರಲ್ಲಿ ಮಾದಕ ಪದಾರ್ಥಗಳ ಬಗ್ಗೆ ಅರಿವು**

ಮೈಸೂರು, ಡಿ.30– ಹೊಸ ವರ್ಷಾಚರಣೆ ಹೊಸ್ತಿಲಲ್ಲಿ ಅಬಕಾರಿ ಅಧಿಕಾರಿಗಳು ಮೈಸೂರಿನ ವಿವಿಧ ಬಡಾವಣೆಗಳಲ್ಲಿ ದಿಢೀರ್ ಕಾರ್ಯಾಚರಣೆ ನಡೆಸಿ, ಅಕ್ರಮ ಮದ್ಯ ಹಾಗೂ ಮಾದಕ ವಸ್ತು ಮಾರಾಟ ಸಂಬಂಧ ಪರಿಶೀಲನೆ ನಡೆಸಿದರು.

ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತರ ಕಚೇರಿಯ ಅಬಕಾರಿ ಅಧೀಕ್ಷಕ ಜಿ.ವಿವೇಕ್ ಹಾಗೂ ಉಪ ಅಧೀಕ್ಷಕ ಹೆಚ್.ಕೆ.ರಮೇಶ್ ನೇತೃತ್ವದಲ್ಲಿ ಅಬಕಾರಿ ನಿರೀಕ್ಷಕರು, ಉಪ ನಿರೀಕ್ಷಕರು ಸೇರಿದಂತೆ ವಿವಿಧ ಹಂತಗಳ ಅಧಿಕಾರಿ ಹಾಗೂ ಸಿಬ್ಬಂದಿ ತಂಡೋಪತಂಡವಾಗಿ ಮಂಗಳವಾರ ಅಲೀಂನಗರ, ಸಾಯಿಬಾಬಾ ಕಾಲೋನಿ, ಅಬ್ದುಲ್‌ಕಲಾಂನಗರ, ವಂದೇ ಮಾತರಂ ಕಾಲೋನಿ 1 ಮತ್ತು 2ನೇ ಹಂತ, ಎಲ್ಲಮ್ಮ ಕಾಲೋನಿ ಮತ್ತು ಬೆಲವತ್ತ ಗ್ರಾಮಗಳಿಗೆ ಧಾವಿಸಿ, ತಲಾಶ್ ನಡೆಸಿದರು.

ಈ ಸಾಮೂಹಿಕ ಅಬಕಾರಿ ದಾಳಿಯಲ್ಲಿ ಅಕ್ರಮ ಮದ್ಯ ಮತ್ತು ಮಾದಕ ವಸ್ತು ಮಾರಾಟ, ಸಂಗ್ರಹ, ಸಾಗಾಣಿಕೆ ಹಾಗೂ ಸೇವನೆಯಂತಹ ಯಾವುದೇ ಪ್ರಕರಣಗಳು ಪತ್ತೆಯಾಗಲಿಲ್ಲ. ಈ ವೇಳೆ ಅಧಿಕಾರಿಗಳು, ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು. ಅಕ್ರಮ ಮದ್ಯ ಹಾಗೂ ಮಾದಕ ವಸ್ತು ಮಾರಾಟ ಅಕ್ಷಮ್ಯ. ಮಾದಕ ವಸ್ತು ಸಂಗ್ರಹ, ಸಾಗಾಣಿಕೆ ಹಾಗೂ ಸೇವನೆ ಮಾಡುವುದು ಕಾನೂನು ಬಾಹಿರ. ಇಂತಹ ಕೃತ್ಯವೆಸಗುವವರಿಗೆ ಸಹಾಯ ಮಾಡುವುದೂ ಅಪರಾಧ. ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ ಅಬಕಾರಿ ಇಲಾಖೆಯಿಂದ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಕ್ರಮ ಮದ್ಯ ಹಾಗೂ ಮಾದಕ ವಸ್ತು ಸಾಗಾಟ, ಸಂಗ್ರಹ, ಮಾರಾಟ ಹಾಗೂ ಸೇವನೆ ಮಾಡುವುದು ತಮ್ಮ ಗಮನಕ್ಕೆ ಬಂದರೆ ಕೂಡಲೇ ಮಾಹಿತಿ ನೀಡುವ ಮೂಲಕ ಸುರಕ್ಷಿತ ಸಮಾಜ ನಿರ್ಮಾಣಕ್ಕೆ ಸಹಕರಿಸಬೇಕು. ಮಾಹಿತಿ ನೀಡುವವರ ಬಗ್ಗೆ ಯಾರಿಗೂ ತಿಳಿಯದಂತೆ ಗೌಪ್ಯವಾಗಿಡುವುದರಿಂದ ಆತಂಕಪಡುವ ಅಗತ್ಯವಿಲ್ಲ. ಅಕ್ರಮ ಚಟುವಟಿಕೆಗಳನ್ನು ತಡೆಯಲು ಸಾರ್ವಜನಿಕರ ಸಹಕಾರ ಬಹಳ ಮುಖ್ಯ ಎಂದು ಮನವಿ ಮಾಡಿದರು.



ಮೈಸೂರಿನ ವಿವಿಧೆಡೆ ಅಬಕಾರಿ ಅಧಿಕಾರಿಗಳು ಮಂಗಳವಾರ ಪರಿಶೀಲನೆ ನಡೆಸಿ, ಅಬಕಾರಿ ಅಕ್ರಮ ಹಾಗೂ ಮಾದಕ ವಸ್ತು ಸಂಬಂಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

## ಜಪಾನ್ ಹಿಂದಿಕ್ಕಿದ ಭಾರತ!

ನವದೆಹಲಿ, ಡಿ.30– ಭಾರತದ ಅರ್ಥ ವ್ಯವಸ್ಥೆಯು ಜಪಾನ್ ದೇಶದ ಅರ್ಥ ವ್ಯವಸ್ಥೆಯ ಗಾತ್ರವನ್ನು ಹಿಂದಿಕ್ಕಿದ್ದು, 4.18 ಟ್ರಿಲಿಯನ್ ಡಾಲರ್ (ಸರಿಸುಮಾರು 375 ಲಕ್ಷ ಕೋಟಿ) ಆಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಈಗ ಭಾರತದ ಅರ್ಥ ವ್ಯವಸ್ಥೆಯು ವಿಶ್ವದ ನಾಲ್ಕನೆಯ ಅತಿದೊಡ್ಡ ಅರ್ಥ ವ್ಯವಸ್ಥೆ ಎಂದು ಅದು ಹೇಳಿದೆ. ಭಾರತದ ಅರ್ಥ ವ್ಯವಸ್ಥೆಯು ಜರ್ಮನಿಯ ಅರ್ಥವ್ಯವಸ್ಥೆಯನ್ನು ಕೂಡ 2030ರ ವೇಳೆಗೆ ಹಿಂದಿಕ್ಕಿ ವಿಶ್ವದ ಮೂರನೆಯ ಅತಿದೊಡ್ಡ ಅರ್ಥವ್ಯವಸ್ಥೆ ಆಗಲಿದೆ ಎಂದು ತಿಳಿಸಿದೆ. ದೇಶದ ಅರ್ಥ ವ್ಯವಸ್ಥೆಯ ಬೆಳವಣಿಗೆ ಪ್ರಮಾಣವು ಚೆನ್ನಾಗಿದ್ದು, ವಿಶ್ವದ ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿದೆ ಎಂದು ಕೇಂದ್ರವು ತಿಳಿಸಿದೆ.

## ದೊಡ್ಡಸ್ವಾಮಿಗೌಡರಿಗೆ ಅಭಿನಂದನೆ...



ಎಂಸಿಡಿಸಿಸಿ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ದೊಡ್ಡಸ್ವಾಮೇಗೌಡ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಶಾಸಕ ಡಿ.ರವಿಶಂಕರ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಸಿಎಂ ಸಿದ್ದರಾಮೇಗೌಡ, ತಾಪಂ ಮಾಜಿ ಉಪಾಧ್ಯಕ್ಷ ಹೆಬ್ಬಾಳೇಗೌಡ, ರಾಮನಹುಂಡಿ ಜವರೇಗೌಡ, ಕಮಲ ಅನಂತರಾಮು ರಾಜಣ್ಣ, ಕಾಂಗ್ರೆಸ್ ಯುವ ಮುಖಂಡರಾದ ಲೋಕೇಶ್‌ಕುಮಾರ್, ಕಡಕೊಳ ಶಿವಲಿಂಗ ಇನ್ನಿತರರು ಉಪಸ್ಥಿತರಿದ್ದರು.



ಎಂಸಿಡಿಸಿಸಿ ಬ್ಯಾಂಕಿನ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ದೊಡ್ಡಸ್ವಾಮೇಗೌಡ ಅವರನ್ನು ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಶಾಸಕ ಡಿ.ರವಿಶಂಕರ್ ಇನ್ನಿತರರಿದ್ದರು.

# ಹೊಸ ವರ್ಷದ ಮೊದಲ ದಿನ ಚಾಮುಂಡಿಬೆಟ್ಟಕ್ಕೆ ಅಧಿಕ ಭಕ್ತರ ಭೇಟಿ ನಿರೀಕ್ಷೆ: ವ್ಯವಸ್ಥೆಗೆ ಡಿಸಿ ಸೂಚನೆ



ಮೈಸೂರು, ಡಿ.30(ಎಂಕೆ)– ಹೊಸ ವರ್ಷದ ಮೊದಲ ದಿನದಂದು ಚಾಮುಂಡಿ ಬೆಟ್ಟಕ್ಕೆ ಹೆಚ್ಚಿನ ಭಕ್ತಾದಿಗಳು ಆಗಮಿಸುವ ನಿರೀಕ್ಷೆ ಇದ್ದು, ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ತಮ್ಮ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸಭೆ ನಡೆಸಿದ ಅವರು, ಚಾಮುಂಡಿಬೆಟ್ಟದಲ್ಲಿ ಜ.2 ಲಲಿತಾ ಸಹಸ್ರನಾಮ ಕಾರ್ಯಕ್ರಮ ಹಾಗೂ ಜ.3 ಮತ್ತು 4 ವಾರಾಂತ್ಯ ದಿನಗಳಾಗಿರುವ ಹಿನ್ನಲೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಚಾಮುಂಡಿ ಬೆಟ್ಟಕ್ಕೆ ಆಗಮಿಸಲಿದ್ದಾರೆ ಎಂದರು.



ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ಹಾಗೂ ಸಿಬ್ಬಂದಿಗಳೊಂದಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಸಭೆ ನಡೆಸಿದರು.

ಜ.1ರಿಂದಲೇ ಚಾಮುಂಡಿಬೆಟ್ಟದಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಲಿದೆ. ಹಾಗಾಗಿ ನೂಕು–ನುಗ್ಗಲು ಉಂಟಾಗದಂತೆ ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು. ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಬೇಕು. ಗಣ್ಯ ವ್ಯಕ್ತಿಗಳ ವಾಹನಗಳನ್ನು ಸಹ ಮಹಿಷಾಸುರ ಪ್ರತಿಮೆ ಬಳಿ ನಿಲ್ಲಿಸಿ, ಅಲ್ಲಿಂದ ಬ್ಯಾಟರಿ ಚಾಲಿತ ವಾಹನದಲ್ಲಿ ಅವರನ್ನು ಕರೆದುಕೊಂಡು ಹೋಗುವ ವ್ಯವಸ್ಥೆಯಾಗಬೇಕು ಎಂದು ತಿಳಿಸಿದರು.

ಕುಡಿಯುವ ನೀರಿನ ವ್ಯವಸ್ಥೆ ಜೊತೆಗೆ ಸ್ವಚ್ಛತೆ ಕಾಪಾಡಲು ಅಗತ್ಯ ಸಿಬ್ಬಂದಿ ನೇಮಿಸಬೇಕು. ಸಾರಿಗೆ ಬಸ್‌ಗಳ ಟ್ರಿಪ್‌ಗಳನ್ನು ಹೆಚ್ಚಿಸಬೇಕು. ಆಂಬುಲೆನ್ಸ್ ಹಾಗೂ ಅಗ್ನಿಶಾಮಕ ತುರ್ತು ಸೇವೆಗಳತ್ತ ಗಮನ ಹರಿಸಬೇಕು. ಪ್ರಸಾದ ವಿತರಣೆಯಲ್ಲಿ ಗುಣಮಟ್ಟ ಕಾಪಾಡುವುದರ ಜೊತೆಗೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಸೂಚಿಸಿದರು. ಜಿಪಂ ಸಿಇಓ ಯುಕೇಶ್‌ಕುಮಾರ್, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ, ದೇವಸ್ಥಾನದ ಅರ್ಚಕರಾದ ಶಶಿಶೇಖರ್ ದೀಕ್ಷಿತ್ ಮತ್ತಿತರರು ಉಪಸ್ಥಿತರಿದ್ದರು.

## ಡಾ.ವಿಷ್ಣುವರ್ಧನ್‌ರ 16ನೇ ಪುಣ್ಯಸ್ಮರಣೆ



ವಿಷ್ಣುವರ್ಧನ್ ಅಭಿಮಾನಿಗಳ ಒಕ್ಕೂಟ ವತಿಯಿಂದ ವಿಷ್ಣುವರ್ಧನ್ ಅವರ 16ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ವಿಷ್ಣುವರ್ಧನ್ ಉದ್ಯಾನವನದಲ್ಲಿ ಡಾ. ವಿಷ್ಣುವರ್ಧನ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಮೈಸೂರು, ಡಿ.30(ಜಿಎ)–ಮೈಸೂರಿನ ಸಾಹಸಸಿಂಹ ವಿಷ್ಣುವರ್ಧನ್ ಅಭಿಮಾನಿಗಳ ಒಕ್ಕೂಟದ ವತಿಯಿಂದ ವಿಷ್ಣುವರ್ಧನ್ ಅವರ 16ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ವಿಷ್ಣುವರ್ಧನ್ ಉದ್ಯಾನವನದಲ್ಲಿ ವಿಷ್ಣುವರ್ಧನ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಈ ವೇಳೆ ಸಾಹಸಸಿಂಹ ವಿಷ್ಣುವರ್ಧನ್ ಅಭಿಮಾನಿಗಳ ಒಕ್ಕೂಟದ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ ಮಾತನಾಡಿ, ಅರಮನೆಯ ಮುಂಭಾಗದ ಡಾ.ವಿಷ್ಣುವರ್ಧನ ಉದ್ಯಾನವನ್ನು ರಾಜ್ಯ ಸರ್ಕಾರ ಮತ್ತು ನಗರಪಾಲಿಕೆ ಅಧಿಕೃತವಾಗಿ ಘೋಷಿಸಿ, ಅಭಿವೃದ್ಧಿ ಮಾಡಲು ಮುಂದಾಗಬೇಕು ಮತ್ತು ಉದ್ಯಾನವನದಲ್ಲಿ ವಿಷ್ಣುವರ್ಧನ ಅವರ ಪ್ರತಿಮೆ ಸ್ಥಾಪಿಸಬೇಕು ಎಂದು ಆಗ್ರಹಿಸಿದರು.

ಲಕ್ಷಾಂತರ ಮಂದಿ ಪ್ರವಾಸಿಗರು ಮೈಸೂರಿಗೆ ಬರುತ್ತಾರೆ. ಈ ವೇಳೆ ವಿಷ್ಣುವರ್ಧನ್ ಉದ್ಯಾನವನಕ್ಕೆ ಭೇಟಿ ಕೊಡುತ್ತಾರೆ. ಇದರಿಂದ ಸರ್ಕಾರಕ್ಕೂ ಆದಾಯ ಬರುತ್ತದೆ. ಪ್ರವಾಸೋದ್ಯಮಕ್ಕೆ ಸಹಕಾರಿಯಾಗಲಿದೆ. ರಸ್ತೆ ಬದಿ ವ್ಯಾಪಾರಿಗಳಿಂದ ಕಲಾವಿದವರೆಗೂ ನೂರಾರು ಮಂದಿಗೆ ಕೆಲಸ ಸಿಗುತ್ತದೆ ಎಂದರು. ಈ ವೇಳೆ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸತೀಶ್, ಆಲ್ವಿನ್, ಮಹದೇವ್, ಬಸವ ರಾಜು, ಲಕ್ಷ್ಮಣ, ಕುಮಾರ, ರಮೇಶ್ ಮತ್ತಿತರರಿದ್ದರು.

## ಕ್ಯಾಲೆಂಡರ್ ಬಿಡುಗಡೆ...



ಮೈಸೂರಿನ ನಿವೇದಿತನಗರದ ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರು ಬಿಡುಗಡೆಗೊಳಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಪಾಲಂದಿರ ಸೋಮಣ್ಣ, ಉಪಾಧ್ಯಕ್ಷ ಕುಟ್ಟಿಮಡ ಕಾರ್ಯಪ್ಪ, ಪದಾಧಿಕಾರಿಗಳಾದ ಮಂದನೆರವಂಡ ನಾಣಯ್ಯ, ತಂಬುಕುತ್ತಿರ ಪಾವನ, ಬೊಟ್ಟೋಳಂಡ ಸರಳ, ಬೊಳ್ಳೆಪಂಡ ನಂಜಪ್ಪ, ಕುಂಞಯಂಡ ರಾಬಿನ್, ತಾಪಂಡ ನಾಗೇಶ್‌ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

## ಕರ್ನಾಟಕ ರತ್ನ ಡಾ.ವಿಷ್ಣುವರ್ಧನ್ ಪುಣ್ಯ ಸ್ಮರಣೆ



ದೇವರಾಜ ಅರಸು ರಸ್ತೆಯಲ್ಲಿ ವಿಷ್ಣುವರ್ಧನ್‌ರ 16ನೇ ಪುಣ್ಯಸ್ಮರಣೆ ಕಾರ್ಯಕ್ರಮ ಮಾಡಲಾಯಿತು.

ಮೈಸೂರು, ಡಿ.30–ದೇವರಾಜ ಅರಸು ರಸ್ತೆಯಲ್ಲಿ ಅಲಯನ್ಸ್ ಕ್ಲಬ್ ಅಫ್ ಮೈಸೂರು ನಾಲ್ವಡಿ ವತಿಯಿಂದ ಕರ್ನಾಟಕ ರತ್ನ ಸಾಹಸಸಿಂಹ ಡಾಕ್ಟರ್ ವಿಷ್ಣುವರ್ಧನ್ ಅವರ 16ನೇ ವರ್ಷದ ಪುಣ್ಯ ಸ್ಮರಣೆ ಮಾಡಲಾಯಿತು.

ಈ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ, ವಿಷ್ಣುವರ್ಧನ್‌ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಸಾಹಸಸಿಂಹ ಡಾ.ವಿಷ್ಣುವರ್ಧನ್ ಮಾನವೀಯ ಮೌಲ್ಯಗಳ ಹರಿಕಾರರಾಗಿ, ಉತ್ತಮ ನಟನೆ ಮೂಲಕ ಜನಮಾನಸದಲ್ಲಿ ಇನ್ನು ಅಚ್ಚ ಹಸಿರಾಗಿದ್ದಾರೆ. ಕನ್ನಡ ಚಿತ್ರರಂಗದ ದಂತಕಥೆ, ಅಭಿನಯ ಭಾರ್ಗವ, ಸಾಹಸಸಿಂಹ ವಿಷ್ಣುವರ್ಧನ್ ಅವರ ಪುಣ್ಯಸ್ಮರಣೆಯಂದು ಶತಕೋಟಿ ಪ್ರಣಾಮಗಳು ಎಂದು ಹೇಳಿದರು

ವಾಣಿಜ್ಯ ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆಬಿ ಲಿಂಗರಾಜು, ಅಲಯನ್ಸ್ ಕ್ಲಬ್ ಅಫ್ ಮೈಸೂರು ನಾಲ್ವಡಿ ಬೆಟ್ಟೇಗೌಡ, ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್ ಗೌಡ, ನರಸಿಂಹರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಮಂಜು, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ನಿರೂಪಕ ಅಜಯ್ ಶಾಸ್ತ್ರಿ ಸಂದೇಶ್ ಪವಾರ್, ವಸಂತ ಮನೀಶ್, ಮೋಹಿತ್‌ಗೌಡ, ಉಮೇಶ್, ಯಶವಂತ್, ವಿನೋದ್ ಅರಸ್, ಪ್ರಕಾಶ್, ಶ್ರೀನಿವಾಸ್, ಗೋಪಾಲ್ ಉಪಸ್ಥಿತರಿದ್ದರು.

## ಶಾಸಕರಾದ ಜಿ.ಟಿ.ದೇವೇಗೌಡರಿಂದ ಕ್ಯಾಲೆಂಡರ್ ಬಿಡುಗಡೆ...



ಮೈಸೂರಿನ 44ನೇ ವಾರ್ಡ್‌ನ ಮೈಸೂರು ಮಹಾ ನಗರಪಾಲಿಕೆ ಮಾಜಿ ಸದಸ್ಯರಾದ ಶ್ರೀಮತಿ ಸವಿತಾ ಸುರೇಶ್ ಹೊರ ತಂದಿರುವ 2026ನೇ ಸಾಲಿನ ಕ್ಯಾಲೆಂಡರ್ ಅನ್ನು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಬಿಡುಗಡೆಗೊಳಿಸಿದರು. ಈ ವೇಳೆ ವಾರ್ಡ್‌ನ ಶ್ರೀಮತಿ ಸವಿತಾ, ಜೆಡಿಎಸ್ ಮುಖಂಡ ಸುರೇಶ್, ಮುಖಂಡರಾದ ಟೆಂಟ್ ಕುಮಾರ್, ಪುಟ್ಟಸ್ವಾಮಿಗೌಡ, ಶಶಿಧರ್, ಕೃಷ್ಣೇಗೌಡ, ಸೊಸೈಟಿ ಕುಮಾರ್, ಆರ್‌ಎಕ್ಸ್ ಮಂಜು, ಮಹೇಶ್, ಲಿಂಗೇಗೌಡ, ಕಂಟ್ರಾಕ್ಟರ್ ಮಂಜು, ಲೋಕೇಶ್, ಬಸವರಾಜು, ಶ್ರೀನಿವಾಸ್, ವಾರ್ಡ್‌ನ ಹಿರಿಯ ನಾಗರಿಕರು ಉಪಸ್ಥಿತರಿದ್ದರು.

## ಅರ್ಜಿ ಆಹ್ವಾನ

**ಮೈಸೂರು:** ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಉದ್ಯೋಗಿನಿ ಯೋಜನೆ, ಚೇತನ ಯೋಜನೆಗಳಿಗೆ ಸೇವಾಸಿಂಧು ಪೋರ್ಟಲ್ ನಲ್ಲಿ ಆನ್‌ಲೈನ್ ಮೂಲಕ ಹಾಗೆಯೇ ಧನಶ್ರೀ ಯೋಜನೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆಯಡಿ ಆನ್‌ಲೈನ್ ಹಾಗೂ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ. ಆಸಕ್ತರು https://sevasindhu.karnataka.gov.in ಮೂಲಕ ಜ.15 ಸಂಜೆ 5.30ರೊಳಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಮಾಹಿತಿಗೆ ದೂ.ಸಂ: 0821–2495432.

## ಜ.2, ಸಾಮೂಹಿಕ ಲಲಿತ ಸಹಸ್ರನಾಮ ಮಂತ್ರ ಪಠಣೆ

**ಮೈಸೂರು:** ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಜ.2ರಂದು ಸಾಮೂಹಿಕ ಲಲಿತ ಸಹಸ್ರನಾಮ ಮಂತ್ರ ಪಠಣೆಯ ಕಾರ್ಯಕ್ರಮ ನಡೆಯಲಿದೆ. ಲಲಿತ ಸಹಸ್ರನಾಮಕ್ಕೆ ಭಾಗವಹಿಸುವವರು ಬೆಳಿಗ್ಗೆ 6:30ಕ್ಕೆ ಚಾಮುಂಡೇಶ್ವರಿ ದೇವಾಲಯದ ಗೋಪುರದ ಮುಂಭಾಗ ಹಾಜರಿರಬೇಕು, ಭಕ್ತಾದಿಗಳು ಬರುವ ಸಮಯದಲ್ಲಿ ಕುಂಕುಮಾರ್ಚನೆ ನೆರವೇರಿಸಲು ಕುಂಕುಮ ಹಾಗೂ ಅರ್ಚನೆಗೆ ಬೇಕಾದ ಸಾಮಗ್ರಿಗಳನ್ನು ಸ್ವತಃ ಭಕ್ತಾಧಿಗಳೇ ತರತಕ್ಕದ್ದು, ಲಲಿತ ಸಹಸ್ರನಾಮಕ್ಕೆ ಬರುವ ಭಕ್ತಾದಿಗಳು ಹಳದಿ ಅಥವಾ ಕೆಂಪು ಸೀರೆ ಉಡುಪನ್ನು ಧರಿಸಿ ಬರಬೇಕು. ಭಕ್ತಾದಿಗಳೆಲ್ಲರಿಗೂ ಕಾರ್ಯಕ್ರಮದ ನಂತರ ಲಘು ಉಪಹಾರ, ಹಾಲು ಹಾಗೂ ನೀರಿನ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

## ಖೇಲೋ ಇಂಡಿಯಾ ರಾಷ್ಟ್ರಮಟ್ಟದ ಮಲ್ಲಕಂಬ ಸ್ಪರ್ಧೆಗೆ ಆಯ್ಕೆ

ಸುತ್ತೂರು,ಡಿ.30–ಜ.1ರಿಂದ 7ರವರೆಗೆ ಗುಜರಾತ್‌ನ ದಮನ್ ಮತ್ತು ದಿಯುನಲ್ಲಿ ನಡೆಯಲಿರುವ ಖೇಲೋ ಇಂಡಿಯಾ ರಾಷ್ಟ್ರಮಟ್ಟದ ಮಲ್ಲಕಂಬ ಸ್ಪರ್ಧೆಗೆ ಸುತ್ತೂರು ಮಠದ ಜೆಎಸ್‌ಎಸ್ ವಸತಿ ಶಾಲೆಯ 9ನೇ ತರಗತಿಯ ವಿದ್ಯಾರ್ಥಿ ಮನೋಜ್ ಐರಾಣಿ ಆಯ್ಕೆಯಾಗಿದ್ದಾನೆ.



## ಕನ್ನಡದಲ್ಲೇ ತೀರ್ಪು ಬರೆದ ನ್ಯಾ.ಶಿವಶಂಕರೇಗೌಡರ ಕೊಡುಗೆ ಅನನ್ಯ

ಮೈಸೂರು,ಡಿ.30(ಎಸ್‌ಪಿಎನ್)–ಕನ್ನಡದಲ್ಲೇ ತೀರ್ಪು ನೀಡಿ, ಕನ್ನಡದ ಬೆಳವಣಿಗೆಗೆ ತಮ್ಮದೇ ಕೊಡುಗೆ ನೀಡಿರುವ ನಿವೃತ್ತ ನ್ಯಾಯಮೂರ್ತಿ ಶಿವಶಂಕರೇಗೌಡರು ನಮ್ಮ ಜಿಲ್ಲೆಯವರು ಎಂಬುದು ಹೆಮ್ಮೆಯ ವಿಷಯ. ಅವರ ಕನ್ನಡ ಪ್ರೇಮಕ್ಕೆ ಅವರನ್ನು ಗೌರವಿಸಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು.

ಮೈಸೂರು ಕುವೆಂಪುನಗರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗ ಹಾಗೂ ಮೈಸೂರು ಕನ್ನಡ ಕ್ರಿಯಾ ಸಮಿತಿ ಸಹಯೋಗದೊಂದಿಗೆ ಏರ್ಪಡಿಸಿದ್ದ 70ನೇ ಕನ್ನಡ ರಾಜ್ಯೋತ್ಸವ ಹಾಗೂ ಕುವೆಂಪು ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು, ಮಾತನಾಡಿದರು.



ಮೈಸೂರು ಕುವೆಂಪುನಗರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆದ 70ನೇ ಕನ್ನಡ ರಾಜ್ಯೋತ್ಸವ, ಕುವೆಂಪು ಜಯಂತಿ ಕಾರ್ಯಕ್ರಮವನ್ನು ಶಾಸಕ ಟಿ.ಎಸ್.ಶ್ರೀವತ್ಸ, ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡರವರು ಉದ್ಘಾಟಿಸಿದರು.

ನ್ಯಾ.ಶಿವಶಂಕರೇಗೌಡರು, ಪೀಠದಲ್ಲಿರುವಾಗ ಹೆಸರಾಂತ ವಕೀಲರು, ತಮ್ಮ ಪೀಠದ ಮುಂದೆ ವಾದ ಮಂಡನೆ ಮಾಡುವಾಗ ಇಂಗ್ಲಿಷ್ ಬಳಸಿದರೆ, ನಿಮಗೂ ಕನ್ನಡ ಬರುತ್ತದೆ, ನನಗೂ ಕನ್ನಡ ಬರುತ್ತದೆ. ಹಾಗಾಗಿ ಕನ್ನಡದಲ್ಲೇ ವಾದ ಮಂಡನೆ ಮಾಡಿ, ನಾನು ಕೂಡ ಕನ್ನಡದಲ್ಲೇ ತೀರ್ಪು ಬರೆಯುತ್ತೇನೆ ಎಂದು ಹೇಳುತ್ತಿದ್ದ ಪ್ರಸಂಗವನ್ನು ವಿವರಿಸಿದರಲ್ಲದೆ, ಇಂತಹ ಸಾಧಕರನ್ನು ಇಂದಿನ ಯುವ ಪೀಳಿಗೆಗೆ ಪರಿಚಯಿಸುವ ಕೆಲಸ ಸಂಘ–ಸಂಸ್ಥೆಗಳು ಮಾಡಬೇಕು ಎಂದು ಮನವಿ ಮಾಡಿದರು.

ಈ ಹಿಂದೆ ಕೆ.ಶಿವರಾಂ ಅವರು, ಕನ್ನಡದಲ್ಲಿಯೇ ಐಎಎಸ್ ಬರೆದು ತೇರ್ಗಡೆಯಾಗಿ 1986ರ ಬ್ಯಾಚ್‌ನ ಅಧಿಕಾರಿಯಾಗಿ ಸೇವೆ ಸಲ್ಲಿಸಿದರು. ಕನ್ನಡಿಗರ ಸ್ವಾಭಿಮಾನವನ್ನು ಇಮ್ಮಡಿಗೊಳಿಸಿದರು. ದಕ್ಷ ಅಧಿಕಾರಿಯಾಗಿ ನಿವೃತ್ತಿ ನಂತರ ರಾಜಕೀಯ ಮತ್ತು ಚಿತ್ರರಂಗದಲ್ಲಿ ಸಕ್ರಿಯರಾಗಿದ್ದರು. ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದರು ಎಂದರು.

ಕಳೆದ ವಾರ ದೆಹಲಿಯಲ್ಲಿ ಕುವೆಂಪು ಸಾಹಿತ್ಯ ಸೇವೆ ಕುರಿತು ಎರಡು ದಿನಗಳ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ ಭಾಗಿಯಾಗಿದ್ದವರು. ಕುವೆಂಪು ಅವರಿಗೆ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿ ನೀಡಲಿ ಎಂದು ಒತ್ತಾಯಿಸಿದ್ದಾರೆ. ಅವರ ಈ ಆಸೆ ಬೇಗ ನೆರವೇರಲಿ ಎಂದು ಆಶಿಸಿದರು.

ವಿಶ್ವದಲ್ಲಿ ಅನೇಕ ಭಾಷೆಗಳಿವೆ. ಅದರಲ್ಲಿ ಕೆಲ ಭಾಷೆಗಳು ಅಳಿವಿನಂಚಿನಲ್ಲಿವೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಒಂದು ಭಾಷೆ ನಶಿಸುವುದೆಂದರೆ, ಆ ಭಾಷೆಯ ಸಂಸ್ಕೃತಿಯು ನಾಶವಾದಂತೆ.

### ಕನ್ನಡದಲ್ಲೇ ಐಎಎಸ್ ಪಾಸಾದ ಕೆ.ಶಿವರಾಂರ ಸಾಧನೆಯೂ ಕಮ್ಮಿಯಿಲ್ಲ

ಹಾಗಾಗಿ ಮಾತೃ ಭಾಷಾ ರಕ್ಷಣೆ ನಮ್ಮೆಲ್ಲರ ಹೊಣೆ. ಕನ್ನಡವೆಂದರೆ ಕೇವಲ ಮಾತೃ ಭಾಷೆಯಲ್ಲ. ಅದು 'ಹೃದಯದ ಭಾಷೆ'. ಇಂತಹ ಸುಂದರ ಭಾಷೆಯನ್ನು ಉಳಿಸಿ, ಮುಂದಿನ ಪೀಳಿಗೆಗೆ ಪರಿಚಯಿಸುವುದು ನಮ್ಮೆಲ್ಲರ ಕರ್ತವ್ಯ ಎಂದರು.

ಕಾರ್ಯಕ್ರಮದಲ್ಲಿ ಖ್ಯಾತ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡರು ಮುಖ್ಯ ಭಾಷಣ ಮಾಡಿದರು. ಬೆಂಗಳೂರಿನ ಸಿಎಸ್‌ಆರ್ ಗ್ರೂಪ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಚಂದ್ರಹಾಸ್, ಪುಣ್ಯಮಾಲ್ ನೆಟ್ ಪ್ರಾಫಿಟ್ ಮಾಲೀಕ ಎಚ್.ಆರ್.ಶ್ರೀನಿವಾಸ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಕನ್ನಡ ಕ್ರಿಯಾ ಸಮಿತಿ ಅಧ್ಯಕ್ಷ ಕೆ.ಎಸ್.ಪ್ರಭುಸ್ವಾಮಿ, ಕಾರ್ಯಾಧ್ಯಕ್ಷ ಕೆ.ಎಸ್.ಎಂ.ಹುಸೇನ್, ಕೆಎಸ್‌ಆರ್‌ಟಿಸಿ ಭದ್ರತಾ ಜಾಗೃತಿ ಅಧಿಕಾರಿ ರಘು, ವಿಭಾಗೀಯ ನಿಯಂತ್ರಣಾಧಿಕಾರಿ ಎಚ್.ಟಿ.ವೀರೇಶ್, ಕೆಎಸ್‌ಆರ್‌ಟಿಸಿ ಮುಖ್ಯ ಯಾಂತ್ರಿಕ ಅಭಿಯಂತರ ಕೆ.ಎಚ್.ಶ್ರೀನಿವಾಸ್, ವೈ.ಈ.ಮಂಜುನಾಥ್, ಸಿ.ಡಿ.ವಿಶ್ವನಾಥ್, ಕೆ.ಮಹದೇವಸ್ವಾಮಿ, ಶಿವಾನಂದ ಪಾಟೀಲ ಇನ್ನಿತರರು ಉಪಸ್ಥಿತರಿದ್ದರು.

## 190ನೇ ಸಮಾನತೆ ಸಭೆ



ಮೈಸೂರಿನ ಗಾಂಧಿನಗರದ ತಿಮ್ಮಯ್ಯನ ಮಠದಲ್ಲಿ ಕರ್ನಾಟಕ ದಲಿತ ಪ್ಯಾಂಥರ್ಸ್ ಸಹಯೋಗದಲ್ಲಿ 190ನೇ ಸಮಾನತೆ ಸಭೆಯನ್ನು ನಟ, ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ನೇತೃತ್ವದಲ್ಲಿ ನಡೆಸಲಾಯಿತು. ಸಭೆಯಲ್ಲಿ ಅಧ್ಯಕ್ಷ ಯೋಗನರಸಿಂಹ, ಪದಾಧಿಕಾರಿಗಳಾದ ವೆಂಕಟಗಿರಿ, ಸುರೇಶ್, ಕಿರಣ್‌ಕುಮಾರ್, ಎಂ.ಅನುಪಮ್, ಮೋಹನ್, ಮಂಜುನಾಥ್, ದೇವೇಂದ್ರ, ಅರವಿಂದ್, ಧನಲಕ್ಷ್ಮಿ, ಕುಮಾರ್, ಪ್ರಮೋದ್, ನವೀನ್, ಲೋಕೇಶ್, ಧನಂಜಯ್, ಬಾಬು, ಚಾರ್ಲ್ಸ್, ಚಿಂತು, ರಾಜು, ವಿಕಾಸ್, ಭರತ್, ಗೌತಮ್, ನಾಗು, ಭವನ ಇನ್ನಿತರರು ಉಪಸ್ಥಿತರಿದ್ದರು.

# ದೇಶ - ವಿದೇಶ

## ಪದ್ಮಶ್ರೀ ಪುರಸ್ಕೃತ ಪೆಯಾಂಗ್ ನಿರ್ಮಿತ ಅರಣ್ಯಕ್ಕೆ ದುಷ್ಕರ್ಮಿಗಳಿಂದ ಬೆಂಕಿ



**ಜೋರ್ಹತ್/ಗೋಲಾಘಾಟ್:** 'ಭಾರತದ ಅರಣ್ಯ ಮನುಷ್ಯ'ಎಂದು ಕರೆಯಲ್ಪಡುವ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಜಾದವ್ ಪೆಯಾಂಗ್ ನಿರ್ಮಿಸಿದ್ದ ಅರಣ್ಯಕ್ಕೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದಾರೆ.

ಬೆಂಕಿಯಿಂದಾಗಿ ಸಾವಿರಾರು ಸಸ್ಯಗಳು ಸೇರಿದಂತೆ ಕೆಲವು ಪ್ರಾಣಿಗಳು ಸುಟ್ಟುಹೋಗಿವೆ. ಘಟನೆ ಸಂಬಂಧ ತನಿಖೆಗೆ ಆದೇಶಿಸಲಾಗಿದೆ. ಪೆಯಾಂಗ್ ಅವರು ನಿರ್ಮಿಸಿರುವ ಮೊಲೈ ಕಟೋನಿ'ಎಂದು ಕರೆಯಲ್ಪಡುವ ಕಾಡಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದ್ದಾರೆ ಎಂದು ಅರಣ್ಯ ಇಲಾಖೆ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬ್ರಹ್ಮಪುತ್ರ ನದಿಯ ದಡದಲ್ಲಿ ಪೆಯಾಂಗ್ ಅವರು ಮೊಲೈ ಕಟೋನಿ' ಅರಣ್ಯವನ್ನು ನಿರ್ಮಿಸಿದ್ದಾರೆ. ಬೆಂಕಿ ಕಾಡ್ಗಿಚ್ಚಿನಂತೆ ಹರಡಿದ್ದರಿಂದ 2022ರಲ್ಲಿ ಪೆಯಾಂಗ್ ಮತ್ತು ಅವರ ಮಗಳು ನೆಟ್ಟಿದ್ದ 5,500ಕ್ಕೂ ಹೆಚ್ಚು ಸಸಿಗಳು ಬೆಂಕಿಗೆ ಆಹುತಿಯಾಗಿವೆ ಎಂದೂ ವಿವರಿಸಿದ್ದಾರೆ. ದುಷ್ಕರ್ಮಿಗಳು ಉದ್ದೇಶಪೂರ್ವಕವಾಗಿಯೇ ಅರಣ್ಯಕ್ಕೆ ಬೆಂಕಿ ಹಚ್ಚಿದ್ದಾರೆ ಎಂದು ಜಾದವ್ ಅವರ ಪುತ್ರಿ ಮುನ್ಮುನಿ ಪೆಯಾಂಗ್ ಬೇಸರ ಹೊರಹಾಕಿದ್ದಾರೆ.

## ಬಾಂಗ್ಲಾದೇಶದ ಮೊದಲ ಮಹಿಳಾ ಪ್ರಧಾನಿ ಖಲೀದಾ ಜಿಯಾ ನಿಧನ



**ಢಾಕಾ:** ಬಾಂಗ್ಲಾದೇಶದ ಮೊದಲ ಮಹಿಳಾ ಪ್ರಧಾನ ಮಂತ್ರಿಯಾಗಿದ್ದ ಹಾಗೂ ಬಾಂಗ್ಲಾ ದೇಶ ನ್ಯಾಷನಲಿಸ್ಟ್ ಪಾರ್ಟಿ (BNP) ನಾಯಕಿ ಬೇಗಂ ಖಲೇದಾ ಜಿಯಾ ಅವರು ಮಂಗಳವಾರ ನಿಧನರಾಗಿದ್ದಾರೆ.

ವರದಿಗಳ ಪ್ರಕಾರ, ಖಲೇದಾ ಜಿಯಾ ಅವರು ಲಿವರ್ ಸಿರೋಸಿಸ್, ಸಂಧಿವಾತ, ಮಧುಮೇಹ ಹಾಗೂ ಹೃದಯಕ್ಕೆ ಸಂಬಂಧಿಸಿದ ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದರು ಎಂದು ತಿಳಿದುಬಂದಿದ್ದು, ವಯೋಸಹಜ ಕಾಯಿಲೆಗಳ ತೀವ್ರತೆಯಿಂದಾಗಿ ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆಂದು ತಿಳಿದುಬಂದಿದೆ. ಈ ಕುರಿತು ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿ ಅಧಿಕೃತ ಪ್ರಕಟಣೆ ಹೊರಡಿಸಿದ್ದು, ಜಿಯಾ ಅವರ ನಿಧನವನ್ನು ಖಚಿತಪಡಿಸಿದೆ. ಬಿಎನ್‌ಪಿ ಅಧ್ಯಕ್ಷೆ ಹಾಗೂ ಮಾಜಿ ಪ್ರಧಾನಮಂತ್ರಿ ಜಿಯಾ ಇಂದು ಬೆಳಗ್ಗೆ ನಿಧನರಾದರು. ಅವರ ಆತ್ಮಕ್ಕೆ ಶಾಂತಿ ಪ್ರಾರ್ಥಿಸುತ್ತೇವೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ತೀವ್ರ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಖಲೇದಾ ಜಿಯಾ ಅವರು ನವೆಂಬರ್ 23ರಂದು ಢಾಕಾದ ಎವರ್‌ಕೇರ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು.

## ಪಾದಚಾರಿಗಳ ಮೇಲೆ ಹರಿದ ಬೆಸ್ಟ್ ಬಸ್; ನಾಲ್ವರ ದುರ್ಮರಣ



**ಮುಂಬೈ:** ವಾಣಿಜ್ಯ ನಗರಿ ಮುಂಬೈನಲ್ಲಿ ಭೀಕರ ಅಪಘಾತ ಸಂಭವಿಸಿದೆ. ಪಾದಚಾರಿಗಳ ಮೇಲೆ ಬೆಸ್ಟ್ ಬಸ್ ಹರಿದಿದ್ದು, ಘಟನೆಯಲ್ಲಿ ನಾಲ್ವರು ಸಾವನ್ನಪ್ಪಿ, 10 ಮಂದಿ ಗಾಯಗೊಂಡಿರುವ ಘಟನೆ ಭಾಂಡೂಪ್ (ಪಶ್ಚಿಮ) ಪ್ರದೇಶದ ಸ್ಟೇಶನ್ ರೋಡ್ ಬಳಿ ಸೋಮವಾರ ರಾತ್ರಿ ಸಂಭವಿಸಿದೆ. ಬಸ್ ಇದ್ದಕ್ಕಿದ್ದಂತೆ ಹಿಂಬದಿಗೆ ಚಲಿಸಿದ್ದು, ಈ ವೇಳೆ ಪಾದಚಾರಿ ಮಾರ್ಗದಲ್ಲಿ ನಿಂತಿದ್ದ ಜನರ ಮೇಲೆ ಹರಿದಿದೆ ಎಂದು ತಿಳಿದುಬಂದಿದೆ. ಸುದ್ದಿ ತಿಳಿಯುತ್ತಿದ್ದಂತೆಯೇ ಅಗ್ನಿಶಾಮಕ ದಳ, ಪೊಲೀಸರು, ಬೆಸ್ಟ್ ಬಸ್ ಸಿಬ್ಬಂದಿ ಮತ್ತು 108 ಆಂಬುಲೆನ್ಸ್‌ಗಳು ತಕ್ಷಣ ಸ್ಥಳಕ್ಕೆ ಧಾವಿಸಿ ಗಾಯಗೊಂಡವರನ್ನು ಸಮೀಪದ ಆಸ್ಪತ್ರೆಗಳಿಗೆ ದಾಖಲಿಸಿದೆ. ಘಟನೆ ನಂತರ ಬಸ್ ಚಾಲಕನನ್ನು ಮುಂಬೈ ಪೊಲೀಸರು ಬಂಧನಕ್ಕೊಳಪಡಿಸಿದ್ದು, ಅಪಘಾತಕ್ಕೆ ನಿಖರ ಕಾರಣ ಪತ್ತೆಗೆ ತನಿಖೆ ಆರಂಭಿಸಿದ್ದಾರೆ. ಮುಲುಂಡ್‌ನ ಎಂಟಿ ಅಗರವಾಲ್ ಆಸ್ಪತ್ರೆಯಲ್ಲಿ ಮೂವರು ಮೃತರಾಗಿದ್ದು, ಇನ್ನೂ ಒಂಬತ್ತು ಮಂದಿಗೆ ಚಿಕಿತ್ಸೆ ಮುಂದುವರೆದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ಕ್ಯಾಲಿಫೋರ್ನಿಯಾದಲ್ಲಿ ಕಾರು ಅಪಘಾತ: ತೆಲಂಗಾಣದ ಇಬ್ಬರು ಯುವತಿಯರು ಸಾವು



**ವಾಷಿಂಗ್ಟನ್:** ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ ನಡೆದ ಭೀಕರ ಕಾರು ಅಪಘಾತದಲ್ಲಿ ತೆಲಂಗಾಣ ಮೂಲದ ಇಬ್ಬರು ಯುವತಿಯರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತ ಯುವತಿಯರನ್ನ ಗಾರ್ಲಾ ಮಂಡಲದ ನಿವಾಸಿ ಪುಲ್ಲಖಂಡಂ ಮೇಘನಾ ರಾಣಿ (25) ಮತ್ತು ಮಹಾಬುಬಾಬಾದ್ ಜಿಲ್ಲೆಯ ಮುಲ್ಕನೂರು ಕಡಿಯಾಲ ಭಾವನಾ (24) ಎಂದು ಗುರುತಿಸಲಾಗಿದೆ. ಇಬ್ಬರೂ ಸ್ನಾತಕೋತ್ತರ ಪದವಿ ವ್ಯಾಸಂಗಕ್ಕಾಗಿ 3 ವರ್ಷಗಳ ಹಿಂದೆ ಅಮೆರಿಕಕ್ಕೆ ತೆರಳಿದ್ದರು. ಸದ್ಯದಲ್ಲೇ ತಮ್ಮ ವ್ಯಾಸಂಗ ಮುಗಿಯುತ್ತಿದ್ದು, ಉದ್ಯೋಗ ಗಿಟ್ಟಿಸಿಕೊಳ್ಳುವ ತವಕದಲ್ಲಿದ್ದರು. ಆದರೆ ಅಪಘಾತ ಇಬ್ಬರ ಜೀವ ಕಸಿದಿದೆ. ಕ್ಯಾಲಿಫೋರ್ನಿಯಾದ ಅಲಬಾಮಾ ಬೆಟ್ಟಗುಟ್ಟ ಬಳಿಯಿರುವ ದುರ್ಗಮ ಪ್ರದೇಶದಲ್ಲಿ ಪ್ರಯಾಣಿಸುತ್ತಿದ್ದಾಗ ಕಾರು ನಿಯಂತ್ರಣ ಕಳೆದುಕೊಂಡಿದೆ. ಈ ವೇಳೆ ರಸ್ತೆಯಿಂದಾಚೆಗೆ ಉರುಳಿ ಆಳವಾದ ಕಂದಕಕ್ಕೆ ಬಿದ್ದಿದೆ. ಮೇಘನಾ ಮತ್ತು ಭಾವನಾ ಇಬ್ಬರೂ ಪ್ರತಿಭಾವಂತ ವಿದ್ಯಾರ್ಥಿಗಳಾಗಿದ್ದರು, ಇನ್ನೇನು ವಿದ್ಯಾಭ್ಯಾಸ ಮುಗಿಯುವ ಹಂತಕ್ಕೆ ಬಂದಿತ್ತು. ಹಾಗಾಗಿ ಉದ್ಯೋಗಾವಕಾಶ ಹುಡುಕಾಟದಲ್ಲಿದ್ದರು.

## ಕಂದಕಕ್ಕೆ ಉರುಳಿದ ಬಸ್: 7 ಮಂದಿ ದುರ್ಮರಣ



**ಡೆಹ್ರಾಡೂನ್:** ಉತ್ತರಾಖಂಡದ ಅಲ್ಮೋರಾ ಜಿಲ್ಲೆಯಲ್ಲಿ ಮಂಗಳವಾರ ಪ್ರಯಾಣಿಕರ ಬಸ್ ಆಳವಾದ ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ ಕನಿಷ್ಠ ಏಳು ಜನರು ಸಾವನ್ನಪ್ಪಿದ್ದು, 10ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಅಲ್ಮೋರಾದ ದ್ವಾರಹತ್ ನಿಂದ ನೈನಿತಾಲ್ ಜಿಲ್ಲೆಯ ರಾಮನಗರಕ್ಕೆ ತೆರಳುತ್ತಿದ್ದ ಬಸ್, ಚಾಲಕನ ನಿಯಂತ್ರಣ ತಪ್ಪಿ ರಸ್ತೆಯಿಂದ ಹೊರಗುಳಿದ ಪರಿಣಾಮ ಈ ಅಪಘಾತ ಸಂಭವಿಸಿದೆ. ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ದೇವೇಂದ್ರ ಪಿಂಚಾ, ವಾಹನವು ಭಿಕಿಯಾಸೈನ್‌ನಿಂದ 6 ಕಿ.ಮೀ. ಮುಂದಿರುವ ಕಂದಕಕ್ಕೆ ಉರುಳಿ ಬಿದ್ದಿದೆ. ಪೊಲೀಸರ ಪ್ರಕಾರ, ಅಪಘಾತದ ಸಮಯದಲ್ಲಿ ಬಸ್ 18ರಿಂದ 19 ಪ್ರಯಾಣಿಕರನ್ನು ಹೊತ್ತೊಯ್ಯುತ್ತಿತ್ತು. ಆರು ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಮತ್ತೊಬ್ಬ ಪ್ರಯಾಣಿಕ ಆಸ್ಪತ್ರೆಗೆ ಸಾಗಿಸುವಾಗ ಸಾವನ್ನಪ್ಪಿದ್ದಾನೆ. ಘಟನೆ ನಂತರ, ಸ್ಥಳೀಯ ಪೊಲೀಸ್ ತಂಡ ಮತ್ತು ರಾಜ್ಯ ವಿಪತ್ತು ಪ್ರತಿಕ್ರಿಯೆ ಪಡೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ಪ್ರಾರಂಭಿಸಿದರು. ಚಾಲಕ ಸೇರಿದಂತೆ 12 ಮಂದಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಎಂದು ಎಸ್‌ಎಸ್‌ಪಿ ಪಿಂಚಾ ಹೇಳಿದರು. ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ಧಾಮಿ ಅವರು ಜೀವಹಾನಿಗೆ ತೀವ್ರ ದುಃಖ ವ್ಯಕ್ತಪಡಿಸಿದ್ದಾರೆ.

# ದ್ವೇಷ ಭಾಷಣ ವಿಧೇಯಕ: ಬಿಜೆಪಿ ಪ್ರತಿಭಟನೆ


ದ್ವೇಷ ಭಾಷಣ ವಿಧೇಯಕ ಖಂಡಿಸಿ ಬಿಜೆಪಿ ಸೋಮವಾರಪೇಟೆಯಲ್ಲಿ ಪ್ರತಿಭಟನೆ ನಡೆಸಿತು.

ಮಡಿಕೇರಿ, ಡಿ.30–ದ್ವೇಷ ಭಾಷಣ ವಿಧೇಯಕ ಅಂಗೀಕರಿಸುವ ಮೂಲಕ ಕಾಂಗ್ರೆಸ್ ಸರ್ಕಾರ ಜನರ ವಾಕ್ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತಿದೆ ಎಂದು ಆರೋಪಿಸಿ ಬಿಜೆಪಿ ಸೋಮವಾರಪೇಟೆ ಪಟ್ಟಣದ ಖಾಸಗಿ ಬಸ್ ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಿಭಟನಾಕಾರರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್, ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿ, ಅಂಬೇಡ್ಕರ್ ಸಂವಿಧಾನ ದತ್ತವಾಗಿ ನೀಡಿರುವ ಹಕ್ಕನ್ನು ಮೊಟಕುಗೊಳಿಸುವ ಯತ್ನಕ್ಕೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೈಹಾಕಿದೆ. ಸಾಮಾನ್ಯ ಜನರು, ಮಾಧ್ಯಮಗಳು, ವಿರೋಧ ಪಕ್ಷದ ಹಕ್ಕುಗಳನ್ನು ಕಿತ್ತುಕೊಳ್ಳುವ ಇಂತಹ ಕಾಯ್ದೆಗಳ ವಿರುದ್ಧ ಜನರು ಜಾಗೃತರಾಗಬೇಕು ಎಂದರು. ಜನವಿರೋಧಿ ವಿಧೇಯಕಕ್ಕೆ ಯಾವುದೇ ಕಾರಣಕ್ಕೂ ಅಂಕಿತ ಹಾಕಬಾರದೆಂದು ಪಕ್ಷದಿಂದ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಮಾಜಿ ಶಾಸಕ ಕೆ.ಜಿ. ಬೋಪಯ್ಯ ಮಾತನಾಡಿ, ಈಗಾಗಲೇ ಸಾರ್ವಜನಿಕವಾಗಿ ದ್ವೇಷ ಹರಡುವ ಮಾತುಗಳಿಗೆ ಸಂವಿಧಾನದಡಿಯೇ ಕಾನೂನುಗಳಿವೆ. ಈಗಿನ ಭಾರತೀಯ ನ್ಯಾಯ ಸಂಹಿತೆಯಲ್ಲೂ ಕಾನೂನುಗಳಿವೆ. ಹೀಗಿದ್ದರೂ ಹೊಸದಾಗಿ ಕಾನೂನು ತರುವ ಅಗತ್ಯವೇನಿದೆ ಎಂದು ಪ್ರಶ್ನಿಸಿದರಲ್ಲದೆ, ಈ ಬಗ್ಗೆ ನ್ಯಾಯಾಲಯದ ಮೂಲಕ ಹೋರಾಟ ಮಾಡಲಾಗುವುದು ಎಂದರು.

ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಬಿ.ಬಿ. ಭಾರತೀಶ್ ಮಾತನಾಡಿ, ಈ ಹಿಂದೆ ಪಾಕಿಸ್ತಾನ ಪರ ಘೋಷಣೆ ಕೂಗಿದವರು, ಪಾಕಿಸ್ತಾನ ಕ್ರಿಕೆಟ್ ಗೆದ್ದಾಗ ಸಂಭ್ರಮಿಸಿ ಪಟಾಕಿ ಹೊಡೆದವರು, ಮಂಗಳೂರಿನಲ್ಲಿ ಎಸ್‌ಡಿಪಿಐ ಭಾಷಣ, ಕೋಗಿಲವಾಡಿಯಲ್ಲಿ ನಡೆದ ಘಟನೆಯಲ್ಲಿ ಕೂಗಿದ ಘೋಷಣೆ, ಮಾಡಿದ ಭಾಷಣಗಳು ಈ ವಿಧೇಯಕಕ್ಕೆ ಒಳಪಡುವುದೇ ಎಂಬುದನ್ನು ಕಾಂಗ್ರೆಸ್ ಸ್ಪಷ್ಟಪಡಿಸಲಿ ಎಂದರು.

ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರಾದ ಹಾಕಿಯ ರವೀಂದ್ರ ಮಂಡಲ ಬಿಜೆಪಿ ಅಧ್ಯಕ್ಷ ಗೌತಮ್ ಗೌಡ, ಪ್ರಮುಖರಾದ ಮಹೇಶ್ ತಿಮ್ಮಯ್ಯ, ದರ್ಶನ್ ಜೋಯಪ್ಪ, ಮೋಹಿತ್ ತಿಮ್ಮಯ್ಯ, ಅಜೀಶ್ ಕುಮಾರ್, ಮನು ಕುಮಾರ್ ರೈ, ಹೆಚ್.ಕೆ.ಮಾದಪ್ಪ, ಎಸ್.ಆರ್.ಸೋಮೇಶ್, ಮೋಕ್ಷಿಕ್ ರಾಜ್, ಶರತ್ ಚಂದ್ರ, ಕವಿತಾ ವಿರೂಪಾಕ್ಷ ಸೇರಿದಂತೆ ಇತರರು ಹಾಜರಿದ್ದರು.

## ಹೊಸ ವರ್ಷಾಚರಣೆ ಹೆಸರಲ್ಲಿ

# ಕಾನೂನು ಉಲ್ಲಂಘಿಸಿದರೆ ಶಿಸ್ತು ಕ್ರಮ

ಮಡಿಕೇರಿ, ಡಿ.30– ಹೊಸ ವರ್ಷಾಚರಣೆ ಹೆಸರಲ್ಲಿ ಕಾನೂನು ಉಲ್ಲಂಘನೆ, ಅಕ್ರಮ ಚಟುವಟಿಕೆ ಕಂಡು ಬಂದಲ್ಲಿ ಶಿಸ್ತು ಕ್ರಮ ಜರುಗಿಸುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಸ್ಪಷ್ಟ ಸಂದೇಶ ನೀಡಿದ್ದಾರೆ.

ಹೋಂ ಸ್ಟೇ, ರೆಸಾರ್ಟ್‌ಗಳಲ್ಲಿ ಸಂಭ್ರಮಾಚರಣೆ ಮಾಡಲು ಯಾವುದೇ ಅಡ್ಡಿ ಇಲ್ಲ. ಆದರೆ 10 ಗಂಟೆ ಬಳಿಕ ನಿಗಧಿತ ಮಿತಿಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಧ್ವನಿವರ್ಧಕಗಳನ್ನು ಬಳಸಬೇಕು. ತೆರೆದ ಪ್ರದೇಶಗಳಲ್ಲಿ ಸಂಭ್ರಮಾಚರಣೆ ಮಾಡಲು ಅನುಮತಿ ಕಡ್ಡಾಯವಾಗಿರುತ್ತದೆ. ಹೋಂಸ್ಟೇಗಳಲ್ಲಿ ಮಾದಕ ವಸ್ತುಗಳ ಬಳಕೆ, ಸೇವನೆ ಕಂಡು ಬಂದಲ್ಲಿ ಅದರ ಮಾಲೀಕರ ಮೇಲೂ ಪ್ರಕರಣ ದಾಖಲಿಸಲಾಗುತ್ತದೆ. ಹೋಂ ಸ್ಟೇ ಕಟ್ಟಡವನ್ನು ಬಾಡಿಗೆ ನೀಡಲಾಗಿದೆ ಎಂಬ ನೆಪಗಳಿಗೆ ಅವಕಾಶ ಇಲ್ಲ. ಈ ಕುರಿತು ಜಿಲ್ಲೆಯ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಭೆ ನಡೆಸಿ ಹೋಂಸ್ಟೇ ಮಾಲೀಕರು, ಹೋಂ ಸ್ಟೇ ನಡೆಸುವವರಿಗೂ ಸೂಚನೆ ನೀಡಲಾಗಿದೆ ಎಂದರು.


ಕೆ.ರಾಮರಾಜನ್

ಮದ್ಯಪಾನ ಮಾಡಿ ವಾಹನ ಚಲಾಯಿಸುವವರ ಮೇಲೂ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

**ಪಾರ್ಟಿಗಳ ಮೇಲೆ ನಿಗಾ:** ಹೋಂ ಸ್ಟೇ, ರೆಸಾರ್ಟ್‌ಗಳಲ್ಲಿ ಆಯೋಜಿಸಲಾಗುವ ಪಾರ್ಟಿಗಳ ಮೇಲೂ ನಿಗಾ ಇಡಲಾಗುತ್ತದೆ. ಅಕ್ರಮ ಚಟುವಟಿಕೆ, ಮಾದಕ ವಸ್ತು ಸೇವನೆ ಮಾರಾಟ, ಬಳಕೆ ಕುರಿತು ಮಾಹಿತಿ ದೊರೆತರೆ ಅಂತಹ ಕಡೆಗಳಿಗೆ ತೆರಳಿ ಸ್ಥಳ ಪರಿಶೀಲನೆ ಮಾಡಲಾಗುತ್ತದೆ. ಕಾನೂನು ಬಾಹಿರ ಕೃತ್ಯ ಕಂಡು ಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮ ಜರುಗಿಸಲಾಗುತ್ತದೆ. ಮುಂದೆ ಅಲ್ಲಿ ನಡೆಸುವ ಯಾವುದೇ ಉದ್ದಿಮೆಗೆ ಪೊಲೀಸ್ ಇಲಾಖೆಯಿಂದ ನಿರಾಪೇಕ್ಷಣಾ ಪತ್ರ ದೊರೆಯುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಪ್ರವಾಸಿಗರು ಹೆಚ್ಚು ಸೇರುವ ಕಡೆಗಳಲ್ಲಿ ವಿಶೇಷ ಪೊಲೀಸ್ ತಂಡಗಳನ್ನು ನಿಯೋಜಿಸಲಾಗುತ್ತದೆ ಎಂದು ವಿವರಿಸಿದರು.

**ರೇವ್ ಪಾರ್ಟಿ ಪ್ರಕರಣ ದಾಖಲು:** ಕುಶಾಲನಗರದ ತಂಡವೊಂದು ಸೋಮವಾರಪೇಟೆ ಭಾಗದಲ್ಲಿ ಹೊಸ ವರ್ಷಾಚರಣೆ ಹೆಸರಲ್ಲಿ ರೇವ್ ಪಾರ್ಟಿ ಆಯೋಜನೆ ಮಾಡಲು ಸಿದ್ಧತೆ ನಡೆಸಿತ್ತು. ಈ ಕುರಿತು ಖಚಿತ ಮಾಹಿತಿ ಆಧರಿಸಿ ಇಬ್ಬರು ಡ್ರಗ್ ಪೆಡ್ಲರ್‌ಗಳನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದ ಸಂದರ್ಭ ಸಿಂಥೆಟಿಕ್ ಮಾದಕ ವಸ್ತು ಸೇವಿಸಿರುವುದು ಪತ್ತೆಯಾಗಿತ್ತು. ಈ ಹಿನ್ನೆಲೆಯಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಈಗಾಗಲೇ ಜಿಲ್ಲೆಯ ವಿವಿದೆಡೆ ಶಂಕಿತ 50 ಮಂದಿಯನ್ನು ವಶಕ್ಕೆ ಪಡೆದು ಡ್ರಗ್ ಸೇವನೆ ಕುರಿತು ಪರಿಶೀಲನೆ ನಡೆಸಲಾಗಿದೆ. ಮಾದಕ ವಸ್ತು ಸೇವನೆ, ಮಾರಾಟ, ಬಳಕೆ ಕುರಿತು ಹದ್ದಿನ ಕಣ್ಣಿಡಲಾಗಿದೆ. ಹೋಂಸ್ಟೇಗಳಲ್ಲಿ ಮದ್ಯ ಸರಬರಾಜು ಮಾಡಲು ಅಬಕಾರಿ ಇಲಾಖೆಯಿಂದ ಅಗತ್ಯ ಅನುಮತಿ ಪಡೆದಿರಬೇಕು. ಕಾನೂನು ಉಲ್ಲಂಘಿಸಿರುವುದು ಕಂಡು ಬಂದಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು. ಹೊಸ ವರ್ಷಾಚರಣೆ ನೆಪದಲ್ಲಿ ಸಾರ್ವಜನಿಕರಿಗೆ ತೊಂದರೆಯಾದಲ್ಲಿ 112 ತುರ್ತು ಸಂಖ್ಯೆಗೆ ಕರೆ ಮಾಡುವಂತೆ ಎಸ್‌ಪಿ ಹೇಳಿದರು. ನಗರ ವೃತ್ತ ನಿರೀಕ್ಷಕ ಪಿ.ಕೆ.ರಾಜು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಗೋಮಾಂಸ ಸಾಗಾಟ ಮಾಡುತ್ತಿದ್ದವರನ್ನು ಪೊಲೀಸರಿಗೊಪ್ಪಿಸಿದ ಹಿಂದು ಜಾಗರಣ ವೇದಿಕೆ

ಮಡಿಕೇರಿ, ಡಿ.30– ಅಕ್ರಮವಾಗಿ ಗೋಮಾಂಸ ಸಾಗಿಸುತ್ತಿದ್ದ ನಾಲ್ವರು ಅಸ್ಸಾಂ ಕಾರ್ಮಿಕರನ್ನು ಹಿಂದು ಜಾಗರಣ ವೇದಿಕೆಯ ಕಾರ್ಯಕರ್ತರು ಪೊಲೀಸರಿಗೆ ಒಪ್ಪಿಸಿದ ಪ್ರಕರಣ ಸೋಮವಾರಪೇಟೆ ತಾಲೂಕಿನ ಕಲ್ಕಂದೂರಿನಲ್ಲಿ ನಡೆದಿದೆ.


ಗೋಮಾಂಸ ಸಾಗಿಸುತ್ತಿದ್ದ ಆರೋಪಿಗಳು

ಅಕ್ರಮವಾಗಿ ಗೋಮಾಂಸ ಸಾಗಾಟ ಮಾಡುತ್ತಿರುವ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದ ಹಿಂದು ಜಾಗರಣಾ ವೇದಿಕೆ ಕಾರ್ಯಕರ್ತರು ಸೋಮವಾರಪೇಟೆ ಕಲ್ಕಂದೂರಿನ ಅದ್ರಾಮ ಸೇರಿ ನಾಲ್ವರು ಆರೋಪಿಗಳು ಹಾಗೂ ಸಾಗಾಟಕ್ಕೆ ಬಳಸಿದ್ದ ಕಾರನ್ನು (ಕೆಎ.50.ಎಂ.6232) ಪೊಲೀಸರಿಗೆ ಒಪ್ಪಿಸಿದ್ದಾರೆ.

ಜಿಲ್ಲೆಯಾದ್ಯಂತ ವ್ಯಾಪಕವಾಗಿ ನಡೆಯುತ್ತಿರುವ ಗೋಹತ್ಯೆ, ಗೋ ಕಳ್ಳ ಸಾಗಾಟ, ಗೋಮಾಂಸ ಮಾರಾಟ ತಡೆಗಟ್ಟಲು ಪೊಲೀಸರು ಕಠಿಣ ಕಾನೂನು ಕ್ರಮ ಕೈಗೊಳ್ಳದಿರುವುದರಿಂದಾಗಿ ಗೋವುಗಳ ಹತ್ಯೆ ನಿರಂತರವಾಗಿ ನಡೆಯುತ್ತಿದ್ದು ಧಾರ್ಮಿಕ ನಂಬಿಕೆಗಳಿಗೆ ಘಾಸಿಯಾಗುತ್ತಿದೆ ಎಂದು ಹಿಂದು ಜಾಗರಣ ವೇದಿಕೆಯ ಜಿಲ್ಲಾ ಸಂಯೋಜಕ್ ಬೋಜೇಗೌಡ ಆಕ್ರೋಶ ವ್ಯಕ್ತಪಡಿಸಿದ್ದಾರೆ.

## ಲೆವಿಸ್ಟಾ ಕೊಡವ ಹಾಕಿ ಪಂದ್ಯಾವಳಿ: ಚೆಪ್ಪುಡಿರ ತಂಡಕ್ಕೆ ಚಾಂಪಿಯನ್ ಪಟ್ಟ



ಲೆವಿಸ್ಟಾ ಹಾಕಿ ಪಂದ್ಯಾವಳಿ ಚಾಂಪಿಯನ್‌ಶಿಪ್ ಪಡೆದ ಚೆಪ್ಪುಡರ ತಂಡ.

ಮಡಿಕೇರಿ, ಡಿ.30–ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ಸ್ ಟ್ರೋಫಿ ಪಂದ್ಯಾವಳಿಯಲ್ಲಿ ಚೆಪ್ಪುಡಿರ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಪಂದ್ಯಾಟದಲ್ಲಿ ಚೆಪ್ಪುಡಿರ ತಂಡದ ಆಟಗಾರ ಸೋಮಣ್ಣ ಪಂದ್ಯಾಟದ ಸೆಕೆಂಡ್ ಕ್ವಾಟರ್‌ನಲ್ಲಿ ಎದುರಾಳಿ ಕುಲ್ಲೇಟಿರ ತಂಡದ ವಿರುದ್ದ 1 ಗೋಲು ದಾಖಲಿಸಿದರು. ಬಳಿಕ ಇತ್ತಂಡಗಳು ಸಮಬಲದ ಹೋರಾಟ ನಡೆಸಿದರೂ ಕುಲ್ಲೇಟಿರ ತಂಡ ಯಾವುದೇ ಗೋಲು ದಾಖಲಿಸುವಲ್ಲಿ ವಿಫಲವಾಯಿತು. ಆ ಮೂಲಕ ರನ್ನರ್ಸ್ ಸ್ಥಾನಕ್ಕೆ ತೃಪ್ತಿಪಟ್ಟಿತು. ಚಾಂಪಿಯನ್ ಚೆಪ್ಪುಡಿರ ತಂಡಕ್ಕೆ 2 ಲಕ್ಷ ರೂ. ನಗದು, ರನ್ನರ್ಸ್ ಕುಲ್ಲೇಟಿರ ತಂಡಕ್ಕೆ ಲಕ್ಷ ರೂ. ನಗದು ಮತ್ತು ಆಕರ್ಷಕ ಪಾರಿತೋಷಕ ನೀಡಿ ಗೌರವಿಸಲಾಯಿತು. ಸೆಮಿಫೈನಲ್ ಹಂತಕ್ಕೇರಿದ ಮಂಡೇಪಂಡ ಮತ್ತು ಕುಪ್ಪಂಡ ಕುಟುಂಬ ತಂಡಕ್ಕೆ ತಲಾ 50 ಸಾವಿರ ಮತ್ತು ಟ್ರೋಫಿ, ಪಂದ್ಯಾವಳಿಯಲ್ಲಿ ಪಾಲ್ಗೊಂಡ ಇತರ 8 ಕುಟುಂಬ ತಂಡಕ್ಕೆ ತಲಾ 25 ಸಾವಿರ ನಗದು ನೀಡಿ ಗೌರವಿಸಲಾಯಿತು.

ರಾಜ್ಯ ಕ್ರೀಡಾ ಅಕಾಡೆಮಿ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ, ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ, ಕಾರ್ಯಾಧ್ಯಕ್ಷ ಚೆಪ್ಪುಡಿರ ಎಸ್.ಪೂಣಚ್ಚ, ಉಪಾಧ್ಯಕ್ಷ ಕುಂಡ್ಯೋಳಂಡ ರಮೇಶ್ ಮುದ್ದಯ್ಯ, ಕೂತಂಡ ಸುರೇಶ್ ಅಪ್ಪಯ್ಯ, ಬಾಚಿನಾಡಂಡ ಪ್ರದೀಪ್ ಪೂಣಚ್ಚ ಗೌರವ ಕಾರ್ಯದರ್ಶಿ ಕುಲ್ಲೇಟಿರ ಅರುಣ್ ಬೇಬ, ಜಂಟಿ ಕಾರ್ಯದರ್ಶಿ ನಾಯಕಂಡ ದೀಪಕ್ ಚಂಗಪ್ಪ, ನಿರ್ದೇಶಕರಾದ ಮುದ್ದಂಡ ರಶಿನ್ ಸುಬ್ಬಯ್ಯ, ಬೊಳ್ಳೆಪಂಡ ಜೆ.ಕಾರ್ಯಪ್ಪ, ಕಾಳಿಯಂಡ ಸಂಪನ್ ಅಯ್ಯಪ್ಪ, ಮುಕ್ಕಾಟಿರ ಎಸ್.ಸೋಮಯ್ಯ, ಚೆಕ್ಕೇರ ಆದರ್ಶ್, ಮಂಡೇಪಂಡ ಮುಖೇಶ್ ಮೊಣ್ಣಯ್ಯ, ಸುಳ್ಳಿಮಾಡ ದೀಪಕ್ ಮೊಣ್ಣಪ್ಪ ಅರ್ಜುನ ಪ್ರಶಸ್ತಿ ವಿಜೇತ ವಿ.ಆರ್.ರಘುನಾಥ್, ಅಮ್ಮಂಡಿರ ಚೇತನ್ ಕಾವೇರಿಯಪ್ಪ, ಹಾಕಿ ಕೂರ್ಗ್, ಎಂ.ಬಾಡಗ ಸ್ಪೋರ್ಟ್ಸ್ ರಿಕ್ರಿಯೇಷನ್ ಸಂಸ್ಥೆ, ಮೂರ್ನಾಡು ವಿದ್ಯಾಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಬೇಟೆಗಾರರ ಬಂಧನ: ಬಂದೂಕುಗಳ ವಶ

ಮಡಿಕೇರಿ, ಡಿ.30– ಸೋಮವಾರಪೇಟೆ ಸಮೀಪದ ಬಾಣವಾರ ಮೀಸಲು ಅರಣ್ಯಕ್ಕೆ ಬೇಟೆಗೆ ತೆರಳಿದ್ದ ಮೂರು ಮಂದಿ ಆರೋಪಿಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂದೂಕುಗಳ ಸಮೇತ ಬಂಧಿಸಿದ್ದಾರೆ.


ಮೂವರು ಆರೋಪಿಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂದೂಕುಗಳ ಸಮೇತ ಬಂಧಿಸಿದರು

ಯಡೂರು ಗ್ರಾಮದ ಶಾಂತಳ್ಳಿ ನಿವಾಸಿಗಳಾದ ಪ್ರಕಾಶ್(46) ಭರತ್(40) ಮತ್ತು ಚಿನ್ನಪ್ಪ(38) ಎಂಬವರೇ ಬಂಧಿತ ಆರೋಪಿಗಳಾಗಿದ್ದು, 2 ಒಂಟಿ ನಳಿಕೆ ಹಾಗೂ 1 ಡಬಲ್ ಬ್ಯಾರಲ್ ಬಂದೂಕು ಸಹಿತ ಹೆಡ್‌ಲೈಟ್ ಹಾಗೂ ಮತ್ತಿತರ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಸೋಮವಾರಪೇಟೆ ಆರ್‌ಎಫ್‌ಓ ಶೈಲೇಂದ್ರ ನೇತೃತ್ವದಲ್ಲಿ ದಾಳಿ ನಡೆಸಲಾಗಿದ್ದು, ಮೂವರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

## ಜ.4, ಸರ್ಕಾರಿ ನೌಕರರ ಸಂಘದ ಮಹಾಸಭೆ

ವಿರಾಜಪೇಟೆ, ಡಿ.30–ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಮಟ್ಟದ ಮಹಾಸಭೆಯನ್ನು ಜ.4ರಂದು ಅಂಬೇಡ್ಕರ್ ಭವನದಲ್ಲಿ ಪೂರ್ವಾಹ್ನ 10 ಗಂಟೆಗೆ ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ಕೆ.ಎಂ.ತಿಮ್ಮಯ್ಯ ಹೇಳಿದ್ದಾರೆ. ಮಹಾಸಭೆಯಲ್ಲಿ ನೌಕರರ ಹಿತರಕ್ಷಣೆ ಮತ್ತು ವಿವಿಧ ಬೇಡಿಕೆಗಳ ಬಗ್ಗೆ ಚರ್ಚಿಸಲಾಗುವುದು. ಇದೇ ಸಂದರ್ಭದಲ್ಲಿ ಉತ್ತಮ ಸೇವೆ ಸಲ್ಲಿಸಿದ ನೌಕರರನ್ನು ಮತ್ತು ಶಿಕ್ಷಣ ಸೇವೆ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ನೌಕರರ ಮಕ್ಕಳನ್ನು ಸನ್ಮಾನಿಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಶಾಸಕ ಎ.ಎಸ್ ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ತಹಸೀಲ್ದಾರ್ ಪ್ರವೀಣ್ ಕುಮಾರ್, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿರುವರು ಎಂದು ಹೇಳಿದರು. ಗೋಷ್ಠಿಯಲ್ಲಿ ಕಾರ್ಯದರ್ಶಿ ಬಿ.ಟಿ ದೇವರಾಜ್, ಖಜಾಂಚಿ ಎನ್.ಎಸ್ ಬಸವರಾಜ್, ರಾಜ್ಯ ಪರಿಷತ್ ಸದಸ್ಯ ಈ ಸುರೇಂದ್ರ ಉಪಸ್ಥಿತರಿದ್ದರು.

## ಕನ್ನಿಕಾಪರಮೇಶ್ವರಿ ದೇವಾಲಯದಲ್ಲಿ ಶ್ರದ್ಧಾಭಕ್ತಿಯಿಂದ ನಡೆದ ವೈಕುಂಠ ಏಕಾದಶಿ



ಕುಶಾಲನಗರದ ರಥಬೀದಿಯಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರಿ ದೇವಾಲಯದಲ್ಲಿ ಏರ್ಪಡಿಸಿದ್ದ ವೈಕುಂಠ ಏಕಾದಶಿ ವಿಶೇಷ ಪೂಜೆ ಮಂಗಳವಾರ ಶ್ರದ್ಧಾ ಭಕ್ತಿಯಿಂದ ನೆರವೇರಿತು. ನೂರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ವೈಕುಂಠ ದ್ವಾರಗಳ ಮೂಲಕ ಸಾಗಿಬಂದು ಶ್ರೀನಿವಾಸ ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಅರ್ಚಕರಾದ ಗಿರೀಶ್ ಭಟ್, ಯೋಗೇಶ್ ಭಟ್ ನೇತೃತ್ವದಲ್ಲಿ ಪೂಜಾ ಕೈಂಕರ್ಯಗಳು ಜರುಗಿದವು.

## ನೂತನ ವರ್ಷಾಚರಣೆಗೆ ಇನ್ನೊಂದು ದಿನ ಬಾಕಿ

# ಪ್ರವಾಸಿತಾಣ, ದೇವಾಲಯಗಳಲ್ಲಿ ಭಾರೀ ಜನಸಂದಣಿ

ಚಾಮರಾಜನಗರ, ಡಿ.30– 2025 ಕೊನೆಗೊಳ್ಳುತ್ತಿದ್ದು, ನೂತನ ವರ್ಷಾಚರಣೆಗೆ ಇನ್ನೊಂದು ದಿನ ಬಾಕಿ ಇರುವಾಗಲೇ ಜಿಲ್ಲೆಯ ಪ್ರವಾಸಿ ತಾಣಗಳು, ದೇವಾಲಯಗಳಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗಿದೆ.

ವರ್ಷಾಂತ್ಯ ಹಾಗೂ ನೂತನ ವರ್ಷದ ಆರಂಭ ಸಂಭ್ರಮಿಸಲು ಪ್ರವಾಸಿಗರು ಜಿಲ್ಲೆಯ ವಿವಿಧ ಸ್ಥಳಗಳಿಗೆ ಭೇಟಿ ನೀಡುತ್ತಿದ್ದಾರೆ. ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟ, ಬಿಆರ್‌ಟಿಯ ಕೆ.ಗುಡಿ, ಶಿವನ ಸಮುದ್ರ, ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಹೊಗೆನಕಲ್ ಜಲಪಾತ ಸೇರಿದಂತೆ ವಿವಿಧೆಡೆ ಹೆಚ್ಚಿನ ಜನಸಂದಣಿ ಕಂಡು ಬರುತ್ತಿದೆ.


ಮ.ಬೆಟ್ಟದಲ್ಲಿ ನೆರೆದಿದ್ದ ಭಾರೀ ಜನಸ್ತೋಮವನ್ನು ಕಾಣಬಹುದು.

**ಮಾದಪ್ಪನ ಸನ್ನಿಧಿ ರಶ್:** ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಮಲೆ ಮಹದೇಶ್ವರ ಬೆಟ್ಟಕ್ಕೆ ಜಿಲ್ಲೆ ಮಾತ್ರವಲ್ಲದೇ ರಾಜ್ಯದ ವಿವಿಧೆಡೆ ಹಾಗೂ ಹೊರ ರಾಜ್ಯಗಳಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ. ಬೆಳಗ್ಗೆ ನಡೆದ ಬೆಳ್ಳಿ ತೇರಿನ ಉತ್ಸವದಲ್ಲಿ ಹೆಚ್ಚಿನ ಭಕ್ತರು ಭಾಗಿಯಾಗಿದ್ದರಲ್ಲದೇ ಹುಲಿ, ರುದ್ರಾಕ್ಷಿ ಹಾಗೂ ಬಸವ ವಾಹನವನ್ನು ದೇಗುಲದ ಸುತ್ತ ಪ್ರದಕ್ಷಿಣೆ ಹಾಕಿಸುವ ಮೂಲಕ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಹರಕೆ ಹೊತ್ತ ಭಕ್ತರು ದಂಡಿನ ಕೋಲನ್ನು ಹೊತ್ತು ಸಾಗಿದರು. ಉಘೇ ಮಾದಪ್ಪ ಉಘೇ, ಜೈ ಮಹತ್ ಮಲೆಯಾ ಜಯ ಘೋಷ ಕೂಗಿ ಭಕ್ತಿ ಭಾವ ಮೆರೆದರು. ಇನ್ನು ಕೆಲ ಭಕ್ತರು ಮುಡಿಸೇವೆ, ಉರುಳುಸೇವೆ, ಪಂಜಿನ ಸೇವೆ ಹಾಗೂ ರಜಾ ಹೊಡೆಯುವ ಸೇವೆ ನೆರವೇರಿಸುವ ಮೂಲಕ ಮಾದಪ್ಪನ ಕ್ಷೇತ್ರದಲ್ಲಿ ಹರಕೆ ತೀರಿಸಿದರು.

**ಹೊಗೇನಕಲ್ ಫಾಲ್ಸ್‌ಗೆ ಪ್ರವಾಸಿಗರ ಲಗ್ಗೆ:** ತಮಿಳುನಾಡು ಸೇರಿದಂತೆ ಮ.ಬೆಟ್ಟಕ್ಕೆ ಆಗಮಿಸಿದ ಬೆಂಗಳೂರು, ಮೈಸೂರು, ಮಂಡ್ಯ, ಚಾ.ನಗರ ಹಾಗೂ ಇನ್ನಿತರೆ ಜಿಲ್ಲೆಯ ಭಕ್ತರು ಅದರಲ್ಲೂ ಯುವ ಜನರು ಹೆಚ್ಚಿನ ಸಂಖ್ಯೆಯಲ್ಲಿ ತಾಲೂಕಿನ ಪ್ರಸಿದ್ಧ ಪ್ರವಾಸಿ ತಾಣ ಹೊಗೇನಕಲ್ ಫಾಲ್ಸ್‌ಗೆ ಭೇಟಿ ನೀಡಿದ್ದರು. ಅಲ್ಲಿನ ಪ್ರಕೃತಿ ಸೌಂದರ್ಯ ಸವಿದು ಖುಷಿ ಪಟ್ಟರು. ಜೊತೆಗೆ, ಒಡೆಯರ್‌ಪಾಳ್ಯದ ಟಿಬೆಟಿಯನ್ನರ ನಿರಾಶ್ರಿತರ ಶಿಬಿರ, ಗುಂಡಾಲ್ ಹಾಗೂ ಉಡುತೊರೆ ಜಲಾಶಯಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಭೇಟಿ ನೀಡುತ್ತಿದ್ದಾರೆ.

ಜಿಲ್ಲೆಯ ಮತ್ತೊಂದು ಪ್ರಸಿದ್ಧ ಯಾತ್ರಾ ಸ್ಥಳ ಬಿಳಿಗಿರಿರಂಗನಬೆಟ್ಟಕ್ಕೂ ಹೆಚ್ಚಿನ ಪ್ರವಾಸಿಗರೂ ಭೇಟಿ ನೀಡುವ ನಿರೀಕ್ಷೆ ಮಾಡಲಾಗಿದೆ. ಚಾಮರಾಜನಗರ ಬಿಆರ್‌ಟಿ ಹುಲಿಸಂರಕ್ಷಿತ ಪ್ರದೇಶದ ಕೆ.ಗುಡಿಯಲ್ಲಿ ಸಫಾರಿಗೆ ಅವಕಾಶವಿರುವುದರಿಂದ ಹೆಚ್ಚಿನ ಪ್ರವಾಸಿಗರು ಬರುವ ನಿರೀಕ್ಷೆ ಮಾಡಲಾಗುತ್ತಿದೆ.

**ಬಂಡೀಪುರದಲ್ಲಿ ಮೋಜು–ಮಸ್ತಿಗೆ ಅವಕಾಶವಿಲ್ಲ:** ವರ್ಷಾಂತ್ಯ ಹಿನ್ನೆಲೆ ಪ್ರಸಿದ್ಧ ಹುಲಿ ಸಂರಕ್ಷಿತ ಅರಣ್ಯ ಪ್ರದೇಶ ಬಂಡೀಪುರದಲ್ಲಿ ವಾಸ್ತವ್ಯ ಹೂಡಿ, ಹೊಸ ವರ್ಷಾಚರಣೆ ಮಾಡಬೇಕೆಂದು ಯೋಜನೆ ರೂಪಿಸಿಕೊಂಡಿರುವವರಿಗೆ ಡಿ.31 ಮತ್ತು ಜ.1ರಂದು ಅರಣ್ಯ ಇಲಾಖೆ ವಸತಿ ಗೃಹಗಳು ಲಭ್ಯವಿರುವುದಿಲ್ಲ.

ಹೊಸ ವರ್ಷಾಚರಣೆ ಸಂದರ್ಭ ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಹೊರ ರಾಜ್ಯಗಳಿಂದ ಬರುವ ಪ್ರವಾಸಿಗರ ಮೋಜು–ಮಸ್ತಿಗೆ ಅವಕಾಶ ಕೊಡಬಾರದೆಂಬ ಉದ್ದೇಶದಿಂದ ಅರಣ್ಯ ಇಲಾಖೆಗೆ ಸೇರಿದ ವಸತಿ ಗೃಹಗಳು, ಕಾಟೇಜ್‌ಗಳಲ್ಲಿ ಪ್ರತ್ಯೇಕವಾಗಿ ಈ ಎರಡು ದಿನ ವಾಸ್ತವ್ಯಕ್ಕೆ ಅವಕಾಶವಿರುವುದಿಲ್ಲ.

ಪ್ರತಿ ವರ್ಷವೂ ಹೊಸ ವರ್ಷ ಆಚರಣೆ ಸಂದರ್ಭ ಮೋಜು–ಮಸ್ತಿ ಮಾಡಲೆಂದು ರಾಜ್ಯದ ವಿವಿಧ ಭಾಗಗಳಿಂದ ಬಂಡೀಪುರಕ್ಕೆ ಆಗಮಿಸುವ ಪ್ರವಾಸಿಗರಿಂದ ವನ್ಯಜೀವಿಗಳ ಸಹಜ ಜೀವನಕ್ಕೆ ಧಕ್ಕೆಯಾಗುತ್ತಿದ್ದ ಹಿನ್ನೆಲೆಯಲ್ಲಿ ಕಳೆದ 7 ವರ್ಷಗಳಿಂದ ಅರಣ್ಯ ಇಲಾಖೆ ತನ್ನ ಅತಿಥಿಗೃಹಗಳನ್ನು ಬಾಡಿಗೆಗೆ ಕೊಡುವುದು ನಿರ್ಬಂಧಿಸುತ್ತಿದ್ದು, ಅದರಂತೆಯೇ ಈ ಬಾರಿಯೂ ಸಹ ಅರಣ್ಯ ಇಲಾಖೆಯ ವಸತಿ ಗೃಹಗಳ ಬುಕ್ಕಿಂಗ್ ಬ್ಲಾಕ್ ಮಾಡಿದೆ.

## 11 ಹನುಮ ಭಕ್ತರ ವಿರುದ್ಧ ಎಫ್‌ಐಆರ್ ದಾಖಲು

ಗುಂಡ್ಲುಪೇಟೆ, ಡಿ.30– ಪಟ್ಟಣದಲ್ಲಿ ಇದೇ ಮೊದಲ ಬಾರಿಗೆ ಶಾಂತಿಯುತವಾಗಿ ಯಶಸ್ವಿಯಾಗಿ ಹನುಮೋತ್ಸವ ಆಚರಿಸಿ ಮುಂದಿನ ಬಾರಿ ಇನ್ನೂ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಿದ್ದ ಹನುಮ ಭಕ್ತರ ವಿರುದ್ಧ ಎಫ್‌ಐಆರ್ ದಾಖಲಿಸುವ ಮೂಲಕ ಪೊಲೀಸರು ಕಾನೂನು ಅಸ್ತ್ರ ಪ್ರಯೋಗಿಸಿದ್ದಾರೆ.

ಮೆರವಣಿಗೆಗೆ ಬಳಸಿದ್ದ ಜೆಸಿಬಿಯ ಫಿಟ್ನೆಸ್ ಸರ್ಟಿಫಿಕೇಟ್ ಹಾಗೂ ಚಾಲಕನ ಪರವಾನಗಿ ದಾಖಲೆ ಒದಗಿಸದಿರುವುದು ಮತ್ತು 20 ಅಡಿ ಹನುಮ ಮೂರ್ತಿಯನ್ನು ಪ್ರದರ್ಶಿಸಿದ್ದು, ಅಧಿಕ ಡೆಸಿಬಲ್ ಧ್ವನಿವರ್ಧಕ ಬಳಸಿದ್ದು, ನಿಗದಿತ ಸಮಯಕ್ಕಿಂತ ತಡವಾಗಿ ಮೆರವಣಿಗೆ ಆರಂಭ ಮಾಡಿದ್ದಕ್ಕೆ ಪಟ್ಟಣದ ಪೊಲೀಸರು ಹನುಮೋತ್ಸವದ ರೂವಾರಿಗಳಾದ ಪುರಸಭೆ ಮಾಜಿ ಸದಸ್ಯ ನಾಗೇಶ್, ಪ್ರಾಯ್, ಗೋವಿಂದರಾಜ್, ನಂದೀಶ್, ಶಶಿಕುಮಾರ್, ಚೆನ್ನಪ್ಪ, ಮಂಜು, ಧನುಷ್, ರವಿ, ಯೋಗೇಶ್ ಹಾಗೂ ದರ್ಶನ್ ಸೇರಿದಂತೆ 11 ಮಂದಿ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಡಿ.27ರಂದು ಪಟ್ಟಣದಲ್ಲಿ ಹನುಮ ಭಕ್ತರು ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶವಾಗದಂತೆ ಶಾಂತಿಯುತವಾಗಿ ಹನುಮೋತ್ಸವ ಆಚರಿಸಿದ್ದರು. ಉತ್ಸವ ಶಾಂತಿಯುತವಾಗಿ ನಡೆದಿದ್ದರೂ ಸಂಜೆ ಡಿಜೆ ಇದ್ದ ಟ್ರಾಕ್ಟರ್ ವಶಕ್ಕೆ ಪಡೆದುಕೊಂಡಿದ್ದ ಪೊಲೀಸರು ಹನುಮನ ಮೂರ್ತಿಯನ್ನು ಸಹಾ ಜಪ್ತಿ ಮಾಡಲು ಉದ್ದೇಶಿಸಿದ್ದರೂ ಅದು ಹೊರಟು ಹೋಗಿದ್ದರಿಂದ ಸಾಧ್ಯವಾಗಲಿಲ್ಲ. ಪೊಲೀಸರ ಕ್ರಮ ಖಂಡಿಸಿ ಯುವಕರು ಠಾಣೆ ಎದುರು ಪ್ರತಿಭಟನೆ ನಡೆಸಿದ ನಂತರ ಟ್ರಾಕ್ಟರ್ ಬಿಡುಗಡೆ ಮಾಡಲಾಗಿತ್ತು ಯಾವುದೋ ಒತ್ತಡಕ್ಕೆ ಮಣಿದಿರುವ ಪೊಲೀಸರು ಯುವಕರನ್ನು ಹೆದರಿಸುವ ಸಲುವಾಗಿ ಪ್ರಕರಣ ದಾಖಲಿಸಿದ್ದಾರೆ. ಆದ್ದರಿಂದ ಈ ಬಗ್ಗೆ ದೊಡ್ಡ ಮಟ್ಟದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಪುರಸಭೆ ಮಾಜಿ ಸದಸ್ಯ ನಾಗೇಶ್ ತಿಳಿಸಿದ್ದಾರೆ.

## ಇಂದು ಸಮಿತಿ ಸಭೆ, ಸಂವಾದ

ಚಾಮರಾಜನಗರ, ಡಿ.30– ಹೋಬಳಿ ಮಟ್ಟದ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆ ಹಾಗೂ ಸಂವಾದ ಕಾರ್ಯಕ್ರಮ ಶಾಸಕ ಎ.ಆರ್. ಕೃಷ್ಣಮೂರ್ತಿ ಅಧ್ಯಕ್ಷತೆಯಲ್ಲಿ ಡಿ.31ರಂದು ಬೆಳಗ್ಗೆ 11 ಗಂಟೆಗೆ ಸಂತೇಮರಹಳ್ಳಿಯ ಎಪಿಎಂಸಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಾಪಂ ಇಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವೈಕುಂಠ ಏಕಾದಶಿ: ದೇಗುಲಗಳಲ್ಲಿ ವಿಶೇಷ ಪೂಜೆ



ಶ್ರೀಲಕ್ಷ್ಮೀನಾರಾಯಣಸ್ವಾಮಿ ಹಾಗೂ ಶ್ರೀಮಧ್ಯರಂಗನಾಥಸ್ವಾಮಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನಡೆಯಿತು.

ಕೊಳ್ಳೇಗಾಲ, ಡಿ.30– ವೈಕುಂಠ ಏಕಾದಶಿ ಹಿನ್ನೆಲೆಯಲ್ಲಿ ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ದೇಗುಲಗಳಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಮಂಗಳವಾರ ಸಾಂಗವಾಗಿ ಜರುಗಿತು.

ವೈಕುಂಠ ಏಕಾದಶಿ ಪ್ರಯುಕ್ತ ಕೊಳ್ಳೇಗಾಲದ ಶ್ರೀಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದಲ್ಲಿ ಶ್ರೀನಿವಾಸನಿಗೆ ಮಂಗಳವಾರ ಮುಂಜಾನೆ ಅಭಿಷೇಕ, ಅಲಂಕಾರ ಮಾಡಿ ಮಹಾಮಂಗಳಾರತಿ ನೆರವೇರಿಸಿ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಎಲ್ಲಾ ಪೂಜಾ ಕೈಂಕರ್ಯಗಳು ಪ್ರಧಾನ ಅರ್ಚಕ ಶೇಷಾದ್ರಿ ಭಟ್, ಸುದರ್ಶನ್ ಭಟ್ಟರು, ಅನಂತ ಶೇಷ ಅಯ್ಯಂಗಾರ್ ಸಮ್ಮುಖದಲ್ಲಿ ನೆರವೇರಿತು.

**ಸಂಕಷ್ಟಹರ ಗಣೇಶನಿಗೆ ವಿಶೇಷ ಪೂಜೆ:** ಪಟ್ಟಣದ ಬ್ರಹ್ಮ ಕುಮಾರಿ ರಸ್ತೆಯಲ್ಲಿರುವ ಸಂಕಷ್ಟಹರ ಗಣಪತಿ ಸನ್ನಿಧಿಯಲ್ಲಿ ಕಳೆದ ವಾರದಿಂದಲೂ ವಿಭಿನ್ನ ಹಾಗೂ ವಿಶೇಷ ರೀತಿ ಪೂಜಾ ಕೈಂಕರ್ಯಗಳು ಪ್ರಧಾನ ಅರ್ಚಕ ಶಿವಕುಮಾರ್, ಮಹದೇವಸ್ವಾಮಿ ಸಮ್ಮುಖದಲ್ಲಿ ಸಾಂಗವಾಗಿ ನೆರವೇರಿತು. ವೈಕುಂಠ ಏಕಾದಶಿ ಪ್ರಯುಕ್ತ ಮಂಗಳವಾರ ಪ್ರಾತಃಕಾಲ ವಿಶೇಷ ಹೂಗಳಿಂದ ಅಲಂಕರಿಸಲಾಯಿತು. ಅಲ್ಲದೇ ಮುಂಜಾನೆಯೇ ವಿಶೇಷ ಪೂಜೆ, ಮಹಾಮಂಗಳಾರತಿ ಬಳಿಕ ಭಕ್ತರಿಗೆ ಪ್ರಸಾದ ವನಿಯೋಗ ಮಾಡಲಾಯಿತು. ಈ ವೇಳೆ ನಗರಸಭೆ ಮಾಜಿ ಸದಸ್ಯೆ ಸುಮ, ರಾಜೇಶ, ಮಹದೇವಸ್ವಾಮಿ, ಮಾಲಾ, ನಾರಾಯಣಸ್ವಾಮಿ ಸೇರಿದಂತೆ ನೂರಾರು ಭಕ್ತರು ಇದ್ದರು.

**ಮಧ್ಯರಂಗನಿಗೂ ವಿಶೇಷ ಪೂಜೆ:** ವೈಕುಂಠ ಏಕಾದಶಿ ಪ್ರಯುಕ್ತ ಇಲ್ಲಿನ ಶ್ರೀಮಧ್ಯರಂಗನಾಥಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ಹೂವಿನ ಅಲಂಕಾರ ನಡೆಸಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಮಹಾಮಂಗಳಾರತಿ ಬಳಿಕ ನೆರೆದಿದ್ದ ಭಕ್ತರು ಪೂಜೆ ಸಲ್ಲಿಸಿ ಪ್ರಾರ್ಥಿಸಿದ ಬಳಿಕ ವೈಕುಂಠ ದ್ವಾರ ತೆಗೆಯುವ ಮೂಲಕ ಭಕ್ತರನ್ನು ಕಳುಹಿಸಲಾಯಿತು.

ದೇವಸ್ಥಾನಕ್ಕೆ ಸಂಸದ ಡಾ.ಸುಧಾಕರ್, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ತಹಸೀಲ್ದಾರ್ ಬಸವರಾಜು ಹಾಗೂ ಇತರ ಗಣ್ಯರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಿದ್ದರು.

## ಗುಂಡ್ಲುಪೇಟೆ ದೇವಾಲಯಗಳಲ್ಲಿ ವೈಕುಂಠ ಏಕಾದಶಿ

ಗುಂಡ್ಲುಪೇಟೆ, ಡಿ.30– ವೈಕುಂಠ ಏಕಾದಶಿ ಅಂಗವಾಗಿ ಪಟ್ಟಣದ ವಿಜಯ ನಾರಾಯಣಸ್ವಾಮಿ ದೇವಾಲಯ ಸೇರಿದಂತೆ ತಾಲೂಕಿನ ವಿವಿಧ ವಿಷ್ಣು ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದ ಭಕ್ತರು ದೇವಾಲಯದಲ್ಲಿ ನಿರ್ಮಿಸಿದ್ದ ಸ್ವರ್ಗದ ಬಾಗಿಲಿನ ಮೂಲಕ ಸಾಗಿ ಪುನೀತರಾದರು.


ತೆರಕಣಾಂಬಿಯ ಲಕ್ಷ್ಮಿವರದರಾಜ ಸ್ವಾಮಿ ದೇವಾಲಯದಲ್ಲಿ ಸ್ವರ್ಗದ ಬಾಗಿಲಿನ ಮೂಲಕ ಭಕ್ತರು ಸಾಗಿದರು.


ಮಂಗಳವಾರ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಪಟ್ಟಣದ ಶ್ರೀವಿಜಯ ನಾರಾಯಣಸ್ವಾಮಿ ದೇವಾಲಯ, ಹುಲುಗನಮುರಡಿ ವೆಂಕಟರಮಣ ಸ್ವಾಮಿ ದೇವಾಲಯ, ತೆರಕಣಾಂಬಿಯ ಲಕ್ಷ್ಮಿವರದರಾಜ ಸ್ವಾಮಿ ದೇವಾಲಯ, ಪರಶುರಾಮ ದೇವಾಲಯ ಮುಂತಾದ ದೇವಸ್ಥಾನಗಳಲ್ಲಿ ನಸುಕಿನಿಂದಲೇ ವಿಶೇಷ ಅಲಂಕಾರ ಹಾಗೂ ಪೂಜೆಗಳನ್ನು ನೆರವೇರಿಸಲಾಯಿತು.


ಶಿವಲಿಂಗಕ್ಕೆ ಹರಿ ಮತ್ತು ಹರನ ಅಲಂಕಾರ

ನಸುಕಿನಲ್ಲಿ ಧನುರ್ಮಾಸಾಚರಣೆ ನಂತರ ಸಾವಿರಾರು ಭಕ್ತರು ವಿಷ್ಣುವಿನ ದೇವಾಲಯಗಳಿಗೆ ಹೋಗಿ ಸ್ವಾಮಿ ದರ್ಶನ ಪಡೆದರು. ಪಟ್ಟಣದ ಪುರಾತನ ಶ್ರೀರಾಮೇಶ್ವರ ದೇವಾಲಯದ ಶಿವಲಿಂಗಕ್ಕೆ ಪ್ರಧಾನ ಅರ್ಚಕ ಶಂಕರನಾರಾಯಣ ಜೋಯಿಸ್ ಹರಿ ಮತ್ತು ಹರನ ಅಲಂಕಾರ ಮಾಡಿದ್ದು, ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿದ್ದರು.

ತಾಲೂಕಿನ ತೆರಕಣಾಂಬಿ ಲಕ್ಷ್ಮಿವರದರಾಜಸ್ವಾಮಿ ದೇವಾಲಯದಲ್ಲಿ ಪ್ರಧಾನ ಅರ್ಚಕ ವರದರಾಜು ಅವರ ನೇತೃತ್ವದಲ್ಲಿ ಲಕ್ಷ್ಮಿ ಮತ್ತು ಅಮ್ಮನವರಿಗೆ ನಾನಾ ಬಗೆಯ ಹೂವುಗಳಿಂದ ವಿಶೇಷ ಅಲಂಕಾರ ಮಾಡಿ ವಿಶೇಷ ಪೂಜೆ ಸಲ್ಲಿಸಲಾಯಿತು. ದೇವಾಲಯದಲ್ಲಿ ಉತ್ಸವ ಮೂರ್ತಿಗಳು ಹಾಗೂ ಮೈಸೂರು ಅರಸು ಕೊಡುಗೆಯಾಗಿ ನೀಡಿದ್ದ ಲಕ್ಷ್ಮಿ ವಿಗ್ರಹಗಳ ಇರಿಸಿ ಅವುಗಳ ಕೆಳಗೆ ನಿರ್ಮಿಸಿದ ಸ್ವರ್ಗದ ಬಾಗಿಲಿನ ಮೂಲಕ ಭಕ್ತರು ಸಾಗಿ ಪುನೀತರಾದರು.

## ವೈಕುಂಠ ಏಕಾದಶಿ: ವೆಂಕಟರಮಣಸ್ವಾಮಿಗೆ ವಿಶೇಷ ಪೂಜೆ


ವೈಕುಂಠ ಏಕಾದಶಿ ಪ್ರಯುಕ್ತ ಪುಣ್ಯದಹುಂಡಿ ಗ್ರಾಮದ ಬಳಿಯ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ವೆಂಕಟರಮಣಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ವಿವಿಧ ಹೂಗಳಿಂದ ಅಲಂಕರಿಸಲಾಗಿತ್ತು. ಚಿತ್ರ : ಬದನಗುಪ್ಪೆ ಮಲ್ಲಣ್ಣ

## ಶತಾಯುಷಿ ನಾಗಮ್ಮ ನಿಧನ



ಚಾಮರಾಜನಗರ, ಡಿ.30– ನಗರದ ಸೋಮಣ್ಣ ಬಡಾವಣೆ ನಿವಾಸಿ, ನಿವೃತ್ತ ಉಪನ್ಯಾಸಕ ಆರ್.ನಾಗಭೂಷಣ್ ಅವರ ತಾಯಿ ನಾಗಮ್ಮ (104) ಮಂಗಳವಾರ ರಾತ್ರಿ ನಿಧನರಾದರು. ಮೃತರ ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ ನಗರದ ವೀರಶೈವ ಲಿಂಗಾಯತರ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರಲ್ಲಿ ವೈಭವದ ವೈಕುಂಠ ಏಕಾದಶಿ ಆಚರಣೆ

## ವೈಕುಂಠ ದ್ವಾರದಲ್ಲಿ ಪ್ರವೇಶಿಸಿ ಭಗವಂತನ ದರ್ಶನ ಪಡೆದ ಸಾವಿರಾರು ಭಕ್ತರು



ಗಣಪತಿ ಸಚ್ಚಿದಾನಂದ ಆಶ್ರಮದ ಆವರಣದಲ್ಲಿರುವ ಶ್ರೀದತ್ತ ವೆಂಕಟೇಶ್ವರ ದೇವಸ್ಥಾನದಲ್ಲಿ ದೇವರಿಗೆ ಗುರುವಾಯೂರಪ್ಪನ ಅಲಂಕಾರ ಮಾಡಲಾಗಿತ್ತು.

ಮೈಸೂರು, ಡಿ.30(ಜಿಎ)–ವೈಕುಂಠ ಏಕಾದಶಿಯ ಅಂಗವಾಗಿ ಮೈಸೂರಿನಲ್ಲಿ ಸಹಸ್ರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ಸ್ವರ್ಗದ ಬಾಗಿಲು ವೈಕುಂಠ ದ್ವಾರದ ಮೂಲಕ ಭಗವಂತನ ದರ್ಶನ ಪಡೆದರು.

ಮೈಸೂರು ನಗರದ ಒಂಟಿಕೊಪ್ಪಲಿನ ವೆಂಕಟರಮಣ ಸ್ವಾಮಿ ದೇವಸ್ಥಾನ, ಗಣಪತಿ ಆಶ್ರಮದ ಆವರಣದಲ್ಲಿರುವ ಶ್ರೀದತ್ತ ವೆಂಕಟೇಶ್ವರ ದೇವಸ್ಥಾನ, ಜಯನಗರದ ಇಸ್ಕಾನ್ ದೇವಸ್ಥಾನ, ರಾಜ್‌ಕುಮಾರ್ ರಸ್ತೆಯಲ್ಲಿರುವ ಶ್ರೀ ಕಲ್ಯಾಣ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನ, ವಿಜಯನಗರದಲ್ಲಿರುವ ಯೋಗಾ ನರಸಿಂಹ ಸ್ವಾಮಿ ದೇವಸ್ಥಾನ ಸೇರಿದಂತೆ ನಗರದ ವಿವಿಧ ದೇವಾಲಯಗಳಲ್ಲಿ ವೈಕುಂಠ ದ್ವಾರ ನಿರ್ಮಿಸಿ ವಿಶೇಷ ಪೂಜೆ ಪುನಸ್ಕಾರಗಳು ನಡೆದವು. ಮುಂಜಾನೆಯೇ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದುಕೊಂಡರು.

**ಒಂಟಿಕೊಪ್ಪಲಿನ ವೆಂಕಟರಮಣ ಸ್ವಾಮಿ ದೇವಸ್ಥಾನ :** ಮುಂಜಾನೆ 4.30ರಿಂದ ಸುಪ್ರಭಾತ, ವೈಕುಂಠ ದ್ವಾರ ಪ್ರವೇಶ, ನೈವೇದ್ಯ ಮಹಾಮಂಗಳಾರತಿ ನೆರವೇರಿತು. 5.30ರಿಂದ ತೀರ್ಥ ಪ್ರಸಾದ ವಿತರಣೆ ಪ್ರಾರಂಭವಾಯಿತು. ನಂತರ ಭಕ್ತರ ಸಾಗರೋಪಾದಿಯಲ್ಲಿ ದೇವಾಲಯಕ್ಕೆ ಆಗಮಿಸಿ ದೇವರ ದರ್ಶನ ಪಡೆದುಕೊಂಡು ಪ್ರಸಾದ ಸ್ವೀಕರಿಸಿದರು.

**ದತ್ತ ವೆಂಕಟೇಶ್ವರ ಸ್ವಾಮಿ :** ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ವೈಕುಂಠ ಏಕಾದಶಿಯ ಪ್ರಯುಕ್ತ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿಯ ಉತ್ತರ ದ್ವಾರ ದರ್ಶನವು ಅತ್ಯಂತ ವಿಜೃಂಭಣೆಯಿಂದ ಜರುಗಿತು. ಸಹಸ್ರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ವೈಕುಂಠ ದ್ವಾರದ ಮೂಲಕ ಸ್ವಾಮಿಯ ದರ್ಶನ ಪಡೆದರು.



ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ ವೆಂಕಟರಮಣ ಸ್ವಾಮಿ ದೇವಸ್ಥಾನದ ಮುಂಭಾಗ ಸರತಿ ಸಾಲಿನಲ್ಲಿ ನಿಂತಿರುವ ಭಕ್ತ ಸಮೂಹ

ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿ, ನಮ್ಮ ಸಂಪ್ರದಾಯದಲ್ಲಿ ವೈಕುಂಠ ಎಂಬುದು ಕೇವಲ ಮರಣದ ನಂತರ ಅಥವಾ ದೇಹ ಬಿಟ್ಟ ಮೇಲೆ ಸಿಗುವಂಥದ್ದಲ್ಲ. ಬದುಕಿರುವಾಗಲೇ ಆನಂದವನ್ನು ಅನುಭವಿಸುವುದು ನಮ್ಮ ಗುರಿ. ಅಂತಹ ವೈಕುಂಠದ ಅನುಭವವನ್ನು ಭಕ್ತರಿಗೆ ಇಲ್ಲೇ ಕಲ್ಪಿಸಿಕೊಡುವ ಪ್ರತೀಕವಾಗಿ ಇಂದು ಉತ್ತರ ದ್ವಾರ ದರ್ಶನವನ್ನು ತೆರೆಯಲಾಗಿದೆ. ದೇವಾನುದೇವತೆಗಳು ಹೇಗೆ ವೈಕುಂಠಕ್ಕೆ ತೆರಳಿ ಶ್ರೀಮನ್ನಾರಾಯಣನ ದರ್ಶನ ಪಡೆಯುತ್ತಾರೋ, ಅದೇ ರೀತಿ ಭಕ್ತರು ಇಲ್ಲಿ ದರ್ಶನ ಪಡೆಯುತ್ತಿದ್ದಾರೆ ಎಂದು ಶ್ರೀಗಳು ತಿಳಿಸಿದರು.

**ಮೋಕ್ಷದ ಉತ್ತರ ದ್ವಾರ:** ವರ್ಷವಿಡೀ ಪೂರ್ವ ದ್ವಾರದಿಂದ (ರಾಜಗೋಪುರ) ದರ್ಶನ ನೀಡುವ ಸ್ವಾಮಿ, ಇಂದು ಒಂದು ದಿನ ಮಾತ್ರ ಉತ್ತರ ದ್ವಾರದಲ್ಲಿ ದರ್ಶನ ನೀಡುತ್ತಾರೆ. ಒಮ್ಮೆ ವೈಕುಂಠ ಸೇರಿದ ಮೇಲೆ ಹೇಗೆ ಮರಳಿ ಬರುವಂತಿಲ್ಲವೋ (ಪುನರ್ಜನ್ಮವಿಲ್ಲವೋ), ಅದೇ ರೀತಿ ಈ ದ್ವಾರದ ದರ್ಶನವು ಮೋಕ್ಷದಾಯಕವಾಗಿದೆ. ಇದು 'ಮೋಕ್ಷದಾ ಏಕಾದಶಿ' ಯಾಗಿದ್ದು, ಭಕ್ತರು ಗೋವಿಂದ ನಾಮಸ್ಮರಣೆಯೊಂದಿಗೆ ಬಂದು ಪುನೀತರಾಗುತ್ತಿದ್ದಾರೆ ಎಂದು ವಿವರಿಸಿದರು.

**'ಗುರುವಾಯೂರಪ್ಪ'ನ ಅಲಂಕಾರ :** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಆಜ್ಞೆಯಂತೆ, ಇಂದು ದತ್ತ ವೆಂಕಟೇಶ್ವರನಿಗೆ ಪ್ರಸಿದ್ಧ 'ಗುರುವಾಯೂರಪ್ಪ'ನ ಅಲಂಕಾರ ಮಾಡಲಾಗಿತ್ತು. ತಿರುಪತಿಗಾಗಲಿ ಅಥವಾ ಗುರುವಾಯೂರಿಗಾಗಲಿ ಹೋಗಲು ಸಾಧ್ಯವಾಗದ ಭಕ್ತರು, ಇಲ್ಲೇ ಆ ಕ್ಷೇತ್ರಗಳ ದರ್ಶನ ಭಾಗ್ಯವನ್ನು ಪಡೆಯುತ್ತಿದ್ದಾರೆ. ಸ್ವಾಮಿಯ ಕೈಯಲ್ಲಿರುವ 'ಬೆಣ್ಣೆ'ಯ (ನವನೀತ) ಮಹತ್ವವನ್ನು ವಿವರಿಸಿದ ಶ್ರೀಗಳು, "ನವನೀತ ಎಂದರೆ ಸ್ವಾಮಿ ನಮ್ಮಲ್ಲಿ ಹೊಸದಾಗಿ ಬರುವ ರೋಗಗಳು, ಪಾಪಗಳು ಮತ್ತು ದೋಷಗಳನ್ನು ನುಂಗಿ ಹಾಕಿ, ನಮಗೆ ಅಮೃತವನ್ನೆಂಬ ಆರೋಗ್ಯವನ್ನು ಕರುಣಿಸುತ್ತಾನೆ ಎಂದು ಮಾರ್ಮಿಕವಾಗಿ ನುಡಿದರು.

**ಕಂಗೊಳಿಸಿದ ಅಲಂಕಾರ :** ಮೈಸೂರಿನ ಜಯನಗರದಲ್ಲಿರುವ ಇಸ್ಕಾನ್ ದೇವಾಲಯದಲ್ಲಿ ಬೆಳಗ್ಗೆ 7.30ಕ್ಕೆ ವೈಕುಂಠ ದ್ವಾರ ಪ್ರವೇಶ ಆರಂಭವಾಯಿತು. ಯಾವುದೇ ಅಡಚಣೆ ಇಲ್ಲದಂತೆ ಭಕ್ತರು ದರ್ಶನ ಪಡೆಯಲು ಬ್ಯಾರಿಕೇಡ್‌ಗಳನ್ನು ಅಳವಡಿಸಿ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿತ್ತು. ಇದರಿಂದ ಸರಾಗವಾಗಿ ಭಕ್ತರು ವೈಕುಂಠ ದ್ವಾರ ಪ್ರವೇಶಿಸಿ, ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಸಿದ್ದಾರ್ಥ ಲೇಔಟ್ ನಲ್ಲಿರುವ ರಾಧಾಕೃಷ್ಣ ಮಂದಿರಲ್ಲಿಯೂ ವೈಕುಂಠ ಏಕಾದಶಿಯನ್ನು ಭಕ್ತಭಾವದಿಂದ ಆಚರಿಸಲಾಯಿತು. ಮೂಲ ವಿಗ್ರಹಕ್ಕೆ ಲಕ್ಷ್ಮೀನಾರಾಯಣ ಅಲಂಕಾರ ಮತ್ತು ಉತ್ಸವ ಮೂರ್ತಿಗೆ ಶ್ರೀರಂಗ ನಾಥಸ್ವಾಮಿ ಹಾಗೂ ಮಹಾಲಕ್ಷ್ಮೀ ರೀತಿ ಮಾಡಿದ ಅಲಂಕಾರ ಎಲ್ಲ ಗಮನ ಸೆಳೆಯಿತು.

ಕಲ್ಯಾಣಗಿರಿ, ವಿಜಯನಗರ, ಉದಯಗಿರಿ ಹಾಗೂ ಕಾಳಿದಾಸ ರಸ್ತೆಯಲ್ಲಿರುವ ವಿಷ್ಣು ದೇವಾಲಯಗಳಲ್ಲಿಯೂ ವಿಶೇಷ ಪೂಜೆ, ಹೋಮ–ಹವನ, ಮಹಾಮಂಗಳಾರತಿ ಜರುಗಿತು.

**ಪೊಲೀಸ್ ಭದ್ರತೆ :** ಮೈಸೂರು–ನಂಜನಗೂಡು ರಸ್ತೆ ಹಾಗೂ ಮೈಸೂರು–ಕೆಆರ್‌ಎಸ್ ರಸ್ತೆಯಲ್ಲಿ ವಾಹನ ಸಂಚಾರ ಹೆಚ್ಚಳವಾದ ಹಿನ್ನೆಲೆಯಲ್ಲಿ ಭದ್ರತೆ ಮತ್ತು ಸಂಚಾರ ನಿರ್ವಹಣೆಗಾಗಿ ಮೈಸೂರು ನಗರ ಪೊಲೀಸ್ ಮತ್ತು ಹೋಂ ಗಾರ್ಡ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

### ವಿಶ್ವಶಾಂತಿಗಾಗಿ ಪ್ರಾರ್ಥನೆ

ಯೋಗ ನಿದ್ರೆಯಿಂದ ಎದ್ದ ಸ್ವಾಮಿಗೆ ಸಾಕ್ಷಾತ್ ಲಕ್ಷ್ಮೀದೇವಿಯೇ ಅಲಂಕಾರ ಮಾಡಿದ್ದು ಇಂದಿನ ವಿಶೇಷ. ಲೋಕ ಕಲ್ಯಾಣಕ್ಕಾಗಿ ಹಾಗೂ ದೇಶದ ಸುಭಿಕ್ಷೆಗಾಗಿ ದೇವಸ್ಥಾನದಲ್ಲಿ ಹೋಮಗಳು, ನಿರಂತರ ಚತುರ್ವೇದ ಪಾರಾಯಣ, ವಿಷ್ಣು ಸಹಸ್ರನಾಮ ಮತ್ತು ಭಗವದ್ಗೀತೆ ಪಾರಾಯಣಗಳನ್ನು ಹಮ್ಮಿಕೊಳ್ಳಲಾಗಿತ್ತು.



ಸಿದ್ದಾರ್ಥ ಲೇಔಟ್‌ನಲ್ಲಿರುವ ರಾಧಾಕೃಷ್ಣ ಮಂದಿರದ ಮೂಲ ವಿಗ್ರಹಕ್ಕೆ ಲಕ್ಷ್ಮೀನಾರಾಯಣ ಅಲಂಕಾರ ಮತ್ತು ಉತ್ಸವ ಮೂರ್ತಿಗೆ ಶ್ರೀರಂಗನಾಥಸ್ವಾಮಿ ಹಾಗೂ ಮಹಾಲಕ್ಷ್ಮೀ ರೀತಿ ಮಾಡಿದ ಅಲಂಕಾರ ಎಲ್ಲರ ಗಮನ ಸೆಳೆಯಿತು.



ಜಯನಗರದ ಇಸ್ಕಾನ್ ದೇವಾಲಯದಲ್ಲಿ ದೇವರ ದರ್ಶನ ಪಡೆದ ಭಕ್ತ ಗಣ







ಡಾ.ರಾಜ್‌ಕುಮಾರ್ ರಸ್ತೆಯಲ್ಲಿರುವ ಶ್ರೀ ಕಲ್ಯಾಣ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನ, ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ದತ್ತ ವೆಂಕಟೇಶ್ವರ ಸ್ವಾಮಿ ದೇವಸ್ಥಾನ ಹಾಗೂ ಒಂಟಿಕೊಪ್ಪಲಿನ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ಕಂಡುಬಂದ ಭಕ್ತವೃಂದ

### ತಿರುಪತಿ ಲಾಡು ಪ್ರಸಾದ



ವೈಕುಂಠ ಏಕಾದಶಿ ಪ್ರಯುಕ್ತ ಮೈಸೂರಿನ ಹಳೆ ಬಂಡಿಕೇರಿಯಲ್ಲಿರುವ ಪುರಾತನ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನದಲ್ಲಿ ತಿರುಪತಿಯಿಂದ ತರಿಸಲಾಗಿರುವ ಲಾಡು ಪ್ರಸಾದವನ್ನು ಸಾವಿರಕ್ಕೂ ಹೆಚ್ಚು ಭಕ್ತರಿಗೆ ವಿತರಿಸಲಾಯಿತು. ಈ ವೇಳೆ ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಸೇರಿದಂತೆ ಹಲವು ಮುಖಂಡರು ದೇವರ ದರ್ಶನ ಪಡೆದು, ಪ್ರಸಾದ ವಿತರಣೆಗೆ ಕೈಜೋಡಿಸಿದರು.

### ವೈಕುಂಠ ಏಕಾದಶಿ



ವೈಕುಂಠ ಏಕಾದಶಿ ಹಿನ್ನೆಲೆಯಲ್ಲಿ ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದಲ್ಲಿ ಸಾವಿರಾರು ಭಕ್ತರು ಸರದಿಯಲ್ಲಿ ಸಾಗಿ ದೇವರ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿದರು.



ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಶ್ರೀ ಸತ್ಯನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಮಾಡಿರುವ ದೇವರ ಅಲಂಕಾರ

# ಪಡುವಾರಹಳ್ಳಿ ವಾಲ್ಮೀಕಿ ರಸ್ತೆಯಲ್ಲಿ ರಾಷ್ಟ್ರಕವಿ ಕುವೆಂಪು ಜಯಂತಿ ಆಚರಣೆ

ಮೈಸೂರು, ಡಿ.30– ನಗರದ ಪಡುವಾರಹಳ್ಳಿಯ ವಾಲ್ಮೀಕಿ ರಸ್ತೆಯಲ್ಲಿ ರಾಷ್ಟ್ರಕವಿ ಕುವೆಂಪು ಜಯಂತಿ ಆಚರಿಸಲಾಯಿತು.

ವಾಲ್ಮೀಕಿ ರಸ್ತೆ ನಾಮಫಲಕದ ಬಳಿ ನಡೆದ ಸರಳ ಸಮಾರಂಭದಲ್ಲಿ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಕುವೆಂಪು ನಮ್ಮ ನಾಡಿನ ಹೆಮ್ಮೆ ಎಂದು ಬಣ್ಣಿಸಿದರು.

ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟ ಮಹಾನ್ ಕವಿ ಕುವೆಂಪು ಅವರು, ಶ್ರೇಷ್ಠ ಸಾಹಿತ್ಯ ಹಾಗೂ ಮಾದರಿ ವ್ಯಕ್ತಿತ್ವದ ಮೂಲಕ ಕನ್ನಡಿಗರ ಮನದಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ. 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ' ಇನ್ನಿತರ ಕಾದಂಬರಿಗಳು, 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಸೇರಿದಂತೆ ಕನ್ನಡ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿಕೊಂಡರು.

ಕರ್ನಾಟಕ ಸರ್ಕಾರದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಾದ ಕರ್ನಾಟಕ ರತ್ನ, ಪಂಪ ಪ್ರಶಸ್ತಿ ಪಡೆದ ಮೊದಲಿಗರು ಕುವೆಂಪು. ಇವರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಮಾನಸ ಗಂಗೋತ್ರಿ ಎಂಬ ಶಿಕ್ಷಣ ಲೋಕವನ್ನೇ ನಿರ್ಮಿಸಿದರು. ಈ ಸ್ನಾತಕೋತ್ತರ ಪದವಿ ಕೇಂದ್ರದ ಮೂಲಕ ಇಂದಿಗೂ ಲಕ್ಷಾಂತರ ವಿದ್ಯಾರ್ಥಿಗಳು, ದೇಶದ ಸಂಪತ್ತಾಗಿ ನಿರ್ಮಾಣವಾಗುತ್ತಿದ್ದಾರೆ. ಹೀಗೆ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಪ್ರಗತಿಯ ಜೊತೆಗೆ ಸಮಾಜದ ಅಭಿವೃದ್ಧಿಯಲ್ಲಿ ಪಾಲುದಾರಿಕೆ ಪಡೆದ ಕುವೆಂಪು ಹೆಸರು ಚಿರಸ್ಥಾಯಿಯಾಗಿ ಇರಲಿದೆ. 'ಎಲ್ಲಾದರು ಇರು, ಎಂಥಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು...' ಎಂಬ ಸಂದೇಶ ಕನ್ನಡಿಗರಿಗೆ ಸದಾ ಪ್ರೇರಣೆಯಾಗಿರಲಿದೆ. ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನದಂದು ಮಾತ್ರವಲ್ಲದೆ ಎಂದಿಗೂ ಮನಃಪೂರ್ವಕವಾಗಿ ಗೌರವಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದರು



ಮೈಸೂರಿನ ಪಡುವಾರಹಳ್ಳಿ ವಾಲ್ಮೀಕಿ ರಸ್ತೆಯಲ್ಲಿ ರಾಷ್ಟ್ರಕವಿ ಕುವೆಂಪು ಜಯಂತಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ಸಹಕಾರಿ ಕೆ.ಉಮಾಶಂಕರ್, ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್ ಕಾರ್ಯದರ್ಶಿ ಎಂ.ಭೈರಪ್ಪ, ದಿ ಮೈಸೂರು ಕೋಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ನಗರಪಾಲಿಕೆ ಮಾಜಿ ಸದಸ್ಯರಾದ ಎಂ.ಚಿಕ್ಕವೆಂಕಟು, ಗುರುವಿನಾಯಕ, ಎಲ್.ಜಗದೀಶ್, ನಗರ ಬಿಜೆಪಿ ಉಪಾಧ್ಯಕ್ಷ ಸೋಮಶೇಖರರಾಜು, ಈ.ರಮೇಶ್, ಕಾರ್ಯದರ್ಶಿಗಳಾದ ಎಂ.ಜಿ.ಪುನೀತ್ ಗೌಡ, ಮರಿಸ್ವಾಮಿನಾಯಕ, ಮುಖಂಡರಾದ ಯತೀಶ್, ಅಭಿ, ಸಿ.ಡಿ.ಕುಮಾರ್, ಕೇಬಲ್ ಕಿಟ್ಟಿ, ಗೋಕುಲಂ ವಿ.ಮಧು, ಕೆ.ಗಿರೀಶ್, ವೇಣು, ಗವಿ, ಸಿ.ಸಂತೋಷ್, ರಾಘವ್‌ಗೌಡ, ಕೇಬಲ್ ವಿಜಿ, ರಾಜು, ವೆಂಕಟೇಶ, ಯುವ ಮೋರ್ಚಾದ ಸಚಿನ್ ಗೌಡ, ಬೋಟಿ ಬಜಾರ್ ಯೋಗಿ, ಗೋಪಿ, ಪುಷ್ಪ ಗೌಡ, ಧನರಾಜ್, ಕುಂಬಾರಕೊಪ್ಪಲ್ ಆರ್.ಲೋಕೇಶ್, ಸಂಜೀವಿನಿ ಕುಮಾರ್, ಈ.ಬಸವರಾಜು, ಗೋಕುಲಂ ನಾಗ, ಕಿರಣ್, ಎಸ್‌ಟಿ ಮೋರ್ಚಾದ ಕೃಷ್ಣನಾಯಕ, ಎಂ.ಕೆ.ಶಿವಕುಮಾರ್, ಎಂ.ಕೆ.ಕಿಶೋರ್ ಕುಮಾರ್, ಫೋಟೋ ನಾಗೇಶ ಮತ್ತಿತರರು ಭಾಗವಹಿಸಿದ್ದರು.

ಮೈಸೂರು ಮಿತ್ರ



# ಮೈಸೂರು ಜಿಲ್ಲೆಯಲ್ಲಿ ವೈಕುಂಠ ಏಕಾದಶಿ ವಿಜೃಂಭಣೆ

## ದೇವಾಲಯದಲ್ಲಿ ವಿಶೇಷ ಪೂಜೆ, ಮುಂಜಾನೆಯಿಂದಲೇ ಸಾವಿರಾರು ಭಕ್ತರಿಂದ ದೇವರ ದರ್ಶನ



ಭೇರ್ಯ ಸಮೀಪದ ಸುಗ್ಗನಹಳ್ಳಿ ಗ್ರಾಮದ ಪುರಾಣ ಪ್ರಸಿದ್ಧವಾದ ಶ್ರೀ ಭೂ ನೀಳಾ ಸಮೇತ ಶ್ರೀ ತಿರುಮಲೇಶ್ವರ ಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿಯನ್ನು ವಿಶೇಷವಾಗಿ ಆಚರಿಸಲಾಯಿತು.

ಮೈಸೂರು, ಡಿ.30– ವೈಕುಂಠ ಏಕಾದಶಿ ವಿಷ್ಣುವಿಗೆ ಸಮರ್ಪಿತವಾದ ಪವಿತ್ರ ದಿನ. ಈ ದಿನದಂದು ಉಪವಾಸವಿದ್ದು, ಪೂಜೆ ಸಲ್ಲಿಸಿದರೆ ಜನ್ಮ–ಜನ್ಮಾಂತರದ ಪಾಪಗಳು ಕಳೆಯುತ್ತವೆ ಎಂಬ ನಂಬಿಕೆಯಿದ್ದು, ಮಂಗಳವಾರ ಮೈಸೂರು ಜಿಲ್ಲೆ ಸೇರಿದಂತೆ ದೇಶಾದ್ಯಂತ ಎಲ್ಲಾ ದೇವಾಲಯಗಳಲ್ಲಿ ವೈಕುಂಠ ಏಕಾದಶಿಯನ್ನು ವೈಭವದಿಂದ ಆಚರಿಸಲಾಯಿತು. ಎಲ್ಲೆಡೆ ಭಕ್ತರು ವೈಕುಂಠ ದ್ವಾರದ ಮೂಲಕ ಪ್ರವೇಶಿಸಿ ಸ್ವಾಮಿ ದರ್ಶನ ಪಡೆದರು.

## ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ



**ತಿ.ನರಸೀಪುರ:** ವೈಕುಂಠ ಏಕಾದಶಿ ಅಂಗವಾಗಿ ಮಂಗಳವಾರ ಮುಂಜಾನೆಯಿಂದಲೇ ಸ್ವರ್ಗದ ದ್ವಾರದ ಮೂಲಕ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯ ಪ್ರವೇಶಿಸಿದ ಭಕ್ತರು ಭಗವಂತನ ದರ್ಶನ ಪಡೆದು ಪುನೀತರಾದರು. ಲಕ್ಷ್ಮಿ ಸಮೇತ ಶ್ರೀಗುಂಜಾ ನರಸಿಂಹಸ್ವಾಮಿಗೆ ವಿಶೇಷ ಅಭಿಷೇಕ ನೆರವೇರಿಸಿ, ಬಗೆ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು ಅಲ್ಲದೇ ದೇವಾಲಯವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ಸಾವಿರಾರು ಭಕ್ತರು ಭಗವಂತನನ್ನು ಕಣ್ತುಂಬಿಕೊಂಡರು. ಅನಂತರ ಅವರು ಭಕ್ತರಿಗಾಗಿ ಲಾಡು ಪ್ರಸಾದ ವಿತರಿಸಿದರು. ಭಕ್ತರಿಗಾಗಿ ಮೊಸರನ್ನ, ರೈಸ್ ಬಾತ್, ಕೇಸರಿ ಬಾತ್, ಪುಳಿಯೋಗರೆ, ಪೊಂಗಲ್ ವಿತರಣೆ ಮಾಡಿದರು. ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಪಾರು ಪತ್ತೆದಾರರಾದ ಪ್ರದೀಪ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪುಟ್ಟಸ್ವಾಮಿ, ಉದ್ಯಮಿ ಪೆಟ್ರೋಲ್ ಬಂಕ್ ಚಂದು, ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್, ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ಅರ್ಚಕರಾದ ವೆಂಕಟೇಶ್, ಶ್ರೀಪಾದ ಸಿಬ್ಬಂದಿಗಳು, ವರದ, ರಾಘವೇಂದ್ರ ಕುಮಾರ್, ಹರೀಶ್, ವಿನೋದ್, ಸೇವಾರ್ಥದಾರರಾದ ರೇಣುಕ ಪ್ರಸಾದ್ ಇದ್ದರು.

## ಕೋಟೆಯಲ್ಲಿ ಭಕ್ತರಿಂದ ವೈಕುಂಠ ದರ್ಶನ



**ಹೆಚ್.ಡಿ.ಕೋಟೆ:** ಪಟ್ಟಣದಲ್ಲಿರುವ ವರದರಾಜ ಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ಅಂಗವಾಗಿ ಶ್ರೀ ವರದರಾಜ ಸ್ವಾಮಿಗೆ ಬೆಳಗಿನಿಂದಲೆ ವಿಶೇಷ ಪೂಜೆ ಸಲ್ಲಿಸಲಾಯಿತು, ವರದರಾಜ ಸ್ವಾಮಿ ಹಾಗೂ ಪಾರ್ವತಿ ದೇವಿಯನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು. ದೇವಾಲಯದ ಆವರಣವನ್ನು ಹೂವಿನಿಂದ ಶೃಂಗರಿಸಲಾಗಿತ್ತು. ಬೆಳಗಿನ ಜಾವದಿಂದಲೇ ದೇವಾಲಯಕ್ಕೆ ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ಶ್ರೀ ವರದರಾಜ ಸ್ವಾಮಿ ಹಾಗೂ ಪಾರ್ವತಿ ಅಮ್ಮನವರ ದರ್ಶನ ಪಡೆದು ಪುನಿತರಾದರು.

ಸಾವಿರಾರು ಭಕ್ತಾದಿಗಳಿಗೆ ಪ್ರಸಾದವನ್ನು ವಿತರಿಸಲಾಯಿತು. ದೇವಾಲಯ ಕಮಿಟಿಯ ತಿರುಮಲಚಾರ್, ದೇವರಾಜ್, ಡೈರಿ ಶ್ರೀಕಾಂತ್, ಜಯಂತ್, ಪೂರ್ಣೇಶ್, ಅರ್ಚಕರಾದ ಶ್ರೀಧರಮೂರ್ತಿ, ಸುಧಾಕರ್ ಪೂಜೆಯಲ್ಲಿ ಭಾಗವಹಿಸಿದ್ದರು.

## ಕಪಿಲಾ ತೀರದಲ್ಲಿ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದರ್ಶನ



**ಸರಗೂರು:** ಪಟ್ಟಣದ ಕಪಿಲಾ ನದಿ ತೀರದಲ್ಲಿರುವ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ದೇವಾಯದಲ್ಲಿ ನಡೆದ ವೈಕುಂಠ ಏಕಾದಶಿ ಪೂಜಾ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮೋಹನಕುಮಾರಿ ಅವರು ಸರತಿ ಸಾಲಿನಲ್ಲಿ ನಿಂತು ವೈಕುಂಠ ದ್ವಾರದ ಮೂಲಕ ಶ್ರೀ ಲಕ್ಷ್ಮಿ ನರಸಂಹಸ್ವಾಮಿ ದೇವರ ದರ್ಶನ ಪಡೆದರು.

ಭಕ್ತಿ ಭಾವದಿಂದ ನಡೆದ ವೈಕುಂಠ ಏಕಾದಶಿಗಾಗಿ ರಾತ್ರಿಯಿಂದಲೇ ದೇವಾಲಯವನ್ನು ಸ್ವಚ್ಛಗೊಳಿಸಿ ತಳಿರು–ತೋರಣಗಳಿಂದ ಶೃಂಗರಿಸಿ, ರಂಗೋಲಿ ಬಿಡಿಸಿ, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ಬೆಳಗಿನ ಜಾವ ಹೋಮ ಹವನಗಳನ್ನು ನಡೆಸಿ ಗಣಪತಿ ಪೂಜೆ, ಕುಂಕುಮಾರ್ಚನೆ, ಷೋಡಶೋಪಚಾರ, ಅಭಿಷೇಕ ಪೂಜೆ ನಡೆಸಿ ಮಹಾಮಂಗಳಾರತಿ ಮಾಡಿ ತೀರ್ಥ ಪ್ರಸಾದ ವಿನಿಯೋಗ ಮಾಡಲಾಯಿತು, ಶ್ರೀಚೌಡೇಶ್ವರಿ ಭಜನಾ ಮಂಡಳಿಯವರಿಂದ ಭಜನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ನಂತರ ಭಕ್ತರು ಸರತಿ ಸಾಲಿನಲ್ಲಿ ನಿಂತು ವೈಕುಂಠ ದ್ವಾರದ ಮೂಲಕ ಶ್ರೀಲಕ್ಷ್ಮಿ ನರಸಿಂಹಸ್ವಾಮಿ ದೇವರ ದರ್ಶನ ಪಡೆದು ಧನ್ಯರಾದರು, ಈ ಪೂಜಾ ಕಾರ್ಯಕ್ರಮವನ್ನು ತೊಗಟವೀರ ಕ್ಷತ್ರಿಯ ಸಮಾಜದ ವತಿಯಿಂದ ನಡೆಸಲಾಯಿತು, ಎಸ್.ಬಿ.ಐ. ಬ್ಯಾಂಕ್ ಮ್ಯಾನೇಜರ್ ರಾಕೇಶ್, ವೀರಶೈವ ಮುಖಂಡರಾದ ಎಸ್.ಆರ್.ಮಹೇಶ್, ಆರ್.ಐ.ರವಿಚಂದ್ರ, ಪಪಂ ಸದಸ್ಯರಾದ ಶ್ರೀನಿವಾಸ್, ನವೀನ್ ಕುಮಾರ್ ಹಾಗೂ ತೊಗಟವೀರ ಕ್ಷತ್ರಿಯ ಸಮಾಜ ಸೇರಿದಂತೆ ಎಲ್ಲಾ ಸಮುದಾಯದ ಭಕ್ತರು ವೈಕುಂಠ ಏಕಾದಶಿ ಪೂಜಾ ಕಾರ್ಯದಲ್ಲಿ ಭಾಗವಹಿಸಿದ್ದರು. ಪೂಜಾ ಕಾರ್ಯಕ್ರಮವನ್ನು ಪ್ರಧಾನ ಅರ್ಚಕರಾದ ಗೋಪಿ, ಹರೀಶ್, ಸುಕೃತ್ ಭಾರದ್ವಜ್ ನೆರವೇರಿಸಿದರು, ಪಟ್ಟಣದ ಪ್ರಸಿದ್ದ ಲಕ್ಷ್ಮಿನರಸಿಹದೇವಾಲಯ, ಬ್ರಾಹ್ಮಣ ಶ್ರೀರಾಮಮಂದಿರದಲ್ಲಿ ವೈಕುಂಠ ಏಕಾದಶಿ ಪೂಜಾ ಕಾರ್ಯಗಳು ಜರುಗಿದವು.

## ಸರದಿ ಸಾಲಿನಲ್ಲಿ ನಿಂತು ವೈಕುಂಠ ದರ್ಶನ ಪಡೆದ ಭಕ್ತರು



**ನಂಜನಗೂಡು:** ವೈಕುಂಠ ಏಕಾದಶಿಯ ಹಿನ್ನೆಲೆಯಲ್ಲಿ ನಗರದ ಬಜಾರ್ ರಸ್ತೆಯಲ್ಲಿರುವ ಕನ್ನಿಕಾ ಪರಮೇಶ್ವರಿ ದೇವಾಲಯ, ಸತ್ಯನಾರಾಯಣ ಸ್ವಾಮಿ ದೇವಾಲಯ, ಸುಜಾತಾಪುರಂ ಬಳಿ ಇರುವ ಶ್ರೀ ವೆಂಕಟೇಶ್ವರ ದೇವಾಲಯಕ್ಕೆ ಭಕ್ತ ಸಾಗರವೇ ಹರಿದು ಬಂದಿತ್ತು.

ವೈಕುಂಠ ಏಕಾದಶಿಯ ಹಿನ್ನೆಲೆಯಲ್ಲಿ ಮೂರು ದೇವಾಲಯಗಳಲ್ಲಿ ಶ್ರೀ ವೆಂಕಟೇಶ್ವರಸ್ವಾಮಿ ಅವರಿಗೆ ಕ್ಷೀರ ಅಭಿಷೇಕ, ಫಲ ಪುಷ್ಪಾಭಿಷೇಕ, ಕಲ್ಲು ಸಕ್ಕರೆ ಅಭಿಷೇಕ ಮತ್ತು ವಿವಿಧ ಪೂಜಾ ವಿಧಿ ವಿಧಾನಗಳನ್ನು ಸಾಂಗೋಪವಾಗಿ ನೆರವೇರಿಸಲಾಯಿತು.

ವೈಕುಂಠ ಏಕಾದಶಿ ಹಿನ್ನೆಲೆಯಲ್ಲಿ 3 ದೇವಾಲಯಗಳಲ್ಲಿ ವೈಕುಂಠ ಪ್ರವೇಶ ದ್ವಾರವನ್ನು ನಿರ್ಮಿಸಲಾಗಿತ್ತು ಹಾಗೂ ದೇವರ ಮೂರ್ತಿಯನ್ನು ವಿವಿಧ ಬಗೆಯ ಹೂಗಳಿಂದ ಅಲಂಕೃತಗೊಳಿಸಲಾಗಿತ್ತು. ನಂತರ ಮಹಾಮಂಗಳಾರತಿ ನೆರವೇರಿಸಿ ಭಕ್ತರ ದರ್ಶನಕ್ಕೆ ಅನುವು ಮಾಡಿ ಕೊಡಲಾಯಿತು. ಭಕ್ತರು ಉದ್ದನೆಯ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಧನ್ಯತಾ ಭಾವ ಮೆರೆದರು. ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು.

## ಪೊಲೀಸ್ ಠಾಣೆ ಆಸು ಪಾಸಿನಲ್ಲೆ ಸರಣಿ ಕಳ್ಳತನ

### 16 ಅಂಗಡಿಗಳ ಬೀಗ, ಬಾಗಿಲು ಮುರಿದು ಕಳ್ಳತನ



**ಇದೇನು ಬಿಡ್ರಿ ಸಣ್ಣ ಪುಟ್ಟ ಕಳ್ಳತನ. ಸಾವಿರ, ನೂರು ರೂ.ಗಳ ಕಳ್ಳತನ ಇದನ್ಯಾಕೆ ಹೈಲೈಟ್ ಮಾಡ್ತೀರಿ ಬಿಡ್ರಿ... ಇದೆಲ್ಲ ಮಾಮೂಲಿ ಕಳ್ಳತನ ಎಂದು ಪೊಲೀಸರು ಉಡಾಫೆಯಿಂದ ಮಾತನಾಡುತ್ತಿದ್ದುದು ಕೇಳಿ ಬಂದಿತು.**

**ನಂಜನಗೂಡು:** ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕಳ್ಳತನ, ರಾಬರಿ, ದರೋಡೆ, ಕೊಲೆ–ಸುಲಿಗೆಗಳಂತಹ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದೀಗ ಪೊಲೀಸ್ ಠಾಣೆ ಆಸು ಪಾಸಿನಲ್ಲೆ ಸರಣಿ ಕಳ್ಳತನ ನಡೆಯುವ ಮೂಲಕ ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

ನಗರದ ಆರ್.ಪಿ.ರಸ್ತೆಯಲ್ಲಿ ಸುಮಾರು 16 ಅಂಗಡಿಗಳಲ್ಲಿ ಸರಣಿ ಕಳ್ಳತನ ಹಾಗೂ ಕಳ್ಳತನ ಯತ್ನ ನಡೆದಿದೆ. ಪಟ್ಟಣ ಪೊಲೀಸ್ ಠಾಣೆಯ ಸಮೀಪದಲ್ಲೇ ಈ ಕಳ್ಳತನ ನಡೆದಿದೆ.

ಪಟ್ಟಣ ಪೊಲೀಸ್ ಠಾಣೆಯ ಪಕ್ಕದ ಬಾಯ್ಸ್ ಮಿಡಲ್ ಶಾಲೆಯ ಆವರಣದಲ್ಲಿರುವ ಹಾಲಿನ ಡೈರಿಯಲ್ಲಿ 2 ಸಾವಿರ ಕಳ್ಳತನವಾಗಿದೆ, ಎದುರಿನ ಕೋಳಿ ಮಾರಾಟದ ಅಂಗಡಿಗಳ ಗಲ್ಲಾಪೆಟ್ಟಿಗೆಯಲ್ಲಿದ್ದ ಅಲ್ಪ ಪ್ರಮಾಣದ ಹಣವನ್ನು ಕಳ್ಳತನ ಮಾಡಲಾಗಿದೆ. ನಾಲ್ಕನೇ ಕ್ರಾಸ್‌ನ ಅಪ್ಪು ಸ್ಟೋರ್, ಅಕ್ಷಯ ಫುಟ್‌ವೇರ್, 6ನೇ ಕ್ರಾಸ್‌ನಲ್ಲಿರುವ ಅಶ್ವಿನಿ ಬೇಕರಿ, ನಂಜುಂಡೇಶ್ವರ ಡಿಟಿಎಚ್, ವಿಡಿಯೋ, ಸೇರಿದಂತೆ ಸುಮಾರು 16 ಅಂಗಡಿಗಳಲ್ಲಿ ಕಳ್ಳರು ಸರಳಿನಿಂದ ಬೀಗ ಮತ್ತು ಬಾಗಿಲು ಮುರಿದು ಕಳ್ಳತನ ನಡೆಸಿದ್ದಾರೆ. ನಗರದಲ್ಲಿ ಜರುಗುತ್ತಿರುವ ಸರಣಿ ಕಳ್ಳತನ ಪ್ರಕರಣಗಳಿಂದಾಗಿ ನಂಜನಗೂಡಿನ ಸಾರ್ವಜನಿಕರು ಬೆಚ್ಚಿ ಬಿದ್ದಿದ್ದಾರೆ, ದುರಂತವೆಂದರೆ ಪೊಲೀಸ್ ಠಾಣೆಯ ಮೂಗಿನ ಕೆಳಗೆ ಕಳ್ಳತನವಾಗಿರುವುದು ಸಾರ್ವಜನಿಕರ ನಿದ್ದೆಗೆಡಿಸಿದೆ. ಪೊಲೀಸ್ ಠಾಣೆಯ ಸಮೀಪವೇ ಪೊಲೀಸರು ರಕ್ಷಣೆ ನೀಡಲಾಗದಿದ್ದಲ್ಲಿ ದೂರದ ಬಡಾವಣೆಯ ನಿವಾಸಿಗಳ ಪಾಡೇನು? ಎಂಬುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಕಳ್ಳರು ಕಳ್ಳತನ ಮಾಡುತ್ತಿರುವುದು, ಕಳ್ಳತನಕ್ಕೆ ಯತ್ನಿಸುತ್ತಿರುವ ದೃಶ್ಯ ಅಲ್ಲಿರುವ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ ಇದನ್ನು ಆದಷ್ಟು ಶೀಘ್ರ ಪತ್ತೆ ಹಚ್ಚಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ

## ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರೆಗೆ ದಿನಗಣನೆ

### ದೇವಾಲಯಕ್ಕೆ ಸುಣ್ಣ-ಬಣ್ಣ ಬಳಿಯುವ ಕಾರ್ಯ ಆರಂಭ



ದೇವಸ್ಥಾನವನ್ನು ಸುಣ್ಣ–ಬಣ್ಣ ಬಳಿಯುವುದರೊಂದಿಗೆ ಸ್ವಚ್ಛತಾ ಕಾರ್ಯ ನಡೆಯುತ್ತಿರುವುದು.

**ಮೂಗೂರು:** ಇಲ್ಲಿನ ಶ್ರೀ ತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು ದೇವಾಲಯವು ಸುಣ್ಣ ಬಣ್ಣಗಳಿಂದ ಸಿಂಗಾರಗೊಳ್ಳುತ್ತಿದೆ.

ಕಳೆದ ಒಂದು ವಾರದಿಂದ ದೇಗುಲದ ಸ್ವಚ್ಛತೆಯಲ್ಲಿ ತೊಡಗಿದ್ದು ಧಾರ್ಮಿಕ ಉತ್ಸವದ ಪರಂಪರೆಯನ್ನು ಸಾರುವ ದೇವಾಲಯಕ್ಕೆ ಸೇರಿದ ಉತ್ಸವದ ವಾಹನಗಳಾದ ಆನೆ, ಕುದುರೆ, ಹಂಸ, ಪಕ್ಷಿ, ಹಾಗೂ ಸಿಂಹವಾಹನಗಳ ದುರಸ್ತಿ ಕಾರ್ಯದ ಜತೆಗೆ ಬಣ್ಣ ಬಳಿದು ಬಣ್ಣದ ಚಿತ್ತಾರದೊಂದಿಗೆ ಅವುಗಳಿಗೆ ಮತ್ತಷ್ಟು ಮೆರುಗು ನೀಡುವ ಕಾರ್ಯ ನಡೆಯುತ್ತಿದೆ.

**ಶೆಡ್ ನಿರ್ಮಾಣ:** ರಥೋತ್ಸವದ ವೇಳೆ ಭಕ್ತರು ಬಿಸಿಲಿನಲ್ಲಿಯೇ ರಸ್ತೆಯ ಉದ್ದಕ್ಕೂ ದರ್ಶನಕ್ಕಾಗಿ ಸಾಲುಗಟ್ಟಿ ನಿಲ್ಲುವುದನ್ನು ತಪ್ಪಿಸಲು ಈ ಬಾರಿ ಶೆಡ್ ನಿರ್ಮಾಣ ಮಾಡಿ ದರ್ಶನಕ್ಕೆ ಸುಗಮ ಮಾರ್ಗವನ್ನು ಕಲ್ಪಿಸುವ ಕಾಮಗಾರಿ ಪ್ರಗತಿಯಲ್ಲಿದೆ ಎಂದು ದೇವಾಲಯದ ಪಾರುಪತ್ತೇದಾರ್ ಎಂ.ಬಿ.ಸಾಗರ್ ತಿಳಿಸಿದ್ದಾರೆ.

ಪರಂಪರೆಯಾಗಿ ಬಂಡಿ ಕಟ್ಟುವ ಹಟ್ಟಿ ಎಂದೇ ಕರೆಯಲ್ಪಡುವ ಮೂಗೂರಿನ (ಬಂಡಿ ಹಟ್ಟಿ ಕೆಂಪಣ್ಣ) ಕುಟುಂಬಸ್ಥರು ಈ ಬಾರಿ 3.75 ಲಕ್ಷರೂ. ಬೆಲೆ ಬಾಳುವ ಬಂಡಿ ಎತ್ತುಗಳನ್ನು ಮೈಸೂರಿನ ಕೆ.ಜಿ.ಕೊಪ್ಪಲಿನಿಂದ ಖರೀದಿಸಿ ತಂದು ಮೊದಲ ಬಂಡಿ ಓಟಕ್ಕೆ ಇನ್ನಿಲ್ಲದಂತೆ ಅವುಗಳಿಗೆ ಪೋಷಣೆ ಮಾಡಲಾಗುತ್ತಿದೆ. ಗ್ರಾಮದ ನಿವಾಸಿಗಳು ಬಂಡಿ ಓಟಕ್ಕೆ ಜಿಲ್ಲೆಯ ನಾನಾ ಭಾಗಗಳಿಂದ ಲಕ್ಷಾಂತರ ರೂ. ನೀಡಿ ಎತ್ತುಗಳನ್ನು ಹುಡುಕಿ ತಂದು ಅವುಗಳಿಗೆ ಪುಷ್ಠಿದಾಯಕ ಆಹಾರವನ್ನು ಮನೆಗಳಲ್ಲಿ ತಾವೇ ತಯಾರಿಸಿ ತಾಕತ್ತು ಮಾಡುವ ಕಸರತ್ತಿನಲ್ಲಿ ತೊಡಗಿದ್ದಾರೆ.

## ವೀಲ್ ಚೇರ್ ಬ್ಯಾಡ್ಮಿಂಟನ್ ಆಟಗಾರ್ತಿಗೆ ಸನ್ಮಾನ



**ಜಯಪುರ:** ಮೈಸೂರು ತಾಲೂಕು ಜಯಪುರ ಗ್ರಾಮದ ಸಾರ್ವಜನಿಕ ಸಮುದಾಯ ಭವನದ ಆವರಣದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವಿಶೇಷ ಚೇತನರ ಕ್ಷೇಮಾಭಿವೃದ್ಧಿ ಒಕ್ಕೂಟ ಮತ್ತು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಮ್ಮುಖದಲ್ಲಿ ಮಂಗಳವಾರ ನಡೆದ ಸಮನ್ವಯ ಸಭೆಯಲ್ಲಿ ವ್ಹೀಲ್‌ಚೇರ್ ಬ್ಯಾಡ್ಮಿಂಟನ್ ಆಟಗಾರ್ತಿ ಕೆ.ಎಂ ಪಲ್ಲವಿ ಅವರನ್ನು ಸನ್ಮಾನಿಸಲಾಯಿತು.

ಜಯಪುರ ಗ್ರಾಪಂ ಅಧ್ಯಕ್ಷ ಎಂ.ಮಾದೇವಯ್ಯ, ಪಿಡಿಓ ಬಸವಣ್ಣ, ಸಮಾಜ ಸೇವಕರಾದ ಎಸ್.ಶ್ರೀಕಾಂತ್, ವೈ.ಕೆ.ಅನ್ನಪೂರ್ಣ, ನವಚೇತನ ಬಸವೇಶ್ವರ ವಿಶೇಷ ಮಕ್ಕಳ ಶಾಲೆ ಸಂಸ್ಥಾಪಕ ಅಧ್ಯಕ್ಷ ಮರೀಗೌಡ, ಆರ್.ಎಂ.ಸ್ವಾಮಿ, ಮಾದೇಗೌಡ, ದೀಪಶ್ರೀ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಭಾಗ್ಯ, ಪಳನಿ, ಗ್ರಾಮ ಒಕ್ಕೂಟದ ಅಧ್ಯಕ್ಷ ಮಹದೇವಸ್ವಾಮಿ ಮತ್ತು ಜಯಪುರ ಗ್ರಾಪಂ ಸದಸ್ಯರು ಮತ್ತು ಮುಖಂಡರು ಭಾಗವಹಿಸಿದ್ದರು.

## ಕೆ.ಆರ್.ನಗರದಲ್ಲಿ ಕುವೆಂಪು ಜಯಂತಿ



ಕೆ.ಆರ್.ನಗರದಲ್ಲಿ ಕುವೆಂಪು ಜಯಂತಿ ಆಚರಿಸಲಾಯಿತು.

ಕೆ.ಆರ್.ನಗರ, ಡಿ.30– ಪಟ್ಟಣದ ತಾಪಂ ಸಭಾಂಗಣದಲ್ಲಿ ಜಗದ ಕವಿ, ಯುಗದ ಕವಿ ಕುವೆಂಪು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಅವರ ಜನ್ಮದಿನ ಆಚರಿಸಲಾಯಿತು.

ತಾಪಂ ಇಓ ವಿ.ಪಿ.ಕುಲದೀಪ್ ಮಾತನಾಡಿ, ಕುವೆಂಪು ಅವರು ತಮ್ಮದೇ ಆದ ಶೈಲಿಯಲ್ಲಿ ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ. ಅವರು ನಾಡು ಕಂಡ ಅಪರೂಪದ ಸಾಹಿತ್ಯ ಸಾಧಕರು. ಅವರ ಕೃತಿಗಳು ಎಂದೆಂದೂ ಮೌಲಿಕ. ಅವನ್ನೆಲ್ಲಾ ಓದುವಂತಾಗಬೇಕು ಎಂದರು.

ಈ ವೇಳೆ ಸಹಾಯಕ ನಿರ್ದೇಶಕ ಶಿವಕುಮಾರ್, ಕಚೇರಿ ವ್ಯವಸ್ಥಾಪಕ ಸತೀಶ್ ಕುಮಾರ್, ಸಹಾಯಕ ಲೆಕ್ಕಾಧಿಕಾರಿ ಮೋಹನ ಕುಮಾರಿ, ತಾಲೂಕು ಯೋಜನಾಧಿಕಾರಿ ನಂದೀಶ್, ಸಿಬ್ಬಂದಿಗಳಾದ ಕರಿಗೌಡ, ದೀಪು, ನಾಗಲಕ್ಷ್ಮಿ, ಕಾರ್ತಿಕ್, ಮಲ್ಲಿಕ್, ತುಕಾರಾಂ ಇತರರಿದ್ದರು.

### ಬನ್ನೂರಲ್ಲಿ ಕುವೆಂಪು ಜಯಂತಿ ಅಚರಣೆ



ಬನ್ನೂರಿನ ಬಸವೇಶ್ವರ ವೃತ್ತದಲ್ಲಿ ವಿಶ್ವ ಮಾನವ ಕುವೆಂಪುರವರ ಜನ್ಮದಿನವನ್ನು ಜೆಡಿಎಸ್ ಕಾರ್ಯಕರ್ತರು, ಒಕ್ಕಲಿಗ ಮುಖಂಡರ ನೇತೃತ್ವದಲ್ಲಿ ಆಚರಿಸಲಾಯಿತು. ತಾಲೂಕು ಒಕ್ಕಲಿಗ ಸಂಘದ ಅಧ್ಯಕ್ಷ ವೈ.ಎಸ್. ರಾಮುಸ್ವಾಮಿ, ನಾರಾಯಣಸ್ವಾಮಿ, ದೇವರಾಜ್, ಜಯರಾಂ ಸೇರಿದಂತೆ ಪ್ರಮುಖರು ಇದ್ದರು.

### ಬಿಎಡ್‌ಗೆ ಅರ್ಜಿ ಆಹ್ವಾನ

**ಕೆ.ಆರ್.ನಗರ:** ಪಟ್ಟಣದ ಯಡತೊರೆ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಡಳಿತ ಮಂಡಳಿಯ ಕೋಟಾದಲ್ಲಿ 2025–26ನೇ ಸಾಲಿನ ಬಿಇಡಿ ಪದವಿಗೆ ಅರ್ಜಿ ಆಹ್ವಾನಿಸಲಾಗಿದೆ. ಈ ಸಂಬಂದ ಕಾಲೇಜಿಗೆ ಭೇಟಿ ನೀಡಿ ದಾಖಲಾತಿ ಮಾಡಿಕೊಳ್ಳ ಬಹುದು ಎಂದು ಕಾಲೇಜಿನ ವ್ಯವಸ್ಥಾಪಕ ಲೋಕೇಶ್ ಭರಣಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ 9844588368/ 8867591618.

## ಸಹಕಾರ ಸಂಘದ ದಿನದರ್ಶಿಕೆ ಬಿಡುಗಡೆ



ತಿ.ನರಸೀಪುರ ಕಸಬಾ ಕೃಷಿ ಪತ್ತಿನ ಸಹಕಾರ ಸಂಘ ಹೊರತಂದಿರುವ ನೂತನ ವರ್ಷದ ದಿನದರ್ಶಿಕೆಯನ್ನು ಸಂಘದ ಅಧ್ಯಕ್ಷ ಮಲ್ಲಣ್ಣ ಬಿಡುಗಡೆ ಮಾಡಿದರು.

ತಿ.ನರಸೀಪುರ, ಡಿ.30–ಪಟ್ಟಣದ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಹೊರತರಲಾಗಿರುವ 2026ನೇ ಸಾಲಿನ ನೂತನ ದಿನ ದರ್ಶಿಕೆಯನ್ನು ಸಂಘದ ಆವರಣದಲ್ಲಿ ಬಿಡುಗಡೆ ಮಾಡಲಾಯಿತು.

ಸಂಘದ ಆವರಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷ ಡಣಾಯಕನಪುರ ಮಲ್ಲಣ್ಣ ತನ್ನಿತರೆ ಆಡಳಿತ ಮಂಡಳಿ ಸದಸ್ಯರ ಸಮ್ಮುಖದಲ್ಲಿ ನೂತನ ವರ್ಷದ ದಿನದರ್ಶಿಕೆ ಬಿಡುಗಡೆ ಮಾಡಿದರು.

ಈ ವೇಳೆ ಮಾತನಾಡಿದ ಮಲ್ಲಣ್ಣ ಈ ಬಾರಿ ಅವಧಿ ಮುನ್ನವೇ ಕ್ಯಾಲೆಂಡರ್ ಬಿಡುಗಡೆ ಮಾಡಿ ಸಾರ್ವಜನಿಕರು ಹಾಗೂ ಸಂಘದ ಷೇರುದಾರರಿಗೆ ತಲುಪಿಸುವ ಕೆಲಸ ಮಾಡಿದ್ದೇವೆ. ಹೊಸ ವರ್ಷ ಎಲ್ಲರಿಗೂ ಶುಭ ತರಲಿ ಎಂದು ಹಾರೈಸಿದರು. ನೂತನ ವರ್ಷದಲ್ಲಿ ಸಂಘದಲ್ಲಿ ಖಾಲಿ ಇರುವ ಜಾಗದಲ್ಲಿ ನೂತನವಾಗಿ ನಾಲ್ಕು ಮಳಿಗೆ ನಿರ್ಮಾಣ ಮಾಡುವ ಕಾರ್ಯಕ್ಕೆ ಚಾಲನೆ ನೀಡಲು ಆಡಳಿತ ಮಂಡಳಿ ನಿರ್ಧರಿಸಿದೆ. ಅಲ್ಲದೇ ಗೋದಾಮು ನಿರ್ಮಾಣಕ್ಕೆ ಸಹ ಚಾಲನೆ ನೀಡಿ ಹಂತ ಹಂತವಾಗಿ ಸಂಘದ ಅಭಿವೃದ್ಧಿ ಮಾಡಲಾಗುತ್ತದೆ ಎಂದರು.

ಈ ವೇಳೆ ಉಪಾಧ್ಯಕ್ಷ ಟಿ.ಸಿ.ಫಣೀಶ್ ಕುಮಾರ್, ನಿರ್ದೇಶಕರುಗಳಾದ ಎಂ.ನಾಗರತ್ನ, ಎನ್.ಶೇಖರ್, ಮಹಾಲಿಂಗಪ್ಪ, ಎಂ.ಮಹದೇವಯ್ಯ, ರಾಘವೇಂದ್ರ ಪ್ರಕಾಶ್ ಕುಮಾರ್, ಬಿ.ಸುಂದರಸ್ವಾಮಿ, ಬಿ.ಎಂ.ಮಹದೇವಸ್ವಾಮಿ, ಬಸವರಾಜು, ಆರ್.ದಿವ್ಯಶ್ರೀ, ಮಹದೇವಪ್ರಸಾದ್, ಪ್ರಭಾರ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಡಿ.ಎಂ. ಶಿವಕುಮಾರ್ ಹಾಜರಿದ್ದರು.

## ಸಿಎಂ ಸಿದ್ದರಾಮಯ್ಯರ ಕೈ ಬಲಪಡಿಸಲು ಮೈಸೂರಲ್ಲಿ ಜ.25ರಂದು ಬೃಹತ್ ಅಹಿಂದ ಸಮಾವೇಶ



ಸುದ್ದಿಗೋಷ್ಠಿಯಲ್ಲಿ ಅಹಿಂದ ನಾಯಕರ ಕಾಣಬಹುದು.

**ನಂಜನಗೂಡು:** ಹಿಂದುಳಿದ ವರ್ಗಗಳ ಆಶಾಕಿರಣವಾದ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕೈ ಬಲಪಡಿಸುವ ಸಲುವಾಗಿ ಮೈಸೂರಿನ ವಸ್ತು ಪ್ರದರ್ಶನ ಆವರಣದಲ್ಲಿ ಜ.25ರಂದು ಬೃಹತ್ ಅಹಿಂದ ಸಮಾವೇಶವನ್ನು ನಡೆಸಲಾಗುವುದು ಎಂದು ಅಹಿಂದ ಮುಖಂಡ ಟಿ.ಎಲ್.ಮೋಹನ್ ಕುಮಾರ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಅಹಿಂದ ವರ್ಗಗಳು ಸಂಘಟಿತರಾಗಿ, ಮುನ್ನೆಲೆಗೆ ಬರಲು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೋರಾಟ ಮತ್ತು ಯೋಜನೆಗಳು ಕಾರಣವಾಗಿವೆ, ಆದ್ದರಿಂದ ಅಹಿಂದ ವರ್ಗಗಳ ಸಂಘಟನೆಯ ಹಿತ ದೃಷ್ಟಿಯಿಂದ ಮೈಸೂರಿನಲ್ಲಿ ಜ.25ರಂದು ಬೃಹತ್ ಸಮಾವೇಶವನ್ನು ಏರ್ಪಡಿಸಲಾಗಿದೆ ಎಂದರು.

ಈ ಸಮಾವೇಶದಲ್ಲಿ ಮೈಸೂರು ಮತ್ತು ಅಕ್ಕಪಕ್ಕ ಜಿಲ್ಲೆಯ ಎಲ್ಲಾ ಸಾರ್ವಜನಿಕರು ಮತ್ತು ಅಹಿಂದ ವರ್ಗದ ಮುಖಂಡರುಗಳು ಸಮಾವೇಶದಲ್ಲಿ ಭಾಗಿಯಾಗುವ ಮೂಲಕ ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್ ಮಾತನಾಡಿ ಇಡೀ ರಾಜ್ಯದಲ್ಲಿ ಅಹಿಂದ ವರ್ಗಗಳು ಹೆಚ್ಚಿನ ಸಂಖ್ಯೆಯಲಿವೆ. ಆದರೂ ಸಹ ಸರ್ಕಾರದ ಸವಲತ್ತುಗಳನ್ನು ಪಡೆಯಲು ಸಾಧ್ಯವಾಗಿಲ್ಲ, ಈ ಹಿನ್ನೆಲೆಯಲ್ಲಿ ಅಹಿಂದ ವರ್ಗಗಳು ಸಂಘಟಿತರಾಗಿ ಸಮಾಜದ ಮುಖ್ಯ ವಾಹಿನಿಗೆ ಬರಬೇಕಾದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನಿವಾರ್ಯ ಎಂದರು. ಇದೀಗ ಅವರ ಕೈ ಬಲಪಡಿಸಿ ರಾಜ್ಯದ್ಯಂತ ಲಕ್ಷಾಂತರ ಜನ ಅಹಿಂದ ವರ್ಗಗಳ ಜನರು ಸೇರಿ ಸಮಾವೇಶದ ಮೂಲಕ ರಾಜ್ಯ ಮತ್ತು ರಾಷ್ಟ್ರದ ವರಿಷ್ಠರಿಗೆ ಅಹಿಂದ ಬಲದ ಸಂದೇಶವನ್ನು ರವಾನಿಸಬೇಕಾಗಿದೆ, ಆದ್ದರಿಂದ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಸಮಾವೇಶದಲ್ಲಿ ಭಾಗಿಯಾಗಿ ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯೆ ಲತಾಸಿದ್ಧಶೆಟ್ಟಿ, ಟಿ.ಡಿ.ಗಿರೀಶ್, ರವಿಕುಮಾರ್, ನಿಂಗರಾಜು, ಲೋಕೇಶ್, ಚಂದ್ರು ಮಹೇಶ್, ಬೀರಯ್ಯ ಉಪಸ್ಥಿತರಿದ್ದರು.

## ಮಡಿಲು ಸಂಸ್ಥೆಯ ಕ್ಯಾಲೆಂಡರ್ ಬಿಡುಗಡೆ



ಹುಣಸೂರಿನ ಮಡಿಲು ಗ್ರಾಮೀಣಾಭಿವೃದ್ಧಿ ಮತ್ತು ಸೇವಾ ಸಂಸ್ಥೆಯು 2026ನೇ ಸಾಲಿನ ದಿನದರ್ಶಿಕೆಯನ್ನು ಕೆ.ಅರ್.ನಗರದ ಕಾಗಿನೆಲೆ ಶಾಖಾ ಮಠದಲ್ಲಿ ಶ್ರೀ ಶಿವಾನಂದಪುರಿ ಸ್ವಾಮೀಜಿ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಮಡಿಲು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷೆ ಹಾಗೂ ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಿ.ಎಂ.ತ್ರಿವೇಣಿ, ಸಂಸ್ಥೆಯ ಕಾರ್ಯದರ್ಶಿ ಮಧುಶ್ರಿ, ರೇಖಾ, ಅಜಯ್, ವಿಜಯಕುಮಾರಿ.ಅರ್.ಗೌಡ ಉಪಸ್ಥಿತರಿದ್ದರು.

### ಕೊಡವ ಸಮುದಾಯ ಕುರಿತಂತೆ ಮೊದಲ ಆನುವಂಶಿಕ ಅಧ್ಯಯನದ ನೇತೃತ್ವ ವಹಿಸಿದ್ದ

# ಪ್ರೊ.ಬುಟ್ಟಿಯಂಡ ಕೆ.ಥೆಲ್ಮಾ '2025ರ ವರ್ಷದ ಕೂರ್ಗ್ ವ್ಯಕ್ತಿ' ಗೌರವಕ್ಕೆ ಭಾಜನ

ಮೈಸೂರು,ಡಿ.30(ಪಿಎಂ)– ಕೊಡವರ (ಕೂರ್ಗ್ಸ್) ಮೊದಲ ಆನುವಂಶಿಕ ಅಧ್ಯಯನದ ನೇತೃತ್ವ ವಹಿಸಿದ್ದ ಪ್ರೊ.ಬಿ.ಕೆ.ಥೆಲ್ಮಾ, '2025ರ ವರ್ಷದ ಕೂರ್ಗ್ ವ್ಯಕ್ತಿ' ಗೌರವಕ್ಕೆ ಭಾಜನರಾಗಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ ಕೊಡವರ ಮೂಲದ ವಿಚಾರವು ಹಲವು ವರ್ಷಗಳಿಂದ ಜನಾಂಗಶಾಸ್ತ್ರಜ್ಞರಿಗೆ ಒಂದು ಒಗಟಾಗಿ ಪರಿಣಮಿಸಿತ್ತು. ಇಂತಹ ಸನ್ನಿವೇಶದಲ್ಲಿ ಕೊಡವರ ಮೂಲದ ಹಿಂದಿನ ನಿಗೂಢತೆಯನ್ನು ಭೇದಿಸಿದ ಕೀರ್ತಿ ಕೊಡಗಿನಲ್ಲಿ ಜನಿಸಿದ ಪ್ರೊ.ಬುಟ್ಟಿಯಂಡ ಕುಟ್ಟಪ್ಪ ಥೆಲ್ಮಾ ಮತ್ತು ಅವರ ತಂಡಕ್ಕೆ ಸಲ್ಲುತ್ತದೆ. ಕೊಡಗಿನಾದ್ಯಂತ ಕೊಡವರ ವ್ಯವಸ್ಥಿತ ಮಾದರಿಯನ್ನು ಸಂಗ್ರಹಿಸಿ, ಲಭ್ಯವಿರುವ ಆನುವಂಶಿಕ ವಿಶ್ಲೇಷಣಾತ್ಮಕ ಸಾಧನಗಳನ್ನು ಬಳಸಿಕೊಂಡು, ಪ್ರೊ.ಥೆಲ್ಮಾ ಮತ್ತು ಅವರ ತಂಡವು ಕೊಡವರ ಆನುವಂಶಿಕ ರಚನೆಯ ಕುರಿತು ವೈಜ್ಞಾನಿಕ ಪ್ರಬಂಧವನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಿದೆ.

'ವರ್ಷದ ಕೊಡಗಿನ ವ್ಯಕ್ತಿ' ಆಯ್ಕೆಯನ್ನು ಪತ್ರಕರ್ತ ಮತ್ತು ಲೇಖಕ ಪಿ.ಟಿ.ಬೋಪಣ್ಣ ಅವರ ಕೊಡಗಿನ ಮೊದಲ ಸುದ್ದಿ ಮತ್ತು ಪ್ರವಾಸೋದ್ಯಮ ಪೋರ್ಟಲ್ 'www.coorgtourisminfo.com' ಮೂಲಕ ನಡೆಸಿದ ಸಮೀಕ್ಷೆಯ ಆಧಾರದಲ್ಲಿ ಮಾಡಲಾಗಿದೆ.

ಪ್ರೊ.ಥೆಲ್ಮಾ ಅವರು ಭಾರತೀಯ ತಳಿಶಾಸ್ತ್ರ ಮತ್ತು ಜೀನೋಮಿಕ್ಸ್ ಸಂಶೋಧನಾ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ



ಪ್ರೊ.ಬಿ.ಕೆ.ಥೆಲ್ಮಾ

ವಿಜ್ಞಾನಿಯಾಗಿದ್ದಾರೆ. ಇವರು ಮಾನವ ತಳಿಶಾಸ್ತ್ರ ಕುರಿತು ಸಂಶೋಧನೆ ಕೈಗೊಳ್ಳಲು ನಿರ್ಧರಿಸಿದಾಗ, ಅದು ಭಾರತದಲ್ಲಿ ಬಹುತೇಕ ಅನ್ವೇಷಿಸದ ವಿಷಯವಾಗಿತ್ತು. ಆದರೆ ಇಂದು ಅವರು ಮಾನವ ತಳಿಶಾಸ್ತ್ರ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ದೇಶದ ಪ್ರಮುಖ ತಜ್ಞರಲ್ಲಿ ಒಬ್ಬರಾಗಿದ್ದಾರೆ ಮಾತ್ರವಲ್ಲ, ಗಮನಾರ್ಹ ಕೊಡುಗೆಗಳನ್ನು ನೀಡಿದ್ದಾರೆ.

ಸುಮಾರು 70ರ ವಯೋಮಾನದ ಆಸುಪಾಸಿನ ಪ್ರೊ.ಥೆಲ್ಮಾ ಅವರು ಕೊಡವ ಸಮುದಾಯಕ್ಕೆ ಸೇರಿದವರು. ಇವರು ವೇಷಭೂಷಣ ಮತ್ತು ಪಾಕಪದ್ಧತಿ ಸೇರಿದಂತೆ ಹಲವು ವಿಧಗಳಲ್ಲಿ ತಮ್ಮದೇ ವಿಶಿಷ್ಟ ಶೈಲಿಯಿಂದ ಹೆಸರುವಾಸಿಯಾಗಿದ್ದಾರೆ. ಅವರು ತಮ್ಮದೇ ಸಮುದಾಯದ ಬೇರುಗಳನ್ನು ಅಧ್ಯಯನ ಮಾಡಲು ಪ್ರೇರೇಪಿತರಾದವರು.

ಮಡಿಕೇರಿಯಲ್ಲಿ ದಿವಂಗತ ಬುಟ್ಟಿಯಂಡ ಗಣಪತಿ ಕುಟ್ಟಪ್ಪ ಮತ್ತು ಮಣವಟ್ಟಿರ ಮುತ್ತಮ್ಮ ಮಾಚಿಯಾ ದಂಪತಿ ಪುತ್ರಿಯಾಗಿ ಜನಿಸಿದ ಪ್ರೊ.ಥೆಲ್ಮಾ ಅವರು, ಅತ್ಯಂತ ಪ್ರೀತಿಪೂರ್ಣ, ಕಾಳಜಿಯುಳ್ಳ ಮತ್ತು ಪ್ರಗತಿಪರ ಕುಟುಂಬದಲ್ಲಿ ಬೆಳೆದವರು. ಅವರ ಕುಟುಂಬ ಮಡಿಕೇರಿ ಪಟ್ಟಣದಲ್ಲಿ ದೊಡ್ಡ ಹಿತ್ತಲು ಹೊಂದಿದ್ದ ಮನೆಯಲ್ಲಿ ವಾಸಿಸುತ್ತಿತ್ತು. ಇಂತಹ ವಾತಾವರಣ ಅವರಲ್ಲಿ ಆತ್ಮೀಯತೆ ಭಾವ, ಸಂಸ್ಕಾರ ಪೂರ್ಣ ಬೆಳವಣಿಗೆಗೆ ಕಾರಣವಾಯಿತು.

ಪ್ರೊ.ಥೆಲ್ಮಾ ಅವರು ಮಡಿಕೇರಿಯ ಸೆಂಟ್ ಜೋಸೆಫ್ ಕಾನ್ವೆಂಟ್‌ನಲ್ಲಿ ತಮ್ಮ ಶಾಲಾ ಶಿಕ್ಷಣ ಪೂರ್ಣಗೊಳಿಸಿದರು. 'ಹತ್ತನೇ ತರಗತಿಯಲ್ಲಿ ನನ್ನ ಶಾಲೆಯ ನಾಲ್ಕು ವಿಭಾಗಗಳಲ್ಲಿ ಪ್ರಥಮ ದರ್ಜೆ ಪಡೆದ ಏಕೈಕ ವಿದ್ಯಾರ್ಥಿನಿ ನಾನು. ಮುಂದಿನ ಮಹತ್ವದ ನಿರ್ಧಾರ ಕಾಲೇಜಿನಲ್ಲಿ ಯಾವ ವಿಷಯವನ್ನು ಆಯ್ಕೆ ಮಾಡಬೇಕೆಂಬುದಾಗಿತ್ತು. ಆ ಸಂದರ್ಭದಲ್ಲಿ, ನಾನು ಗಣಿತದಲ್ಲಿ ಸ್ನಾತಕೋತ್ತರ ಪದವಿ ಪಡೆಯಬೇಕು ಅಥವಾ ಐಎಎಸ್ ಅಧಿಕಾರಿಯಾಗಬೇಕೆಂದು ನನ್ನ ತಂದೆಯವರು ಬಯಸಿದ್ದರು. ಆದರೆ ನನಗೆ ವೈದ್ಯೆಯಾಗಬೇಕೆಂಬ ಕನಸಿತ್ತು. ಇಂದಿಗೂ ವೈದ್ಯರು ರೋಗಿಗಳಿಗೆ ಚಿಕಿತ್ಸೆ ನೀಡುವ ದೃಶ್ಯ ನನ್ನನ್ನು ಆಕರ್ಷಿಸುತ್ತದೆ' ಎಂದು ನೆನಪಿಸಿಕೊಳ್ಳುತ್ತಾರೆ ಪ್ರೊ.ಥೆಲ್ಮಾ.

ಶಾಲಾ ಶಿಕ್ಷಣದ ನಂತರ ಅವರು ಬೆಂಗಳೂರಿಗೆ ತೆರಳಿ ಮೌಂಟ್ ಕಾರ್ಮೆಲ್ ಕಾಲೇಜು ಮತ್ತು ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಉನ್ನತ ಅಧ್ಯಯನಕ್ಕಾಗಿ ಸೇರಿದರು. ಸ್ನಾತಕೋತ್ತರ ಪದವಿಯ ನಂತರ ಅವರು ಪಿಹೆಚ್‌ಡಿ ಮಾಡಲು ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಫೆಲೋಶಿಪ್ ಪಡೆಯಲು ಆಯ್ಕೆ ಮಾಡಿಕೊಂಡರು. ಅವರು 1982ರಲ್ಲಿ ಡಾಕ್ಟರೇಟ್ ಪಡೆದರು.

ಅನಂತರ ಪ್ರೊ.ಥೆಲ್ಮಾ ಸ್ವಿಡ್ಜರ್ ಲ್ಯಾಂಡ್‌ನ ಬಾಸೆಲ್‌ನಲ್ಲಿರುವ ಮಕ್ಕಳ ಆಸ್ಪತ್ರೆಯಲ್ಲಿ ಪೋಸ್ಟ್–ಡಾಕ್ಟರಲ್ ಫೆಲೋ ಆಗಿ ಸ್ವಲ್ಪಕಾಲ ಸೇವೆ ಸಲ್ಲಿಸಿದರು. ಅಲ್ಲಿ ಅವರಿಗೆ ಮಾನವ ಮಾದರಿಗಳೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿತು. ಅವರ ಮಾತಿನಲ್ಲಿ ಹೇಳುವುದಾದರೆ, ಬಹುತೇಕ ಅವರ ಕನಸು ನನಸಾಗಲು ಪ್ರಾರಂಭಿಸಿತು. ಆ ಎರಡು ವರ್ಷಗಳಲ್ಲಿ ಅವರು ವ್ಯಾಪಕವಾಗಿ ಪ್ರವಾಸ ಕೈಗೊಂಡು ಸಾಧ್ಯವಾದಷ್ಟು ಕಲಿತುಕೊಂಡರು. ದೇಶಕ್ಕೆ ಮರಳುವ ಅಚಲ ನಿರ್ಧಾರದೊಂದಿಗೆ ಅವರು ದೆಹಲಿ ವಿಶ್ವವಿದ್ಯಾನಿಲಯಕ್ಕೆ ಮರಳಿದರು. ಇಲ್ಲಿ ಅವರು ಸಿಎಸ್‌ಐಆರ್ ಪೂಲ್ ಅಧಿಕಾರಿ ಹಾಗೂ ಸಂಶೋಧನಾ ಸಹಾಯಕರಾಗಿ ಕಾರ್ಯನಿರ್ವಹಿಸಿದರು.

1987ರಲ್ಲಿ ಅವರು ದೆಹಲಿ ವಿಶ್ವವಿದ್ಯಾನಿಲಯದ ಜೆನೆಟಿಕ್ಸ್ ವಿಭಾಗದಲ್ಲಿ ಅಧ್ಯಾಪಕ ಹುದ್ದೆಯನ್ನು ಪಡೆದರು. ಅಲ್ಲಿ ತಮ್ಮ ನಿವೃತ್ತಿಯವರೆಗೂ ಸೇವೆ ಮುಂದುವರೆಸಿದರು. ಪ್ರಸ್ತುತ, ಅದೇ ಸ್ಥಳದಲ್ಲಿ ಪ್ರಾಧ್ಯಾಪಕರಾಗಿ ಮತ್ತು ರಾಷ್ಟ್ರೀಯ ವಿಜ್ಞಾನದ ಚೇರ್ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಬಯೋಮೆಡಿಕಲ್ ಜೆನೆಟಿಕ್ಸ್‌ನಲ್ಲಿ ಪ್ರೊ.ಥೆಲ್ಮಾ ಅವರ ಸಂಶೋಧನಾ ಆಸಕ್ತಿ ಪೈಕಿ ಕೊಡವರ ಆನುವಂಶಿಕ ಇತಿಹಾಸ ಅವರ ನಿರಂತರ ಆಸಕ್ತಿಯಾಗಿತ್ತು. ಈ ಅಧ್ಯಯನ ಇನ್ನೂ ಸಂಪೂರ್ಣಗೊಂಡಿಲ್ಲವೆಂದು ಅವರು ಹೇಳುತ್ತಿದ್ದರೂ ಕೊಡವ ಸಮುದಾಯದ ಮೂಲ ಕುರಿತಂತೆ ಅವರ ಸಂಶೋಧನೆಯು ಕುತೂಹಲಕಾರಿ ಹಾಗೂ ಮಹತ್ವದ ವಿಚಾರಗಳನ್ನು ಒದಗಿಸುತ್ತದೆ.

**ಪ್ರಶಸ್ತಿ–ಪುರಸ್ಕಾರಗಳಿಗೆ ಭಾಜನ...**

**ಥೆಲ್ಮಾ ಅವರು ಹಲವು ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಅವುಗಳಲ್ಲಿ ಕೆಲವನ್ನು ನೋಡುವುದಾದರೆ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಸಿಎನ್‌ಆರ್ ರಾವ್ ಜೀವಮಾನ ಸಾಧನೆ ಪ್ರಶಸ್ತಿ (2021), ದೆಹಲಿ ವಿಶ್ವವಿದ್ಯಾನಿಲಯದಿಂದ ಮೆರಿಟೋರಿಯಸ್ ಸರ್ವೀಸ್ ಅವಾರ್ಡ್ (2021), ನ್ಯಾಷನಲ್ ಸೈನ್ಸ್ ಚೇರ್ (2021–2026), ಜೆಸಿ ಬೋಸ್ ಫೆಲೋಶಿಪ್ (2011–2021), ಇಂಡಿಯನ್ ಸೊಸೈಟಿ ಆಫ್ ಸೆಲ್ ಬಯಾಲಜಿಯಿಂದ ಎಸ್‌ಪಿ ರಾಯಚೌಧರಿ ಎಂಡೋಮೆಂಟ್ ಲೆಕ್ಚರ್ ಅವಾರ್ಡ್, ಇಂಡಿಯನ್ ಸೊಸೈಟಿ ಆಫ್ ಹ್ಯೂಮನ್ ಜೆನೆಟಿಕ್ಸ್‌ನಿಂದ ಸಂಘ್ವಿ ಓರೇಷನ್ ಅವಾರ್ಡ್ (2025), ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿಯಿಂದ ಸನ್ ಡೆರ್ ಲಾಲ್ ಹೋರಾ ಮೆಡಲ್ (2014).**

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | **(ದೂ: 2521923)** |
| ಮಾರ್ಕ್ (ಕ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | **(ದೂ: 2422871)** |
| 45 ಫೇಸ್ ದಿ ಇಯರ್ (ಕ) | 3 ಪ್ರದರ್ಶನಗಳು |
| **ಬಾಲಾಜಿ** | **(ದೂ: 2497199)** |
| ಧುರಂಧರ್ (ಹಿ) | 3 ಪ್ರದರ್ಶನಗಳು |
| **ಮಹದೇಶ್ವರ** | **(ಮೊ:9900820093)** |
| ಡೆವಿಲ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಡೆವಿಲ್ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| 45 (ಕ) | 4 ಪ್ರದರ್ಶನಗಳು |
| **ಸಂಗಂ** | |
| ಮಾರ್ಕ್ (ಕ) | 5 ಪ್ರದರ್ಶನಗಳು |
| **ಲಿಡೋ** | |
| ವೃಷಭ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಕಾಂತಾರ–2 (ಕ) | 4 ಪ್ರದರ್ಶನಗಳು |

# ಯೋಗ, ಸಂಗೀತ ಚೈತನ್ಯ ಪ್ರಶಸ್ತಿ ಪ್ರದಾನ; ಕ್ಯಾಲೆಂಡರ್ ಬಿಡುಗಡೆ



ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ 'ಯೋಗ ಮತ್ತು ಸಂಗೀತ ಚೈತನ್ಯ ಪ್ರಶಸ್ತಿ' ಪ್ರದಾನ ಹಾಗೂ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು

ಮೈಸೂರು, ಡಿ.30(ಎಂಕೆ)– ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ 'ಯೋಗ ಮತ್ತು ಸಂಗೀತ ಚೈತನ್ಯ ಪ್ರಶಸ್ತಿ' ಪ್ರದಾನ ಹಾಗೂ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಧಕರಾದ ಶ್ರೀಮತಿ ಮಧು ಬಾಲ, ಹೆಚ್.ಎಸ್.ಲಕ್ಷ್ಮಿನಾಥ್ ಮತ್ತು ಶ್ರೀಮತಿ ನಂದಿನಿ ಮೂರ್ತಿ ಅವರಿಗೆ 'ಯೋಗ ಚೈತನ್ಯ ಪ್ರಶಸ್ತಿ' ಹಾಗೂ ಕೆ.ವಿ.ಮಹಾಬಲ ಅವರಿಗೆ 'ಸಂಗೀತ ಚೈತನ್ಯ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು. ಬಳಿಕ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಜಿ.ಲಕ್ಷ್ಮೀನಾರಾಯಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಮಾಜ ಸೇವಕ ಆ.ಕೆ.ರಘುರಾಂ ವಾಜಪೇಯಿ, ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ಅಧ್ಯಕ್ಷ ಡಾ.ಬಿ.ಪಿ.ಮೂರ್ತಿ, ಮೈಸೂರು ಯೋಗ ಅಸೋಸಿಯೇಷನ್ ಕಾರ್ಯದರ್ಶಿ ಎನ್.ಅನಂತ್ ಮತ್ತಿತರರಿದ್ದರು.

## ಡ್ರಂಕ್ ಅಂಡ್ ಡ್ರೈವ್ ತಪಾಸಣೆ



ಹೊಸ ವರ್ಷಾಚರಣೆಗೆ ಕ್ಷಣಗಣನೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಮೈಸೂರಿನೆಲ್ಲೆಡೆ ಪೊಲೀಸರು ವಿಶೇಷ ತಪಾಸಣೆ ಕೈಗೊಂಡಿದ್ದು, ಮಂಗಳವಾರ ರಾತ್ರಿ ರಿಂಗ್‌ರಸ್ತೆಯಲ್ಲಿ ಡ್ರಂಕ್ ಅಂಡ್ ಡ್ರೈವ್ ತಪಾಸಣೆ ನಡೆಸಿದರು.

# 1.20 ಕೋಟಿ ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಶಾಸಕ ಹರೀಶ್‌ಗೌಡರಿಂದ ಚಾಲನೆ



ರಸ್ತೆ ಡಾಂಬರೀಕರಣಕ್ಕೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಡಿ.30(ಎಂಕೆ)– ಮೈಸೂರು ನಗರಪಾಲಿಕೆ ವಾರ್ಡ್ ನಂ.23ರ ವ್ಯಾಪ್ತಿಯ ಸೀತಾ ವಿಲಾಸ ರಸ್ತೆಯಿಂದ ರಾಮವಿಲಾಸ ರಸ್ತೆವರೆಗಿನ ಚರಂಡಿ ಮತ್ತು ಫುಟ್‌ಪಾತ್ ಹಾಗೂ ವಾರ್ಡ್ ನಂ.24ರ ವ್ಯಾಪ್ತಿಯ ಅಶೋಕ ಮುಖ್ಯ ರಸ್ತೆಯ 15ನೇ ಕ್ರಾಸ್‌ನಿಂದ ಅಜಾಮ್ ಮಸೀದಿವರೆಗೆ ಮತ್ತು ಅಡ್ಡ ರಸ್ತೆಗಳ ಡಾಂಬರೀಕರಣಕ್ಕೆ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಮಂಗಳವಾರ ಗುದ್ದಲಿಪೂಜೆ ನೆರವೇರಿಸಿದರು.

ಎಸ್‌ಎಫ್‌ಸಿ ವಿಶೇಷ ಅನುದಾನದಲ್ಲಿ ಅಂದಾಜು 1.20 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದ ಶಾಸಕರು, ಮೊಹಲ್ಲಾ ನಿವಾಸಿಗಳ ಕುಂದು–ಕೊರತೆ ಆಲಿಸಿ ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು. ವಾರ್ಡ್ ಅಧ್ಯಕ್ಷ ಆನಂದ್, ಮುಖಂಡರಾದ ಮಹದೇವ್, ಜ್ಞಾನೇಶ್, ಲೋಕೇಶ್, ಮಂಜು, ಜಗದೀಶ್, ಶ್ರೀನಿವಾಸ್, ಪವನ್, ನಿತಿನ್, ಶಂಕರ್, ನಾಗರಾಜ್, ಉತ್ತನಹಳ್ಳಿ ಶಿವಣ್ಣ, ನಂಜುಂಡಿ, ನವೀನ್, ಮಂಜುಳ, ಮಂಗಳ, ಶಾಂತಿ, ಪಾಲಿಕೆ ಅಧಿಕಾರಿಗಳಾದ ವೆಂಕಟೇಶ್, ಧನುಷ್, ಕೃಷ್ಣಮೂರ್ತಿ ಮತ್ತಿತರರಿದ್ದರು.

# ಕಡ್ಡಿ ಹಿಡಿದು ಮಕ್ಕಳಿಗೆ ಪಾಠ ಕಲಿಸುವುದ ಖಂಡಿಸಿದ್ದ ಪಂಜೆ ಮಂಗೇಶರಾಯರು

## ಸಾಹಿತಿ ಪ್ರೊ. ಕೆ.ಕೇಶವಮೂರ್ತಿ ವಿವರಣೆ

ಮೈಸೂರು, ಡಿ.30(ಎಂಕೆ)– ವಸಹಾತುಶಾಹಿ ಜಗತ್ತಿಗೆ ಬರವಣಿಗೆಯ ಮೂಲಕ ವಿಭಿನ್ನ ಪ್ರತಿಕ್ರಿಯೆ ನೀಡಿದ ಪಂಜೆ ಮಂಗೇಶರಾಯರು, ತಮ್ಮ ಕಾವ್ಯಗಳ ಮೂಲಕ ಜನ ಸಂಸ್ಕಾರವನ್ನು ಪ್ರಸ್ತುತಪಡಿಸಿದ್ದಾರೆ ಎಂದು ಸಾಹಿತಿ ಪ್ರೊ.ಕೆ.ಕೇಶವಮೂರ್ತಿ ತಿಳಿಸಿದರು.

ಮೈಸೂರು ವಿವಿ ಮಾನಸ ಗಂಗೋತ್ರಿಯ ಬಿಎಂಶ್ರೀ ಸಭಾಂಗಣದಲ್ಲಿ ವಿಶ್ವಮಾನವ ದಿನಾಚರಣೆ ಅಂಗವಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಕುವೆಂಪು ಕಾವ್ಯಾಧ್ಯಯನ ಪೀಠದ ವತಿಯಿಂದ ಆಯೋಜಿಸಿರುವ 'ನವೋದಯ ಕಾವ್ಯದ ಹಬ್ಬ' ವಿಚಾರ ಸಂಕಿರಣದಲ್ಲಿ ಪಂಜೆ ಮಂಗೇಶರಾಯ ಅವರ ಕಾವ್ಯ ಕುರಿತು ಮಾತನಾಡಿದ ಅವರು, ಪಂಜೆ ಮಂಗೇಶರಾಯರು ಕಥೆ, ಕಾವ್ಯಗಳನ್ನು ತಿಳಿಸುವ ಮೂಲಕ ಮಕ್ಕಳಿಗೆ ಪಾಠ–ಪ್ರವಚನ ಆಗಬೇಕು ಎಂದು ಪ್ರತಿಪಾದಿಸಿದ್ದಾರೆ ಎಂದರು.



'ನವೋದಯ ಕಾವ್ಯದ ಹಬ್ಬ' ವಿಚಾರ ಸಂಕಿರಣದಲ್ಲಿ ಪಂಜೆ ಮಂಗೇಶರಾಯ ಅವರ ಕಾವ್ಯ ಕುರಿತು ಸಾಹಿತಿ ಪ್ರೊ.ಕೆ.ಕೇಶವಮೂರ್ತಿ ವಿಚಾರ ಮಂಡಿಸಿದರು.

ಕಡ್ಡಿ ಹಿಡಿದುಕೊಂಡು ಮಕ್ಕಳಿಗೆ ಪಾಠ ಮಾಡುವುದನ್ನು ಖಂಡಿಸಿದ ಪಂಜೆ ಮಂಗೇಶರಾಯ, ಪಾಠ ಮಾಡುವ ವಿಧಾನ ಬದಲಾಗಬೇಕು. ಕತೆ, ಕಾವ್ಯಗಳನ್ನು ಹಾಡಿನ ಮತ್ತು ಆಕರ್ಷಣೀಯವಾಗಿ ಹೇಳಿಕೊಡುವ ಮೂಲಕ ಮಕ್ಕಳನ್ನು ಸಂಸ್ಕಾರವಂತರನ್ನಾಗಿ, ವಿದ್ಯಾವಂತರನ್ನಾಗಿ ಮಾಡಬೇಕು ಎಂಬುದು ಅವರ ಮೊದಲ ಆದ್ಯತೆಯಾಗಿತ್ತು. ತಮ್ಮ ಬರವಣಿಗೆಯುದ್ದಕ್ಕೂ ಜನರ ವ್ಯಕ್ತಿತ್ವ ವಿಕಸನದಲ್ಲಿ ಬದಲಾವಣೆ ಬಯಸಿದವರು ಎಂದು ತಿಳಿಸಿದರು.

**ವಿಶ್ವಪಥಕ್ಕೆ ಬನ್ನಿ...!:** ವಿಚಾರ ಸಂಕಿರಣಕ್ಕೂ ಮುನ್ನ ಗೀತ ಗಾಯನ ಕಾರ್ಯಕ್ರಮ ಪ್ರಸ್ತುತಪಡಿಸಿದ ರಂಗಕರ್ಮಿ ಡಾ.ಹೆಚ್.ಜನಾರ್ದನ್(ಜನ್ನಿ) ಮಾತನಾಡಿ, ಇಡೀ ವಿಶ್ವಕ್ಕೆ ಮಾನವೀಯ ಮೌಲ್ಯವನ್ನು ಕೊಟ್ಟವರು, ವಿಶ್ವಪಥಕ್ಕೆ ಬನ್ನಿ ಎಂದರೆ ಪಥ ಸಂಚಲನಕ್ಕೆ ಹೋಗುತ್ತಾರೆ ಎಂತಹ ವಿಪರ್ಯಾಸ ಪರಿಸ್ಥಿತಿ ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಬಳಿಕ ಗೋವಿಂದ ಪೈ ಅವರ ಕಾವ್ಯ ಕುರಿತು ಪ್ರೊ.ಶಿವರಾಂ ಶೆಟ್ಟಿ, ದ.ರಾ.ಬೇಂದ್ರೆ ಅವರ ಕಾವ್ಯ ಕುರಿತು ಪ್ರೊ.ಕೆ.ಸಿ.ಶಿವಾರೆಡ್ಡಿ, ದಿನಕರ ದೇಸಾಯಿ ಅವರ ಕಾವ್ಯ ಕುರಿತು ಪ್ರೊ.ಹೆಚ್.ಬಿ.ಬೆಟ್ಟಸ್ವಾಮಿ ವಿಚಾರ ಮಂಡಿಸಿದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಲೋಲಾಕ್ಷಿ ಮತ್ತಿತರರಿದ್ದರು.

# ಮೈಸೂರಿನಲ್ಲಿ ಖಿದ್ಮಾ ಕನ್ನಡ ಸಂಗಮದಿಂದ ವಿದ್ಯಾರ್ಥಿಗಳಿಗಾಗಿ ಸ್ಪರ್ಧಾತ್ಮಕ ಚಟುವಟಿಕೆಗಳು

ಮೈಸೂರು, ಡಿ.30–ಖಿದ್ಮಾ ಫೌಂಡೇಶನ್ ಕರ್ನಾಟಕ, ಅನ್ನದಾತ ಪ್ರಕಾಶನ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ಸಹಯೋಗದಲ್ಲಿ ಖಿದ್ಮಾ ಕನ್ನಡ ಸಂಗಮ ಕಾರ್ಯಕ್ರಮವನ್ನು ಜ.25ರ ಭಾನುವಾರ ಆಯೋಜಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಪ್ರೌಢಶಾಲಾ ಮತ್ತು ಪದವಿ ಪೂರ್ವ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಜೂನಿಯರ್ ಹಾಗೂ ಸೀನಿಯರ್ ವಿಭಾಗಗಳಾಗಿ ಸ್ಪರ್ಧೆ ನಡೆಯಲಿದೆ. ಜೂನಿಯರ್ ವಿಭಾಗಕ್ಕೆ ಕಥೆ ಹೇಳುವುದು, ಚಿತ್ರರಚನೆ ಮತ್ತು ದೇಶಭಕ್ತಿ ಗೀತೆ ಹಾಗೂ ಸೀನಿಯರ್ ವಿಭಾಗಕ್ಕೆ ಆಶು ಭಾಷಣ, ಕನ್ನಡ ಪ್ರಬಂಧ ಹಾಗೂ ಕವನ ರಚನೆ ಮತ್ತು ವಾಚನ ಸ್ಪರ್ಧೆಯನ್ನು ನಡೆಸಲಾಗುತ್ತದೆ ಎಂದು ಖಿದ್ಮಾ ಫೌಂಡೇಶನ್ ಕರ್ನಾಟಕ ಅಧ್ಯಕ್ಷರಾದ ಆಮಿರ್ ಅಶ್‌ಅರೀ ಬನ್ನೂರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 7349197313 ನಂಬರನ್ನು ವಾಟ್ಸಪ್ ಮೂಲಕ (ಕರೆಗೆ ಅನುಮತಿ ಇರುವುದಿಲ್ಲ) ಸಂಪರ್ಕಿಸಬಹುದು.

# ಇಂದು ಮೈಸೂರಿಗೆ ಆದಿಯೋಗಿ ರಥಯಾತ್ರೆ

ಮೈಸೂರು, ಡಿ.30– ಉಡುಪಿಯಿಂದ ಕೊಯಮತ್ತೂರಿಗೆ ಸಾಗುತ್ತಿರುವ ಆದಿಯೋಗಿ ರಥಯಾತ್ರೆ ಬುಧವಾರ(ಡಿ.31) ಮೈಸೂರಿಗೆ ಆಗಮಿಸಲಿದೆ.



ಸದ್ಯ ಕೊಡಗಿನಿಂದ ಬೆಟ್ಟದಪುರ, ಕೆ.ಆರ್.ನಗರ ಮಾರ್ಗವಾಗಿ ಮೈಸೂರು ತಾಲೂಕು ಇಲವಾಲ ತಲುಪಿರುವ ಆದಿಯೋಗಿ ರಥಯಾತ್ರೆಯು ಇಲ್ಲಿನ ವಿವೇಕಾನಂದ ಫಾರ್ಮ್ ಹಾಲ್ ಬಳಿಯಿಂದ ಬುಧವಾರ ಬೆಳಗ್ಗೆ ಹೊರಟು, ನಗರದ ಹಿನಕಲ್, ಐಶ್ವರ್ಯ ಪೆಟ್ರೋಲ್ ಬಂಕ್, ಎಸ್‌ಜೆಸಿಇ ರಸ್ತೆ, ಸರಸ್ವತಿಪುರಂ ಕೃಷ್ಣಧಾಮ, ವಿದ್ಯಾರಣ್ಯಪುರಂ ಮೂಲಕ ಚಾಮುಂಡಿಬೆಟ್ಟ ತಪ್ಪಲಿನ ಶ್ರೀ ಸುತ್ತೂರು ಮಠಕ್ಕೆ ಆಗಮಿಸಲಿದೆ.

**ಜ.1, 2ರಂದು ಮೆರವಣಿಗೆ:** ಆದಿಯೋಗಿ ರಥಯಾತ್ರೆಯು ಜ.1 ಮತ್ತು 2ರಂದು ಮೈಸೂರಿನ ಪ್ರಮುಖ ಸ್ಥಳಗಳ ಮೂಲಕ ಮುಂದುವರೆಯಲಿದೆ. ಸಾವಿರಕ್ಕೂ ಹೆಚ್ಚು ಕಿ.ಮೀ. ಸಾಗಿ ಫೆ.13ರಂದು ಮಹಾಶಿವರಾತ್ರಿ ಭವ್ಯ ಆಚರಣೆಗಳಿಗಿಂತ ಮುಂಚಿತವಾಗಿ ಕೊಯಮತ್ತೂರಿನ ಇಶಾ ಯೋಗ ಕೇಂದ್ರದಲ್ಲಿ ಸಮಾಪನಗೊಳ್ಳಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಮೈಸೂರು ಪತ್ರಕರ್ತರ ಸಂಘದ ಕ್ಯಾಲೆಂಡರ್, ಡೈರಿ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಮತ್ತು ಡೈರಿಯನ್ನು ಮಂಗಳವಾರ ಬಿಡುಗಡೆಗೊಳಿಸಲಾಯಿತು. (ಎಡದಿಂದ) ಸಂಘದ ಅಧ್ಯಕ್ಷ ಕೆ.ದೀಪಕ್, ಸಿದ್ದಾರ್ಥ ಗ್ರೂಪ್ ಮುಖ್ಯಸ್ಥ ಪಿ.ವಿ.ಗಿರಿ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಸಿಇಓ ಎಸ್.ಯುಕೇಶ್‌ಕುಮಾರ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕರಾದ ಹೆಚ್.ಎಸ್.ನಿರ್ಮಲಾ, ಸಂಘದ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಉಪಸ್ಥಿತರಿದ್ದರು.

ಮೈಸೂರು, ಡಿ.30(ಎಂಕೆ)– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಹೊರ ತಂದಿರುವ ನೂತನ ವರ್ಷದ ಕ್ಯಾಲೆಂಡರ್ ಮತ್ತು ಡೈರಿಯನ್ನು ಮಂಗಳವಾರ ಬಿಡುಗಡೆಗೊಳಿಸಲಾಯಿತು.

ಮೈಸೂರಿನ ಅಗ್ರಹಾರದಲ್ಲಿರುವ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಹಾಗೂ ಸಿದ್ದಾರ್ಥ ಗ್ರೂಪ್ ಮುಖ್ಯಸ್ಥ ಪಿ.ವಿ.ಗಿರಿ ಜಂಟಿಯಾಗಿ ಕ್ಯಾಲೆಂಡರ್ ಮತ್ತು ಡೈರಿಯನ್ನು ಬಿಡುಗಡೆಗೊಳಿಸಿದರು.

ಬಳಿಕ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಮಾತನಾಡಿ, ಮೈಸೂರು ಪತ್ರಕರ್ತರು ಆಡಳಿತದಲ್ಲಿ ಲೋಪ, ಕೊರತೆಗಳು ಕಂಡು ಬಂದಾಗ ಎಚ್ಚರಿಸುವ ಕೆಲಸವನ್ನು ಉತ್ತಮವಾಗಿ ಮಾಡುತ್ತಾರೆ. ಇದರಿಂದಾಗಿ ಜನೋಪಯೋಗಿ ಅಭಿವೃದ್ಧಿ ಕೆಲಸಗಳನ್ನು ಸಮರ್ಪಕವಾಗಿ ಕೈಗೊಳ್ಳಲು ನೆರವಾಗುತ್ತಿದೆ. ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಇಲ್ಲಿನ ಪತ್ರಿಕೋದ್ಯಮ ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್ ಮಾತನಾಡಿ, ಹಲವಾರು ಸಂದರ್ಭಗಳಲ್ಲಿ ಸ್ವ–ಹಿತಾಸಕ್ತ ಶಕ್ತಿಗಳು ಸಮಸ್ಯೆಯುಂಟು ಮಾಡುವ ಕೆಲಸ ಮಾಡುತ್ತಿರುತ್ತವೆ. ಇದಕ್ಕೆ ಮೈಸೂರು ಪತ್ರಕರ್ತರು ಪ್ರೋತ್ಸಾಹ ನೀಡದಿರುವುದು ಸಂತಸದ ಸಂಗತಿ. ಮೈಸೂರು ಜಿಲ್ಲೆ ದೊಡ್ಡದಾಗಿದ್ದು, ಸ್ಥಳೀಯ ಅಧಿಕಾರಿಗಳು ವಿಫಲರಾಗುವ ಸಂದರ್ಭದಲ್ಲಿ ಎಚ್ಚರಿಸುವ ಕೆಲಸವನ್ನು ಪತ್ರಕರ್ತರು ಮಾಡುತ್ತಿರುವುದು ಸ್ವಾಗತಾರ್ಹವಾಗಿದೆ ಎಂದರು. ವಾರ್ತಾ ಇಲಾಖೆ ಸಹಾಯಕ ನಿರ್ದೇಶಕರಾದ ಹೆಚ್.ಎಸ್.ನಿರ್ಮಲಾ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಮತ್ತಿತರರಿದ್ದರು.

# ಬಸವಮಾರ್ಗ ಫೌಂಡೇಷನ್‌ನಲ್ಲಿ 'ವಚನಗಳಲ್ಲಿ ವ್ಯಸನಮುಕ್ತ ಜೀವನ' ಉಪನ್ಯಾಸ ಸರಣಿ ಮಾಲಿಕೆ ಸಮಾರೋಪ

## ದುರಭ್ಯಾಸ, ದುಶ್ಚಟಗಳಿಂದ ಮನುಷ್ಯನ ಜೀವನವೇ ನಾಶ: ಡಾ.ತಿಮ್ಮಯ್ಯ

ಮೈಸೂರು, ಡಿ.30– ಶರಣ ಸಾಹಿತ್ಯ ತಾಲೂಕು ಪರಿಷತ್ತು ಮತ್ತು ಬಸವಮಾರ್ಗ ಫೌಂಡೇಷನ್ ವತಿಯಿಂದ ನಗರದ ಹೆಬ್ಬಾಳಿನಲ್ಲಿರುವ ವ್ಯಸನಮುಕ್ತ ಹಾಗೂ ಪುನರ್ವಸತಿ ಕೇಂದ್ರದಲ್ಲಿ ಮಂಗಳವಾರ 'ವಚನಗಳಲ್ಲಿ ವ್ಯಸನಮುಕ್ತ ಜೀವನ' ಕುರಿತ ವಿಶೇಷ ಉಪನ್ಯಾಸ ಸರಣಿ ಮಾಲಿಕೆ ಸಮಾರೋಪಗೊಂಡಿತು.

ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ದುರಭ್ಯಾಸ, ದುಶ್ಚಟದಿಂದ ಮನುಷ್ಯನ ಜೀವನವೇ ನಾಶವಾಗುತ್ತದೆ. ಮನಸ್ಸನ್ನು ಹತೋಟಿಯಲ್ಲಿ ಇಟ್ಟುಕೊಳ್ಳದ ಪರಿಣಾಮ ಇಂತಹ ಅನಾಚಾರಗಳು ಸಮಾಜದಲ್ಲಿ ನಡೆಯುತ್ತಿವೆ. ಇದು ವ್ಯಸನಿಗಳ ಬದುಕು ಮಾತ್ರವಲ್ಲದೆ ಇಡಿ ಸಾಮಾಜಿಕ ವ್ಯವಸ್ಥೆ ಮೇಲೆಯೇ ದುಷ್ಪರಿಣಾಮ ಬೀರುತ್ತಿದೆ ಈ ಬಗ್ಗೆ ಎಲ್ಲರೂ ಎಚ್ಚೆತ್ತುಕೊಂಡು ಆರೋಗ್ಯಯುತ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು. ವ್ಯಸನ ಮಾರ್ಗ ತ್ಯಜಿಸಿ ಉತ್ತಮ ದಾರಿಯಲ್ಲಿ ನಡೆಯಬೇಕು. ಕೆಟ್ಟದ್ದನ್ನು ನೋಡದೆ, ಕೇಳದೆ, ಮಾತನಾಡದೆ ಹಾಗೂ ಅನುಸರಿಸದೆ ಉತ್ತಮರಾಗಿ ಬದುಕಬೇಕು. ಸಜ್ಜನರ ಸಹವಾಸ, ಸಾಧು–ಸಂತರು, ಜ್ಞಾನಿಗಳ ಮಾರ್ಗದರ್ಶನ ಪಡೆಯಬೇಕು ಎಂದು ಆಶಿಸಿದರು.

ವಚನಗಳಲ್ಲಿ ವ್ಯಸನಮುಕ್ತ ಜೀವನ ಕುರಿತು ಗಾವಡಗೆರೆಯ ಗುರುಲಿಂಗ ಜಂಗಮ ದೇವರ ಮಠದ ಶ್ರೀ ನಟರಾಜ ಸ್ವಾಮೀಜಿ, ಉಪನ್ಯಾಸ ನೀಡಿ, ಭಾರತದ ಕಣಕಣದಲ್ಲೂ ಸತ್ಯವಿದೆ, ಸತ್ವವಿದೆ. ಈ ನಾಡು ಶರಣರ ಬೀಡು. ಈ ಪುಣ್ಯಭೂಮಿಯಲ್ಲಿ



ಶರಣ ಸಾಹಿತ್ಯ ತಾಲೂಕು ಪರಿಷತ್ತು ಮತ್ತು ಬಸವಮಾರ್ಗ ಫೌಂಡೇಷನ್ ಸಹಯೋಗದಲ್ಲಿ ಬಸವಮಾರ್ಗ ವ್ಯಸನಮುಕ್ತ ಮತ್ತು ಪುನರ್ವಸತಿ ಕೇಂದ್ರದಲ್ಲಿ ಆಯೋಜಿಸಿದ್ದ 'ವಚನಗಳಲ್ಲಿ ವ್ಯಸನಮುಕ್ತ ಜೀವನ' ಕುರಿತ ವಿಶೇಷ ಉಪನ್ಯಾಸ ಸರಣಿ ಮಾಲಿಕೆ ಸಮಾರೋಪ ಸಮಾರಂಭದಲ್ಲಿ ಶ್ರೀಗಳು ಹಾಗೂ ಗಣ್ಯರು ಸಸಿಗೆ ನೀರೆರೆದರು.

ದಾರ್ಶನಿಕರು ನಡೆದಾಡಿ, ತಮ್ಮ ವಿಚಾರಧಾರೆಯನ್ನು ಉಣಬಡಿಸಿದ್ದಾರೆ. ಆದರೆ ವಾಸ್ತವದಲ್ಲಿ ನಾವು ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋಗಿದ್ದೇವೆ. ಅವರು ಡ್ರಗ್ಸ್ ಅನ್ನು ಔಷಧವನ್ನಾಗಿ ತೆಗೆದುಕೊಂಡರೆ, ನಾವು ಅದನ್ನೇ ಆಹಾರವನ್ನಾಗಿ ಸ್ವೀಕರಿಸಿರುವುದು ಅತ್ಯಂತ ದುರಾದೃಷ್ಟಕರ. ವ್ಯಸನಕ್ಕೆ ಪ್ರಚೋದಿಸುವವರ ಮಾತಿಗೆ ಕಿವಿಗೊಡದೆ, ಪರಿವರ್ತನೆಯಾಗಬೇಕೆಂದು ತಿಳಿಹೇಳಿದರು.


ಬರಡನಪುರ ಮಹಾಂತೇಶ್ವರ ಮಠದ ಶ್ರೀ ಪರಶಿವಮೂರ್ತಿ ಸ್ವಾಮೀಜಿ ಮಾತನಾಡಿ, ಮನುಷ್ಯನಿಂದ ಅಸಾಧ್ಯವಾದದ್ದು ಯಾವುದು ಇಲ್ಲ. ಆದರೆ ನಮಗೆ ನಾವೇ ಕಡಿವಾಣ ಹಾಕಿಕೊಂಡಿದ್ದೇವೆ. ಇದರಿಂದ ಹೊರಬಂದು ಸಾಧನೆ ಮಾಡುವ ಮೂಲಕ ಸಮಾಜಕ್ಕೆ ಕೈಲಾದ ಕೊಡುಗೆ ನೀಡಬೇಕು. ಇಲ್ಲದಿದ್ದರೆ ಈ ಬದುಕು ವ್ಯರ್ಥವಾಗುತ್ತದೆ. ಕ್ರಾಂತಿ ಪುರುಷ, ಮಹಾ ಮಾನವತವಾದಿ ಬಸವಣ್ಣ, ಈ ನಾಡಿನಲ್ಲಿ ಹುಟ್ಟದಿದ್ದರೆ, ತಾರತಮ್ಯ ಇನ್ನೂ ಜೀವಂತವಾಗಿರುತ್ತಿತ್ತು. ಅವರ ಸಪ್ತ ಸೂತ್ರಗಳನ್ನು ಪಾಲಿಸಿದರೆ ಸಾಕು ಬದಲಾವಣೆ ಸುಲಭ ಎಂದರು.

ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಅಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ನಿಕಟಪೂರ್ವ ಜಿಲ್ಲಾ ಅಧ್ಯಕ್ಷ ಎಂ.ಚಂದ್ರಶೇಖರ್ ಹಾಗೂ ತಾಲೂಕು ಅಧ್ಯಕ್ಷ ಶರಣ ದೇವರಾಜು ಪಿ.ಚಿಕ್ಕಹಳ್ಳಿ(ದೇಚಿ) ಮಾತನಾಡಿ, ವ್ಯಸನಮುಕ್ತ ಸಮಾಜ ನಿರ್ಮಾಣದ ಆಶಯದೊಂದಿಗೆ ಆಯೋಜಿಸಿದ್ದ ವಿಶೇಷ ಉಪನ್ಯಾಸ ಸರಣಿ ಯಶಸ್ಸಿಗೆ ಹರ್ಷ ವ್ಯಕ್ತಪಡಿಸಿದರು.

> **ವ್ಯಸನಕ್ಕೆ ತುತ್ತಾದ ವ್ಯಕ್ತಿ ಎಲ್ಲ ಕಡೆಯಿಂದಲೂ ಮೋಸಕ್ಕೆ ಒಳಗಾಗುತ್ತಾನೆ. ಸಮಾಜದಿಂದಲೂ ತಿರಸ್ಕೃತನಾಗುತ್ತಾನೆ. ಇಂತಹವರಿಗೆ ಎಲ್ಲೂ ಸೂರು ಸಿಗುವುದಿಲ್ಲ. ಆದರೆ ಇಂತಹವರಿಗೆ ಸೂರು ಕಲ್ಪಿಸಿಕೊಟ್ಟು, ಹೊಸಜೀವನ ರೂಪಿಸಿಕೊಡುವ ಉದ್ದೇಶದೊಂದಿಗೆ ಬಸವಮಾರ್ಗ ಫೌಂಡೇಷನ್ ಸ್ಥಾಪನೆಯಾಗಿದ್ದು, ಈ ಸಂಸ್ಥೆಗೆ ಭಗವಂತನೇ ಫೌಂಡರ್ ಆಗಿದ್ದಾನೆ. ಇಂತಹ ಸಮಾಜಮುಖಿ ಸೇವೆಗೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಪ್ರಮುಖ ಕಾರಣಕರ್ತರು. ಪ್ರಾರಂಭದಲ್ಲಿ ಅವರು ಹಾಕಿಕೊಟ್ಟ ಮಾರ್ಗ ಹಾಗೂ ಆದಿ ಚುಂಚನಗಿರಿ ಸಂಸ್ಥಾನದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ ಆಶೀರ್ವಾದಿಂದ ಸಂಸ್ಥೆ ಸಮಾಜ ಸೇವೆಗೆ ಅರ್ಪಣೆಯಾಗಿದೆ. ಹೊಸ ಬದುಕಿಗಾಗಿ ವ್ಯಸನಿಗಳು ಯಾವುದೇ ಸಮಯದಲ್ಲಿ ಸಂಸ್ಥೆಯ ಕದ ತಟ್ಟಿದರೂ ಅವರ ಸೇವೆಗೆ ನಾವು ಸದಾ ಸಿದ್ಧರಿದ್ದೇವೆ.**
>
> –ಎಸ್.ಬಸವರಾಜು, ಸಂಸ್ಥಾಪಕ ಅಧ್ಯಕ್ಷ, ಬಸವಮಾರ್ಗ ಫೌಂಡೇಷನ್

# 25ನೇ ವರ್ಷದ ಪುಣ್ಯಸ್ಮರಣೆ







## ಶ್ರೀ. ಪಿ.ಶಿವಪ್ಪ ರವರು

(ಎಸ್.ಆರ್ ವೈನ್ಸ್ ಮಾಲೀಕರು)ಹಾಗೂ ಸಂಸ್ಥಾಪಕ ಅಧ್ಯಕ್ಷರು.
ಆರ್ಯ ಈಡಿಗರ ಸಂಘ.ಕೋಣನೂರು. ಅರಕಲಗೂಡು ತಾಲ್ಲೂಕು.ಹಾಸನ ಜಿಲ್ಲೆ.

"ನಿಮ್ಮ ದಯೆಯೆ ನಮಗೆ ಶ್ರೀರಕ್ಷೆ"

ನೀವು ನಮ್ಮನ್ನಗಲಿ ಇಂದಿಗೆ 25ವರ್ಷಗಳು ಕಳೆದರು ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು
ಪತ್ನಿಯವರಾದ ಶ್ರೀಮತಿ ರತ್ನಮ್ಮ , ಪುತ್ರರಾದ ಎಸ್.ಶ್ರೀಕಾಂತ್, ಸೊಸೆ ಜೆ.ಸರಸ್ವತಿ.
(ಮಾಲೀಕರು-ಎಸ್.ಆರ್ ವೈನ್ಸ್ ಜಯಪುರ ಮತ್ತು ಎಸ್.ಡಿ ವೈನ್ಸ್ ತಳೂರು ಸರ್ಕಲ್)
ಮಗಳು ಅಳಿಯಂದಿರಾದ ವನಿತಾ ದಿನೇಶ್,ಮಾಲತಿ ಸುನಿಲ್,
ಮೊಮ್ಮಕ್ಕಳಾದ ಶಿವಿನಯ್ ಎಸ್.ಆರ್ಯ,ನೂತನ ಎಸ್.ಆರ್ಯ,ಡಿ.ಅನ್ವಿತಾ, ಡಿ.ಧೀಮಂತ್,
ಕುಂಜಲ್ ಹಾಗೂ ಎಸ್.ಆರ್ ವೈನ್ಸ್ ಮತ್ತು ಎಸ್.ಡಿ ವೈನ್ಸ್ ಸಹಪಾಠಿ ಮಿತ್ರರು.ಜಯಪುರ. ಮೈಸೂರು.















## ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ವಿ.ಸಿ. ವಿಶ್ವನಾಥ್ ರವರು
(ನಿವೃತ್ತ ಸಹಕಾರ ಸಂಸ್ಥೆಗಳ ಸಹಾಯಕ ನಿಬಂಧಕರು)
ಇಂತಿ ದುಃಖತಪ್ತರು : ಲೇಟ್ ಶ್ರೀ ವಿ.ಸಿ. ವಿಶ್ವನಾಥ್ ಅಂಕಲ್ ಗ್ರೂಪ್ ಸದಸ್ಯರು, ಸ್ನೇಹಿತರು, ಜೆ.ಪಿ.ನಗರ, ಮೈಸೂರು

### ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ: ಮೈಅಪ್ರಾ/ವಿ.ತ–1/ಪಿ.ಆರ್.278/2025–26 ದಿನಾಂಕ: 26.12.2025

**ಪತ್ರಿಕಾ ಪ್ರಕಟಣೆ**


ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯಿಂದ ಶ್ರೀ ದೇವರಸೇಗೌಡ s/o, ಚನ್ನೇಗೌಡ, ಜಯನಗರ, ಮೈಸೂರು, ರವರಿಗೆ ಮೈಸೂರು ನಗರದ ಜಯನಗರ ಬಡಾಣೆಯ ನಿವೇಶನ ಸಂಖ್ಯೆ–14 ಅಳತೆ (63 1/2 + 68)/2 X80 ಅಡಿಗಳ ನಿವೇಶನವು ದಿನಾಂಕ: 06.03.1958 ರಂದು ಮಂಜೂರಾಗಿರುತ್ತದೆ.

ಮೂಲ ಮಂಜೂರಾತಿದಾರರಾದ ಶ್ರೀ ದೇವರಸೇಗೌಡ ರವರಿಗೆ ದಿನಾಂಕ 06.03.1958 ರಂದು ಮಂಜೂರಾಗಿದ್ದು ಮಂಜೂರಾತಿದಾರರು ಜೀವಿತಾವಧಿಯಲ್ಲಿ 111ನೇ ಪುಸ್ತಕ 114ನೇ ಸಂಪುಟ 154–157ನೇ ಪುಟದಲ್ಲಿ 300ನೇ ನಂಬರ್ ಆಗಿ ದಿನಾಂಕ 26.03.1991 ರಂದು ನೊಂದಾಯಿತ ವಿಲ್‌ನಂತೆ ಜಯನಗರ ಬಡಾಣೆಯ ನಿವೇಶನ ಸಂಖ್ಯೆ–14 ನ್ನು ತನ್ನ ಹೆಂಡತಿಯಾದ ಪುಟ್ಟಲಿಂಗಮ್ಮ ರವರಿಗೆ ನಾನು ಕಾಲವಾದ ನಂತರ ಸ್ವತ್ತಿನ ಹಕ್ಕನ್ನು ಅನುಭವಿಸಿಕೊಂಡು ಬರುವುದು, ಆದ ನಾವುಗಳಿಬ್ಬರು ಕಾಲವಾದ ನಂತರ 6 ಜನ ಮಕ್ಕಳಾದ 4 ಜನ ಹೆಣ್ಣು ಮಕ್ಕಳು 1) ಜಯಲಕ್ಷ್ಮಿ 2) ಗಾಯತ್ರಿ(ಪೌತಿ) ಇವರ ಮಕ್ಕಳಾದ ಎಂ.ರಾಜಶೇಖರ್ ಮತ್ತು ಎಂ.ಹರೀಶ್ 3)ಲೀಲಾವತಿ 4)ಮಂಜುಳ ಹಾಗೂ 2 ಜನ ಗಂಡು ಮಕ್ಕಳು 5) ಗಂಗಾಧರ 6)ಶಂಕರ್ (ಪೌತಿ) ಇವರ ಮಕ್ಕಳಾದ ರಾಜು.ಎಸ್ & ಎಸ್.ಗುರು ರವರುಗಳಿಗೆ ಸ್ವತ್ತು ಸೇರತಕ್ಕದೆಂದು ನೊಂದಾಯಿಸಿರುತ್ತಾರೆ. ನಂತರ ಮಂಜೂರಾತಿದಾರರು ದಿನಾಂಕ 07.08.1991 ರಂದು ಮರಣ ಹೊಂದಿದ್ದು, ಮೃತರ ಪತ್ನಿಯಾದ ಶ್ರೀಮತಿ ಪುಟ್ಟಲಿಂಗಮ್ಮ ರವರು ಸಹ ದಿನಾಂಕ 07.02.1998 ರಂದು ಮೃತರಾಗಿರುತ್ತಾರೆ. ಮೃತರ ಕುಟುಂಬ ವಾರಸುದಾರರು ಸದರಿ ಸ್ವತ್ತಿಗೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ಇ–ಖಾತೆಯನ್ನು ದಿನಾಂಕ 15.11.2025 ರಂದು ನಿವೇಶನವನ್ನು ಜಂಟಿಯಾಗಿ ವರ್ಗಾಯಿಸಿ ವರ್ಗಾವಣೆ/ಹಕ್ಕುಪತ್ರವನ್ನು ಕೋರಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಜಯನಗರ ಬಡಾಣೆಯ ನಿವೇಶನ ಸಂಖ್ಯೆ–14 ಅಳತೆ (63 1/2 + 68) / 2 X 80 ಅಡಿಗಳ ನಿವೇಶನವನ್ನು #14, 2ನೇ ಕ್ರಾಸ್, 5ನೇ ಮೇನ್, ಜಯನಗರ, ಚಾಮರಾಜ ಮೊಹಲ್ಲಾ, ಮೈಸೂರು ರಲ್ಲಿ ವಾಸಿಸುವ ಶ್ರೀಮತಿ ಜಯಲಕ್ಷ್ಮಿ, ಮಂಜುಳ, ಲೀಲಾವತಿ, ಗಂಗಾಧರ, ಎಸ್.ಗುರು, ರಾಜು.ಎಸ್, ಎಂ.ರಾಜಶೇಖರ್, ಎಂ.ಹರೀಶ್ ರವರ ಹೆಸರಿಗೆ ಮೇಲ್ಕಂಡ ನಿವೇಶನವನ್ನು ಪೌತಿ ಆಧಾರದ ಮೇಲೆ ವರ್ಗಾಯಿಸಿ/ಕ್ರಯಪತ್ರ ನೀಡಬೇಕಾಗಿದೆ. ನಿವೇಶನ ಪೌತಿ ಆಧಾರದ ಮೇಲೆ ವರ್ಗಾವಣೆ ಮಾಡಿ ಕ್ರಯಪತ್ರ ನೀಡಲು ಯಾರಿಂದಾದರೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ/ತಕರಾರು ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಅರ್ಜಿದಾರರ ಮನವಿ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಹಿ/– ವಿಶೇಷ ತಹಶೀಲ್ದಾರ್
ವಲಯ ಕಛೇರಿ–1, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

## ಪುಣ್ಯ ಸ್ಮರಣೆ





ನಂಜಿಯಪಂಡ ಜಿ.ಕರುಂಬಯ್ಯ ಪೊನ್ನವ್ವ ಕರುಂಬಯ್ಯ

ನಮ್ಮ ಕುಟುಂಬದ ದಾರಿದೀಪ, ಮಾರ್ಗದರ್ಶಕರಾಗಿದ್ದ
ತಾಯಿ ಪೊನ್ನವ್ವ ಕರುಂಬಯ್ಯ ಅವರ 3ನೇ ವರ್ಷದ ಹಾಗೂ
ತಂದೆ ನಂಜಿಯಪಂಡ ಜಿ.ಕರುಂಬಯ್ಯ ಅವರ 41 ನೇ ಪುಣ್ಯ ಸ್ಮರಣೆ.
ನೀವು ನಮ್ಮನ್ನಗಲಿ ಮೂರು ಹಾಗೂ 41 ವರ್ಷವಾದರೂ ನೀವು ನಮಗೆ ತೋರಿದ ಪ್ರೀತಿ, ನಮ್ಮ ಭವಿಷ್ಯ ರೂಪಿಸಲು ಪಟ್ಟ ಕಷ್ಟವನ್ನು ನಾವು ಎಂದೂ ಮರೆಯುವುದಿಲ್ಲ.
ಡಿ. 31 ರಂದು ಪುಣ್ಯಸ್ಮರಣೆ ಹಾಗೂ ನಿಮ್ಮ ಆಶೀರ್ವಾದ ಬೇಡುವ. ಇಂತಿ ನಿಮ್ಮ

ಪುತ್ರ: ಅಪ್ಪಣ್ಣ, ಸೊಸೆ: ಜಯಪ್ರದ, ಮಕ್ಕಳು ಹಾಗೂ ಮೊಮ್ಮಕ್ಕಳು,
ಅರಪಟ್ಟು ಗ್ರಾಮ, ಕಡಂಗ, ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ



### ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಜೆ.ಎಲ್.ಬಿ.ರಸ್ತೆ, ಮೈಸೂರು

ಸಂಖ್ಯೆ: ಮೈಅಪ್ರಾ/ವಿ.ತ–1/ಪಿ.ಆರ್.401/2025–26

ದಿನಾಂಕ: 18.12.2025

**ಪತ್ರಿಕಾ ಪ್ರಕಟಣೆ**

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶ್ರೀ. ಟಿ.ಎಸ್.ಮಂಜುನಾಥ್, ಸಿ.ಹೆಚ್–27, 5ನೇ ಮೇನ್, ಸರಸ್ವತಿಪುರಂ, ಮೈಸೂರು–9 ರವರಿಗೆ ನಾಚನಹಳ್ಳಿ 2ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ–586 ಅಳತೆ 35 X 50 ಅಡಿಗಳ ನಿವೇಶನವು ದಿನಾಂಕ: 31.03.1986 ರಂದು ಮಂಜೂರಾಗಿರುತ್ತದೆ.

ಮೂಲ ಮಂಜೂರಾತಿದಾರರಾದ ಶ್ರೀ ಟಿ.ಎಸ್.ಮಂಜುನಾಥ್ ರವರಿಗೆ ಎಲ್.ಸಿ.ಎಸ್ ನೊಂದಾಯಿಸಿ ದಿನಾಂಕ 24.03.1987 ರಂದು ಸ್ವಾಧೀನ ಪಡೆದಿರುತ್ತಾರೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ 23.05.1989 ರಂದು ವಾರ್ಷಿಕ ಕಂದಾಯ ನಿಗಧಿಪಡಿಸಿಕೊಂಡು ಉತ್ತರ ಪತ್ರ ಪಡೆದಿರುತ್ತಾರೆ ನಂತರ ಮಂಜೂರಾತಿದಾರರು ದಿನಾಂಕ 06.07.2005 ರಂದು ಮರಣ ಹೊಂದಿದ್ದು ಮೃತರ ಹೆಂಡತಿಯಾದ ಶ್ರೀಮತಿ ಲಕ್ಷ್ಮೀಪ್ರಭ, ಮಕ್ಕಳಾದ ಶ್ರೀ ಗುರುಪ್ರಸಾದ್.ಎಂ ಮತ್ತು ಶ್ರೀಮತಿ ಸುಷ್ಮಾ ಮಂಜುನಾಥ್ ರವರುಗಳು ಪೌತಿ ಆಧಾರದ ಮೇಲೆ ಜಂಟಿಯಾಗಿ ವರ್ಗಾಯಿಸಿ ವರ್ಗಾವಣೆ/ಕ್ರಯಪತ್ರವನ್ನು ಕೋರಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ನಾಚನಹಳ್ಳಿ 2ನೇ ಹಂತ ಬಡಾವಣೆಯ ನಿವೇಶನ ಸಂಖ್ಯೆ–586 ಅಳತೆ 35 X 50 ಅಡಿಗಳ ನಿವೇಶನವನ್ನು #317, 6ನೇ ಮೇನ್, ಕಲ್ಯಾಣನಗರ, ಹೆಚ್.ಬಿ.ಆರ್. ಲೇಔಟ್, ಬೆಂಗಳೂರು ಇಲ್ಲಿ ವಾಸಿಸುವ ಶ್ರೀಮತಿ ಲಕ್ಷ್ಮಿ ಪ್ರಭ ರವರ ಹೆಸರಿಗೆ ನಿವೇಶನ ಪೌತಿ ಆಧಾರದ ಮೇಲೆ ಜಂಟಿಯಾಗಿ ವರ್ಗಾವಣೆ ಮಾಡಿ ಕ್ರಯಪತ್ರ ನೀಡಲು ಯಾರಿಂದಾದರೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ/ತಕರಾರು ಸಲ್ಲಿಸುವುದು. ನಿಗದಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಅರ್ಜಿದಾರರ ಮನವಿ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಹಿ/– ವಿಶೇಷ ತಹಶೀಲ್ದಾರ್
ವಲಯ ಕಛೇರಿ–1
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

### ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.


ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು - 570 005

ಸಂಖ್ಯೆ:ಮೈಅಪ್ರಾನಯೋಶಾ:ಭೂಉಬ:ನಯೋ–1:E-40811:2025–26 ದಿನಾಂಕ: 26–12–2015

**ಸಾರ್ವಜನಿಕ ಪ್ರಕಟಣೆ**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕಳಸ್ತವಾಡಿ ಗ್ರಾಮದ ಸಂ.ನಂ.35/1, 35/2ಎ, 35/2ಬಿ, 35/3, 35/4, 36/2 36/3 & 36/5 ರ ಒಟ್ಟು 05 ಎಕರೆ 22 ಗುಂಟೆ ವಿಸ್ತೀರ್ಣದ ಜಮೀನನ್ನು ಕೆ.ಟಿ.ಸಿ.ಪಿ. ಕಾಯ್ದೆ 1961 ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಪ್ರಶಾಂತ್.ಜಿ.ಎನ್ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನುಗಳಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು ಮತ್ತು ಮಧ್ಯಮ ವರ್ಗದವರಿಗೆ ಹಾಗೂ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿ ಹೊಂದುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಅಭಿವೃದ್ಧಿ ಪ್ರಾಧಿಕಾರ, ಮೈಸೂರು–570005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN




land in Question

ಸಹಿ/– ನಗರ ಯೋಜಕ ಸದಸ್ಯರು
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

### ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಸಂಖ್ಯೆ:ಮೈ.ಅ.ಪ್ರಾ/ಹೊ.ಬ/ಪಿ.ಆರ್.01/2025–26 ದಿನಾಂಕ: 30.12.2025

**ಪ್ರಕಟಣೆ**

ಮೈಸೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ–2024ರ ಕಲಂ 40 ಮತ್ತು 41 ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಭೂಸ್ವಾಧೀನಕ್ಕೆ ನಿವೇಶನಗಳ ಹಂಚಿಕೆ) (ತಿದ್ದುಪಡಿ) ನಿಯಮಗಳು–2015 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ : ಯು.ಡಿ.ಡಿ/08/ಬಿ.ಟಿ.ಪಿ/2014, ದಿನಾಂಕ : 11.02.2015ರಂತೆ ಶೇಕಡಾ 50:50ರ ಅನುಪಾತದಲ್ಲಿ ರೈತರ ಸಹಭಾಗಿತ್ವದೊಂದಿಗೆ ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲು ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಉದ್ದೇಶಿಸಿದ್ದು, ವಸತಿ ಯೋಜನೆಗೆ ಭೂಮಿ ನೀಡಿದ ಭೂಮಾಲೀಕರಿಗೆ ಯಾವುದೇ ಹಣ ಹೂಡಿಕೆ ಇಲ್ಲದೇ ಶೇಕಡಾ 50% ರಷ್ಟು ಅಭಿವೃದ್ಧಿ ಪಡಿಸಿದ ನಿವೇಶನಗಳನ್ನು ನೀಡಲಾಗುವುದು ಅಂದರೆ (ರಸ್ತೆ, ಪಾರ್ಕ್, ಸಿ.ಎ ಕಳೆದು) ಅಭಿವೃದ್ಧಿಪಡಿಸಲಾದ ವಸತಿ ವಿನ್ಯಾಸದಲ್ಲಿ ಲಭಿಸುವ ನಿವೇಶನಗಳಲ್ಲಿ ಭೂಮಾಲೀಕರ ಪಾಲು ಶೇಕಡಾ 50% ಹಾಗೂ ಪ್ರಾಧಿಕಾರದ ಪಾಲು ಶೇಕಡಾ 50% ಆಗಿರುತ್ತದೆ. ವಸತಿ ವಿನ್ಯಾಸ ಅಭಿವೃದ್ಧಿ ಪಡಿಸುವ ಸಂಪೂರ್ಣ ಜವಾಬ್ದಾರಿ ಪ್ರಾಧಿಕಾರದ್ದೆ ಆಗಿರುತ್ತದೆ (ಡಾಂಬರ್ ರಸ್ತೆ, ಚರಂಡಿ, ವಿದ್ಯುತ್ ಸಂಪರ್ಕ, ಯು.ಜಿ.ಡಿ, ಉದ್ಯಾನವನ, ನೀರು ಸರಬರಾಜು ವ್ಯವಸ್ಥೆಯನ್ನು ಕಲ್ಪಿಸುವುದು) ಸದರಿ ವಸತಿ ಯೋಜನೆಯಿಂದ ಭೂಮಾಲೀಕರು ಹೆಚ್ಚಿನ ಲಾಭ ಪಡೆಯಬಹುದಾಗಿದ್ದು, ಎಲ್ಲಾ ಮೂಲಭೂತ ಸೌಕರ್ಯಗಳ ನ್ನೊಳಗೊಂಡ ಸುಂದರ ಹಾಗೂ ಸುಸಜ್ಜಿತ ವಸತಿ ಬಡಾವಣೆಯನ್ನು ಪ್ರಾಧಿಕಾರದಿಂದ ಅಭಿವೃದ್ಧಿ ಪಡಿಸಲಾಗುವುದು.

**ಹೊಸ ಬಡಾವಣೆ ನಿರ್ಮಾಣ ಸಂಬಂಧ ಉದ್ದೇಶಿಸಿರುವ ಜಮೀನುಗಳ (ಅಂದಾಜು) ವಿವರ**
**ಮೈಸೂರು ತಾಲ್ಲೂಕು, ಇಲವಾಲ ಹೋಬಳಿ.**

1. **ನಾಗವಾಲ ಗ್ರಾಮದ ಸ.ನಂ.**136, 137, 139, 150, 151, 152, 153, 162, 163, 335, 336.
2. **ಬೊಮ್ಮೇನಹಳ್ಳಿ ಗ್ರಾಮದ ಸ.ನಂ.**117, 119, 120, 121, 122, 123, 124, 125, 126, 127, 128, 129, 130, 131, 132, 133, 134, 135, 136, 137, 138, 139, 140, 141, 142, 143, 144, 145, 146, 147, 148, 149, 150, 151, 152, 153, 154, 155, 156, 157, 158, 159, 205, 229.
3. **ಕಮರಹಳ್ಳಿ ಗ್ರಾಮದ ಸ.ನಂ.**10, 16, 17, 18, 19, 58, 59, 64, 65, 66, 67, 68, 69, 70, 71, 72, 73, 74, 75, 76, 77, 78, 79, 80, 81, 82, 83, 89, 90, 91 92, 93.
4. **ದೊಡ್ಡಮಾರಗೌಡನಹಳ್ಳಿ ಗ್ರಾಮದ ಸ.ನಂ.** 317.

ಮೇಲ್ಕಂಡ ಜಮೀನುಗಳ ಭೂಮಾಲೀಕರುಗಳು ಶೇ. 50:50ರ ಅನುಪಾತದ ವಸತಿ ಯೋಜನೆಗೆ ಒಪ್ಪಿಗೆ ಪತ್ರವನ್ನು ನೀಡಲು ಹಾಗೂ ಗ್ರಾಮದ ಇತರೆ ಜಮೀನುಗಳ ಆಸಕ್ತ ಭೂಮಾಲೀಕರು ತಮ್ಮ ಸಹಮತಿ/ಒಪ್ಪಿಗೆ ಪತ್ರವನ್ನು ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ನೀಡುವಂತೆ ತಿಳಿಸಲಾಗಿದೆ.

(ಹೆಚ್ಚಿನ ಮಾಹಿತಿಗಾಗಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು ಭೂಸ್ವಾಧೀನ ಶಾಖೆ (ಹೊಸ ಬಡಾವಣೆ ರಚನೆ) 2ನೇ ಮಹಡಿ, ಕೊಠಡಿ ಸಂಖ್ಯೆ '16A', ಮೈಸೂರು ಅಭಿವೃದ್ಧಿ, ಪ್ರಾಧಿಕಾರ ಜೆ.ಎಲ್.ಬಿ ರಸ್ತೆ, ಮೈಸೂರು ಇಲ್ಲಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದಾಗಿರುತ್ತದೆ).

ಸಹಿ/–
ಆಯುಕ್ತರು
ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

DIPR/MYS/KAVITA/1442/2025-26



### ಮೈಸೂರು ಮಿತ್ರ 46
**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು